ಅಮಲ—ಅವರು ಹೊರಗೆಬರುವುದಿಲ್ಲವೆ?

ಮಾಧವ—ಇಲ್ಲ. ಹೇಗೆಬಂದಾರು? ರಾತ್ರಿಯಗಲೆಲ್ಲಾ ಪುಸ್ತಕಗಳನ್ನು ಓದುತ್ತಲೂ ಬರೆಯುತ್ತಲೂ ಇರುತ್ತಾರೆ ಅವರಿಗೆ ಮೈಚಿನ ಯೋಚನೆಯೂ ಇಲ್ಲ ಸಗು! ನೀನೂ, ದೊಡ್ಡವನಾದಮೇಲೆ ವಿದ್ವಾಂಸನಾಗುತ್ತೀಯೆ ಆಮೇಲೆ ನೀನೂ ಪಸೆಯಲ್ಲಿಯೇ ಇರುತ್ತೀಯೆ, ದೊಡ್ಡ ಪುಸ್ತಕಗಳನ್ನು ಓದುತ್ತೀಯೆ, ಜನರು ನಿನ್ನನ್ನು ನೋಡಿ ಆಶ್ಚರ್ಯವೆಂದು ಹೇಳುತ್ತಾರೆ

ಅಮಲ—ಬೇಡ! ಬೇಡ! ಚಿಕ್ಕನಸ್ಸು ನಿನ್ನಕಾಲಿಗೆ ಬಿದ್ದುಬೇಡುತ್ತೇನೆ ನಾನು ವಿದ್ವಾಂಸನಾಗಲು ನನಗೆ ಇಷ್ಟವಿಲ್ಲ.

ಮಾಧವ—ನೀನು ವಿದ್ವಾಂಸನಾಗಿದ್ದರೆ ನನಗೆ ಎಷ್ಟೋ ಅದಾಯ ಬರುತ್ತೆ.

ಅಮಲ—ನಾನು ಹೊರಗೆಹೋಗಿ ಎಲ್ಲವನ್ನೂ ನೋಡಲು ಇಚ್ಛಿಸುತ್ತೇನೆ [ಸೂಚಿಸಿ]

"ನಮ್ಮವಾದಿ"

ವಾರ್ಷಿಕ ಹಂದಾ—ಸ್ಥಳಿದವರಿಗೆ 8 ಆಣೆ. ವರಸ್ಥರಿದವರಿಗೆ ರೂ. 1 ಆಣೆ ೦

ಜಾತ್ಕೀದಾರರಿಗೆ.—ದೇಶೋನ್ನತಿಗೆ ಸಂಬಂಧಪಟ್ಟ ಜಾತ್ಕಿಗಳೆಲ್ಲವೂ ಪ್ರಕಟಿಸಲ್ಪಡುವುವು. ಇತರ ವಿಷಯಗಳನ್ನು ಒಲೆದು ತಿಳಿಯಬಹುದು.

ಮ್ಯಾನೇಜರು, "ನಮ್ಮವಾದಿ," ಮೈಸೂರು.

TO ADVERTISERS.

Advertisers are requested to note that *only* this page is intended for Advertisements. Further they should be aware that applications are dealt with according to *Priority* Hence Register early. After the space is filled up, no advertisements are received

Printed and Published by Mr. B. V. Narasimha Iyengar at the Royal Press, Mysore, for the Editor & Proprietor

Regd. No M 1299.

ಪೆಟ್ಟಿ ಪ್ರತಿ 3 ಪೈ.

SATYAVADI

ರಾಜಕೀಯ, ಸಾಮಾಜಿಕ, ಮತವಿಚಾರ, ಭಾಷಾಭಿವೃದ್ಧಿ ಮುಂತಾದ ವಿಷಯಗಳನ್ನೊಳಗೊಂಡಿರುವ

"ಸತ್ಯವಾದಿ" ವಾರಪತ್ರಿಕೆ

ವಾರ್ಷಿಕ ಚಂದಾ 0—8—0 | ಪ್ರತಿ ಮಂಗಳವಾರ ಪ್ರಕಟಿಸಲ್ಪಡುವುದು. | ಅಂಚೆಪೆಟ್ಟಿ ಸಹ 1—6—0.

ಸಂಪುಟ I | ಮಂಗಳವಾರ 9ನೇ ಅಕ್ಟೋಬರ್, 1917 | ಸಂಚಿಕೆ 4

ಸೂನೃತಂನರ್ಮತಾರ್ಥಾಭ್ಯಾರ್ಥ ನಿಶ್ಚಿತಜ್ಞಾನಸೋಭಿತಮ್ |
ಭೂಷಣಂ ಸರ್ವವಿಜನಾಂ ಅಭ್ಯೇಪಕುಲಜೋಷಿತಾಂ ||
ಗೋಭಿರ್ವಿಪ್ರೈರ್ವೃಷವೇದೈಶ್ಚ ಸತೀಭಿರ್ವಾದಭಿಃ |
ಅಲುಬ್ಧೈರ್ದಾನಶೂರೈಶ್ಚ ಸಪ್ತಭಿರ್ಧಾರ್ಯತೇಮಹೀ ||

ಶ್ರೀ ಗಣೇಶಪಟ್ಟಕಂ

ಗಜಾಸ್ಯೋತ್ಪತ್ತಿತಾಮುನೇತ್ಯ
ಯೋ ಬಾಲಾನಪ್ಪಾಹರೆಯುವಿರ್ಯಾಃ ||
ಲೋಕತ್ರಯೀಂ ಸ್ಥಾಪಯತಿ ಸ್ವರಾಜ್ಯಂ
ತಂ ತ್ರೈಗಣೇಶಂ ವಿರಾಜನಮಾಮಿ ||೧||

ಬೀಜಾನು ಮೈತ್ಯೇನು ನಮೋಸ್ತುಮೈನ
ನಿರ್ವಾಸ್ಯಕಾರಿಕ್ಷ ಗುಸ್ಯೋರ್ವಿಪ್ಪಂ |
ವಿಘ್ನೋತಿಯಸ್ಯ ಸಮ್ಯರಾಜ್ಯಂ
ತಂ ತ್ರೈಗಣೇಶಂ ವಿರಾಜನಮಾಮಿ ||೨||

ಸರ್ವೇಷು ಕಾರ್ಯೇಷು ಜಿತಿರ್ಗತೇಷು
ಯಾತ್ಯಗ್ರಪೂಜಾಮ್ಯುಚಿತಂ ಸ್ವರಾಜ್ಯಂ ||
ಭೂತಭೃದ್ಭಾವಿ ಸಿದ್ಧಮೇನ
ತಂ ತ್ರೈಗಣೇಶಂ ವಿರಾಜನಮಾಮಿ ||೩||

ಸಮುದ್ಯತಸ್ತಂ ಮಿಳು ಸಿದ್ಧಕಂದ
ಸ್ಮೃತಾನನಾಸಂತತ ಮಾಂಗಲ್ಯೈಃ ||
ಯಸ್ಯಸ್ವರಾಜ್ಯೇ ವಿಪದಾತಿನಸ್ಯಾಂ
ತಂ ತ್ರೈಗಣೇಶಂ ವಿರಾಜನಮಾಮಿ ||೪||

ದುರ್ಮುಖ್ಯನಾಃ ಸುಖಮುನ್ಮಿತಿಮಾಂ
ವಿದ್ಯಾಃ ಕಲಾಃ ಸಮ್ಯಗಾಪದಸ್ಯ |
ಯಸ್ಯಸ್ವರಾಜ್ಯೇ ವಲಸ್ತುನಸ್ಯಾಂ
ತಂ ತ್ರೈಗಣೇಶಂ ವಿರಾಜನಮಾಮಿ ||೫||

ಪಾಸ್ಯಂ ಮುಖಾಬ್ಜೇ ಹೃದಿಯರ್ಚಲಾಸ್ಯಂ
ಯದ್ಧಿಂಬಮೇ ಪಾಣಿತಲಾಚ ನಿಧ್ಯಂ ||
ದವಾಸಿಮೋಭಕ್ತಿಜುಷಾಂ ಸ್ವರಾಜ್ಯೇ
ತಂ ತ್ರೈಗಣೇಶಂ ವಿರಾಜನಮಾಮಿ ||೬||

|| ಸ್ವರಾಜ್ಯಮಿತ್ಯೇವ ನಿಸರ್ಗನಿಷ್ಠೇ
ಧರ್ಮಾಸ್ತಿತಾ ರಕ್ಷತಿಸರ್ವಯತ್ನೈಃ" ||
ಏವಂವಿಧಾನ್ ಪ್ರೇರಯತೀಃ ಸದಾಯಂ—
ತ್ರೈಗಣೇಶಂ ವಿರಾಜನಮಾಮಿ

ಕೇಸರಿ.

Open Letter.

ಪ್ರಜಾಪ್ರತಿನಿಧಿ ಸಭಾಸದರ ಸನ್ಮಾನಯೆಲ್ಲಿ-

ಮಹಾಶಯರೇ!

ಪ್ರಜಾಪ್ರತಿನಿಧಿ ಸಭೆಯು ಪ್ರಾರಂಭವಾಗಿ ೫ ಸಂವತ್ಸರಗಳಾದುವು. ಅನೇಕ ದಿವಾನರಿಗಿಂದಿಗೂ ಕಳೆದುಹೋದುವು. ಸಾವಿರಾರು ಹೊಸ ಪ್ರಜಾ ಪ್ರತಿನಿಧಿಗಳೂ ಬದಲಾಯಿಸಲ್ಪಟ್ಟರು. ಆದರೂ ಪ್ರಜಾಸೌಖ್ಯವೆ ಹೆಚ್ಚಿದೆಲ್ಲ. ಅವುದು ಪ್ರತಿನಿಧಿಸಭೆಯ ಮುಖ್ಯೋದ್ದೇಶವೋ, ಅವುದನ್ನು ಮಾಡಿದರೆ ಪ್ರಜಾಸೌಖ್ಯವುಂಟಾಗುವುದೋ, ಅವುದರಿಂದ ಜನಾಂಗವು ಉನ್ನತಿಯನ್ನೈದಬಹುದೋ, ಅವುದಕ್ಕೆ ಸಲಹೆಯನ್ನೀಯಬೇಕೊ, ಅವುದರ ನೆನೆಯಿಂದ ನಾಗರಿಕತೆಯುಂಟಾಗುವುದೊ, ಅವುದರ ವಿಷಯವಾಗಿ ಚರ್ಚಿಸುವುದಬೇಕೋ, ಅವುದರಲ್ಲಿ ಅನೇಕಫಲವುಂಟೊ ಅಂತಹ ಕಾರ್ಯವನ್ನು ಕೈಕೊಂಡಂತೆ ಕಾಣಲಿಲ್ಲ. ನಿಮ್ಮ ಕಾರ್ಯೋದ್ದೇಶವು ಪ್ರಜಾಸೌಕರ್ಯಕ್ಕೆಂದೇ ಭಾವಿಸುವೆವೆ ಅದರಿಂದುವರೆಗೆ ಆಗಿರುವ ಫಲವೇನು? ವರ್ಷೇ ವರ್ಷೇ ನೀವು ಪ್ರಜೆಗಳ ಪ್ರಯೋಜನವೃದ್ಧಿಗಾಗಿ ಚರ್ಚಿಸಿದ ವಿಷಯಗಳೆಷ್ಟು? ಸರಕಾರದಾರ ಸಮ್ಮತಿಯಿಂದ ನಿಮಗಾದ ಸಹಾಯವು ಸಿಕ್ಕಿ ಅವರಿಂದ ಆಜ್ಞಾರೂಪಕ್ಕೆಯಲ್ಲಿರುವ ವಿಷಯಗಳೆಷ್ಟು? ಸೂರಕ್ಕೆ ಒಂದು, ಎರಡು ಅಥವಾ ಮೂರು ಇರಬಹುದೇ? ಅದರಲ್ಲಿಯೂ ಪ್ರಜೆಗಳಿಗೆ ಪ್ರಯೋಜನೀಯವಾದುದೆಷ್ಟು? ಅನವಶ್ಯವಾದ ವಿಷಯಗಳ ಪ್ರಶ್ನೆಯಿಂದಲೂ ಅದಕ್ಕೆ ಸರಕಾರದ ವರ—'ಈ ವಿಷಯದಲ್ಲಿ ಆಲೋಚಿಸುತ್ತೇವೆ,' 'ಗುರುತುಮಾಡಿಕೊಂಡಿದೆ,' 'ಮಾಹಿತಿಕೇಳಿಯಬಹುದು,' 'ಕೂಡಲೇ ಆಗುಕೊಲಾಗಬಹುದು,' 'ಪ್ರತ್ಯೇಕದಲ್ಲಿ ನಡೆಯಲಾರದೆಂದು ತೋರುತ್ತದೆ,' ಇವಾದಿಯಾದ ಉತ್ತರಗಳಿಂದಲೂ ಪ್ರಜೆಗಳಿಗೆ ಬಂದ ಭಾಗ್ಯವೇನು?

ಪ್ರಜಾಪ್ರತಿನಿಧಿಗಳಾಗಬೇಕೆಂದು ಆಸೆಯಿಂದ ಅಧಿಕಾರಿಗಳಿಗೆ ಆಶೆತೋರಿಸಿ, ಗ್ರಾಮಸ್ಥರನ್ನು ನಯಭಯಗಳಿಂದ ವಶಪಡಿಸಿಕೊಂಡು ಬೇಗೋ ಸಭೆಕರಾಗಿ ನಿಯಮಿಸಲ್ಪಟ್ಟು, ಸಭೆಯಲ್ಲಿ ಮಾತನಾಡಲಾರದೆ ಮೂಕರಂತೆ ಕುಳಿತಿದ್ದು, ಸಭೆಯು ಮುಗಿದ ಮೇಲೆ ಮನೆಗೆ ಬಂದು, ಸಭೆಯಲ್ಲಿ ತಾವೇ ಎಲ್ಲರಿಂದಧಿಕವಾದ ಧೈರ್ಯದಿಂದಲೂ, ವಾಕ್ಚತುರತೆಯಿಂದಲೂ ಹಲವು ವಿಷಯಗಳನ್ನು ಚರ್ಚಿಸಿದೆಂತಲೂ, ಮೀರಿದ ಮರ್ಯಾದೆಯನ್ನು ಹೊಂದಿ ನೆಂತಲೂ ಪ್ರಜಾಪ್ರತಿನಿಧಿ ಸಭಾಸದರಾಗುವುದಕ್ಕೂ ಪುಣ್ಯಸ್ತ್ರೀಯಿಂದ ಬೇಕಂತಲೂ, ಸಭೆಗೆ ಹೋಗಿ ಬಂದ ಮಾತ್ರದಿಂದಲೇ ಕೃತಾರ್ಥರಾದೆನೆಂತಲೂ ಅನಿಸಿಲ್ಲದ ಜನಮೊತನೆಯೂ, ನೆಂಪಿನಿಶ್ಚಯೊನೆಯೂ ಮನಸ್ಸೇ ಮಾತನಾಡಿಕೊಂಡು ಮತಿಹೀನರಾಗಿ ಮೈಮರೆತ ಹಲವರನ್ನು ಕಣ್ಣಾರೆ ಕಂಡು ಕನಿಕರಗುತವಿಂದ ಕಾತರಗೊಂಡಿರುವೆವು. ಎಂತಹ ಸ್ವಾರ್ಥತೆ!

ತಪನನ ತಾಪದಿಂದ ತಪಿಸುತ್ತಿದ್ದರೂ ತಮ್ಮ ನೆರಳುಗಳಿಂದ ಅನ್ಯರನ್ನು ತೃಪ್ತಿಗೊಳಿಸುವ ತರುಗಳಿಗಿಂತಲೂ, ಸ್ವಾರ್ಥಪರನಾದ ಮಾನವನ ಜೀವಿತವು ನಿಷ್ಫಲ! ಅಂತಹ ಸ್ವಾರ್ಥಪರತೆಯನ್ನು ಧಿಕ್!

ಯಾವ ಸುಪಾತ್ರನ ಆಶ್ರಯದಲ್ಲಿ ಬಹು ಜನರು ಜೀವಿಸುವರೋ ಅಂತಹನ ಜನ್ಮವು ಸಫಲವೆನಿಸುವುದು. ಧನ್ಯ! ಪರೋಪಕಾರಿನರಃ!! ಧನ್ಯಃ!!!

ಪ್ರತಿನಿಧಿಭಧೆಯಲ್ಲಿ ಪದ್ಯಾವಂತರೂ, ವಾಕ್ಚಟುಗಳೂ, ವೀರಾವೇಶಪರರೂ, ಅಂಗಿತ್ಯಾಗಿಗಳೂ, ಕುಲಮತಿಗಳೂ ಇಲ್ಲವೆಂದು ನಾವು ಹೇಳುವುದಿಲ್ಲ. ಆದರೆ ಸತ್ಯವನ್ನು ನಾವಹಿಸಿದ ನಾಥಿನುಪನರು ಮಾತ್ರ ಅತಿ ವಿರಳರೆಂದು ಹೇಳುವೆವು.

"ಸಜ್ಜನರಿಂದಾದ ಪ್ರಜಾಪ್ರತಿನಿಧಿಗಳೇ! ಪ್ರಭುಗಳ "ಸತ್ಯಮೇ ಪೋದ್ಬರಾವ್ಯಹನಮ್" ಎಂಬ ಸತ್ಯಪ್ರತಿಜ್ಞೆಯನ್ನು ಪರ್ಯಾಲೋಚಿಸಿ, ಪ್ರತಿನಿಧಿಭಧೆಯ ಮುಖ್ಯೋದ್ದೇಶವನ್ನು ತಿಳಿದುಕೊಳ್ಳಿರಿ; ಪ್ರಜೆಗಳ ವ್ಯಾರ್ಥನೆಗಳನ್ನು ಪುರಾಲಿಸುವ ಸಲುವಾಗಿ ಕಾರ್ಯವನ್ನು ಕೈಕೊಳ್ಳುವುದಕ್ಕೆ ಮುಂದೆಯೇ, ನಿಮ್ಮಲ್ಲಿಯೇ ಒಂದು ಉಪಸಭೆಯನ್ನೇರ್ಪಡಿಸಿಕೊಂಡು, ಅದರಲ್ಲಿ ಪ್ರಜಾಸೌಖ್ಯಕ್ಕತ್ಯವಶ್ಯಕವಾದ ವಿಷಯಗಳನ್ನಾರಿಸಿಕೊಳ್ಳಿರಿ; ವಿಷಯಗಳು ಕಡಿಮೆಯೆಂದು ಕೊರತೆಗೊಳ್ಳದೆ ಆ ವಿಷಯಗಳನ್ನೇ ಪ್ರತಿ ನಿಧಿಭಧೆಯಲ್ಲಿ ಚರ್ಚಿಸಿರಿ; ಒಂದೇ ವಿಷಯವನ್ನು ಚಿರಕಾಲ ಚರ್ಚಿಸುವುದನ್ನು ನಿಲ್ಲಿಸಿ, ತಡವಿಲ್ಲದೆ ತೀರ್ಪನ್ನು ಹೊಂದಿರಿ." ಹೀಗೆ ಮಾಡುವುದರಿಂದ ಪ್ರತಿನಿಧಿಭಧೆಯ ಮುಖ್ಯೋದ್ದೇಶವನ್ನು ನೆನೆಸಿರಿಸುವಿ; ಪ್ರಭುಗಳ ಪ್ರತಿಜ್ಞೆಯನ್ನು ಪರಿಪಾಲಿಸಿ ಧನ್ಯತೆಯನ್ನು ಪ್ರದರ್ಶಿಸುವಿರಿ; ಪ್ರಜೆಗಳ ಪ್ರೀತಿಗೆ ಪಾತ್ರರಾಗುವಿರಿ; ಸ್ವಕಾರ್ಯ, ಸ್ವಾಮಿಕಾರ್ಯ, ಪರೋಪಕಾರ ಕಾರ್ಯಗಳಿಂದ ಕೃತಕೃತ್ಯರಾಗಿ ವರಮಾನಂದವನ್ನು ಪಡೆಯುವಿರೆಂದು ಹೇಳಿ ಪ್ರಕೃತಕ್ಕೆ ವಿರಮಿಸುವೆವು.

ವಿದ್ಯಾರ್ಥಿಗಳ ವಿಜ್ಞಾಪನಕ್ಕೆ ಪ್ರತಿ.

ವಿದ್ಯಾರ್ಥಿಯೆಂದರೇನು? ವಿದ್ಯಾರ್ಥಿಯು ಎಂತಹ ವಿದ್ಯೆಯನ್ನಭ್ಯಸಿಸುವನು? ಆದನ್ನು ಸಫಲಗೊಳಿಸುವುದು ಹೇಗೆ? ಎಂಬೀ ಪ್ರಶ್ನೆಗಳು ಈಚೀಚೆಗೆ ಪಲು ಕೆಲವರಲ್ಲಿ ತಲೆದೋರಿ ಸಮಾಲೋಚನೆಗಳಾಗುತ್ತಿರುವುವು. ಈ ವಿಷಯದಲ್ಲಿ ನನಗೆ ತೋರಿದ ಒಂದೆರಡು ವಿಷಯಗಳನ್ನು ಕುರುಪು ಇಲ್ಲಿ ಪ್ರಸ್ತಾಪಿಸುವೆವು. ವಿದ್ಯಾರ್ಥಿಗಳು ಗ್ರಂಥಜ್ಞಾನಸಂಗಡಿಂದಲೂ, ಗುರು ಸನೆಂಗಡಿಂದಲೂ ಜ್ಞಾನಾರ್ಜನೆ ಮಾಡಕತ್ತಕ್ಕವರಾಗಿರುವರು. ಅವರಿಗೆ ಐಹಿಕಾಮುಷ್ಮಿಕ ಸೌಖ್ಯಸಾಧಕಗಳಾದ ವಿಷಯಗಳನ್ನು ಕಲಿಸಬೇಕಾದುದು ಗ್ರಂಥಕಾರರಿಗೂ, ಉಪಾಧ್ಯಾಯರಿಗೂ, ಅವರ್ಕರ್ತವ್ಯಗಳಾಗಿರುವುವು ಈ ಸಂಗತಿಯನ್ನು ಪಠ್ಯಪುಸ್ತಕನಿರ್ಧಾರಕ ಸಮಿತಿಯವರೂ (Text Book Committee) ಅವರ ಮೇಲ್ಪಟ್ಟ ವಿದ್ಯಾಶಾಖಾಧಿಕಾರಿಗಳೂ ಗಮನಿಟ್ಟು ದೋಗ್ಯರೀತಿಯಲ್ಲಿ ನಡೆಯಿಸಬೇಕಾದುದು ಅವರ ಕರ್ತವ್ಯವಾಗಿರುವುದು. ಹೀಗಿರುವಲ್ಲಿ ನಮ್ಮ ಸಂಸ್ಥಾನದ ವಿದ್ಯಾರ್ಥಿಗಳ ವಿಧಿವಶ್ಯತೆಯು ಹೇಗಾಗಿರುವುದೆಂಬುದನ್ನು ಪರ್ಯಾಲೋಚಿಸಿದರೆ ಅಸ್ವರ್ಧನಾಮ ಧಾರಿಗಳಾದ ವಿದ್ಯಾರ್ಥಿಗಳಿಗೂ, ಅವರ ಹಿತಚಿಂತಕರಾದ ಉಪಾಧ್ಯಾಯರಿಗೂ, ಪೋಷಕಾಧ್ಯಯನಸ್ಥಳವ ಪ್ರತಿಪೊಟ್ಟ ಕನ್ನಡಿಗರಿಗೂ ದುಃಖವುಂಟಾಗದಿರದು. ಪಠ್ಯಪುಸ್ತಕವೆಂದು ನಿರ್ಧಾರಿತವಾದ ಪುಸ್ತಕದಿಂದ ಈಗ ಎಷ್ಟುಮಟ್ಟಿಗೆ ಫಲವಾಗುತ್ತಿರೆ ಎಂಬ ಪ್ರಶ್ನೆಯನ್ನು ಯಾರಾದರೂ ಕೇಳಿದರೆ ಗ್ರಂಥಪ್ರಚಾರಕರಿಗೆ ಆಧೋತ್ಪತ್ತಿಯಾಗುತ್ತಿರುವುದೊಂದೇ ಫಲ ಎಂಬ ಉತ್ತರವನ್ನು ಕೂಡಬೇಕಾಗಿರುವುದು. ಕೆಲದಿನಗಳ ಹಿಂದೆ 'ವೈಶಾಖಾಂತ ಪತ್ರಿಕೆ' "ಮೈಸೂರು ಸ್ಟಾರ್" ಎಂಬ ಪತ್ರಿಕೆಗಳಲ್ಲಿ ಒಬ್ಬ ಮಿತ್ರೋಪಾರರು "ಮಾಡಿದ್ದುಣ್ಣೋ ಮಹರಾಯ" ಎಂಬ ಪುಸ್ತಕವನ್ನು ಸತ್ಯವುಸ್ಕಕವಾಗಿಟ್ಟುದು ಅನುಚಿತವೆಂದು ಅಭಿಪ್ರಾಯಪಟ್ಟಿರುವುದು ಅನುಚಿತವೆಂದು ಅಭಿಪ್ರಾಯಪಟ್ಟಿರುವುದು. ಆದಕ್ಕೆ ಯಾರೂ ಗಮನವನ್ನೇ ಕೊಟ್ಟಂತೆ ತೋರಲಿಲ್ಲ. ಅರಣ್ಯರೋದನವೇ ಆಗಿರಬಹುದೆ? ಹಾಗಾಗಿದ್ದರೆ ಅದನ್ನೇ ಈಗ ನಾವು "ವಿದ್ಯಾರ್ಥಿಗಳ ವಿಧಿವಶ್ಯತೆ" ಯೆಂದು ಉಲ್ಲೇಖಿಸುವುದು. ಈ ವರ್ಷ ಇಂಗ್ಲೀಷ್ IV ಫಾರಂ ವಿದ್ಯಾರ್ಥಿಗಳಿಗೆ "ರಮಾನಂದ" ಎಂಬ ಗ್ರಂಥವೊಂದು ಪಠ್ಯಪುಸ್ತಕವಾಗಿ ಇಟ್ಟಿದೆ ಇದರ ವಿಷಯವನ್ನು ಸ್ವಲ್ಪ ಸಮಾಲೋಚಿಸೋಣ.

ಗ್ರಂಥದಲ್ಲಿ ರವಿವರ್ಮನೆಂಬ ದುರ್ಮಾರ್ಗಸ್ಥನು ರಮಾನಂದನೆಂಬ ಸಾಧು ವಾದ ಸಹೋದರನಲ್ಲಿ ಮಾತ್ಸರ್ಯವನ್ನು ಬೆಳೆಯಿಸಿ ಅವನಿಗೆ ಅಪವಾದವನ್ನು ಹೊರಿಸಿ ಅವನನ್ನು ಕೊಲ್ಲಿಸುವುದಕ್ಕೆ ಯತ್ನಿಸಿ ಕ್ಷೇಮದರ್ಶಿ ಯೆಂಬುವನ ವಾಕ್ಚಾತುರ್ಯದಿಂದ ಹತಾಶನಾದ ವಿಷಯವು ಉಕ್ತವಾಗಿದೆ. ಇಬ್ಬರೂ ಬಿಕ್ಷುವಯಸ್ಸಿನ ವಿದ್ಯಾರ್ಥಿಗಳು. ಇಬ್ಬರೂ ಬ್ರಾಹ್ಮಣಕುಮಾರರಿಗಳು. ಇವರೀಕಥೆಗೋಸುಗ ಹಲು ಪಾತ್ರಗಳು ಪ್ರವೇಶಮಾಡಿವೆ. ಯಾತಿನಿಯಮನನ್ನುಲ್ಲಂಘಿಸಿದ ಮೂರು ತಾಲ್ಲೂಕು ಪದ್ಯಗಳ ವಿನಾ ಹಲವು ಪದ್ಯಗಳು ಧಂಪಸ್ಸಾರ ಪದ್ಯ ಸಾರಗಳಿಂದಲೇ ಆಯಲ್ಪಟ್ಟು ಅಲ್ಲಲ್ಲಿ ತಲೆದೋರಿವೆ. ಒಟ್ಟಿನಲ್ಲಿ ನೋಡಿದರೆ ಆ ಪದ್ಯಗಳಿಗೋಸುಗವಾಗಿಯೇ ಒಂದು ಕಥೆಯನ್ನು ಕಲ್ಪಿಸಿ ಗ್ರಂಥರಚನೆ ಮಾಡಿರುವುದು ವಿಶದವಾಗದಿರದು. ಇದನ್ನು ವಿಮರ್ಶಿಸುವಾಗ ಕುದುರೆಯ ಲಾಳಕ್ಕೊಂದು ದೊರೆತುದರಿಂದ ಪ್ರಯತ್ನಪಟ್ಟು ಮತ್ತೆ ಮೂರು ಮುರುಕು ಲಾಳಗಳನ್ನೂ ಒಂದು ಕುಂಟುಕುದುರೆಯನ್ನೂ ಕೊಂಡುಕೊಂಡ ಕೋಮಟಿಯ ಕಥೆಯು ನೆನಪಿಗೆ ಬಾರದಿರದು. ಅದಿರಲಿ, ಪ್ರಕೃತ ಗ್ರಂಥದ ಸ್ವಭಾವವನ್ನು ಪರ್ಯಾಲೋಚಿಸೋಣ. ಗ್ರಂಥವು ವಜನಕಾವ್ಯದ ಮಾರ್ಗವನ್ನು ಹಾರಿ ನಾಟಕಮಾರ್ಗದಲ್ಲಿ ಕಾಲಿಟ್ಟಿರಿ ಉಪನ್ಯಾಸದ ಪದ್ಧತಿಯನ್ನು ಸೇರಿ ಇವೆರಡೋ ಒಂದು ನಂದಿಗೆ ತೂರಿರುವುದು. "ನಾಟಕದವರು ನಿದ್ದೆ ಗೆಡುವುದರಿಂದ ಅಯಾಸವಾಗದಿರಲೆಂದು ಮದ್ಯ ಪಾನಮಾಡುವರು" ಎಂಬ ಹೊಸ ವಿಷಯವೊಂದು ಈ ಗ್ರಂಥವ್ಯಾಸಂಗದಿಂದ ವಿದ್ಯಾರ್ಥಿಗಳಿಗೆ ತಿಳಿದು ಬರುವುದು. ಇದನ್ನು ಗ್ರಂಥಕರ್ತೃಗಳು ಪ್ರತ್ಯಕ್ಷವಾಗಿ ಕಂಡು ಬರೆದಿರುವರೋ ಅಥವಾ ಯಾರಾದರೂ ಪಡಿಕೊಂಡುದನ್ನು ಕೇಳಿ ಬರೆದಿರುವರೋ? ತಿಳಿಯದು. "ಮಗನನ್ನು ಮದವೇರುವಂತೆ ಸರಿಪಾಡಿಸುವುದು" ಅದು ಹೇಗೋ? ಮದವೇರಿಸುವ ನಲಿವಾಟವಾವುದೋ? ಗುರುಕುಲ ವಾಸವು ಸರ್ವಾಂಗಕ್ಕೂ ಅಪ್ರತಿಹತವಾದ ಕಾಂತಿ ಕೊಡುವುದಂತೆ! ಅಂತಹ ಗುರುಗಳೂ ಅವರ ಸನ್ನಿಧಾನವೂ ಈ ಕಥಾನಕ್ಕೆ ಅಶ್ಚರ್ಯವೇ ಸರಿ. "ಪ್ರಾಯಶ್ಚಿತ್ತವನ್ನು ತೋರಿಸುವುದಂತೆ" ಮಾಡುವುದಕ್ಕೂ ತೋರಿಸುವುದಕ್ಕೂ ಭೇದವೇ ಗ್ರಂಥಕರ್ತೃಗಳಿಗೆ ಇನ್ನೂ ತಿಳಿದುಬಂದಿಲ್ಲ. ಇನ್ನೂ ಅನೇಕ ವಿಷಯಗಳು ವಿಮರ್ಶನೀಯವಾಗಿದ್ದರೂ ಇದೊಂದನ್ನೇ ಲಂಬಿಸಿ ಬರೆಯುವುದು ಬೇಸರವನ್ನುಂಟುಮಾಡೀತೆಂದು ಅಲ್ಲಲ್ಲಿ ಸಂಕ್ಷೇಪವಾಗಿ ಅಯ್ದು ವಿಮರ್ಶಿಸಿರುವೆವು. ಇಂತಹ ಗ್ರಂಥವನ್ನು ಪಠ್ಯಪುಸ್ತಕವಾಗಿಟ್ಟುದಕ್ಕೆ ಸಮಿತಿಯವರ ಉದ್ದೇಶವೇನೋ? ಸ್ತ್ರೀವಿರಚಿತವಾದ ಮಾತ್ರವೇ ಪ್ರೋತ್ಸಾಹಿಸಿರುವರೆಂದರೆ ಈಗ ಎಷ್ಟೋಮಂದಿ ಪುರುಷರು ಮನಸ್ವಯಾಗಿ ಬರೆದು ತಂತಮ್ಮ ಪತ್ನಿಯರ ಅಥವಾ ಸೋದರಿಯರ ಹೆಸರಿನಿಂದ ಪ್ರಚಾರ ಪಡಿಸಲು ಸಿದ್ಧರಾಗಿರಬಹುದು! ಅವರಿಗೆಲ್ಲ ಪ್ರೋತ್ಸಾಹಿಸಲೇಬೇಕಾಗಿತ್ತು! ಆಗ್ಗೆ ವಿದ್ಯಾರ್ಥಿಗಳ ಗತಿಯೇನಾಗಬೇಕು! ವಾಕರಕರ ವರಿಗಾಮವೇನಾಗಬೇಕು! ಸಮಿತಿಯ ನಾಮಮಾತ್ರಕರು ಗ್ರಂಥಪ್ರಚಾರಕರ ನಾಮಮಾತ್ರಕ್ಕೆ ಮರುಳಾಗಿಯೋ, ವಿಷಯಸೂಚಿಕೆಯ ವಿವರಣೆಗೆ ಮನಸೋತೋ, ನಿರ್ಧಾರಿಸಿಗೆ ಸಿಕ್ಕಿಕೊಂಡೋ, ಇಂತಹ ಗ್ರಂಥಗಳನ್ನು ಪಠ್ಯಪುಸ್ತಕವನ್ನಾಗಿ ನಿಯಮಿಸುವುದು ಸರ್ವಥಾ ಸರಿಯಲ್ಲವೆಂದು ನಾವಿಸಾರಿ ಹೇಳುವೆವಲ್ಲದೆ ಇನ್ನು ಮುಂದಾದರೂ ರಮಾನಂದನಂತಹ ಪುಸ್ತಕವನ್ನು ಪಠ್ಯಪುಸ್ತಕವನ್ನಾಗಿ ನಿಯಮಿಸದಿದ್ದರೆ ವಿದ್ಯಾರ್ಥಿಗಳಿಗೆ ಪರಮಾನಂದವುಂಟಾದೀತೆಂದು ತಿಳಿಸಿ ವಿರಮಿಸುವೆವು.

ವರ್ತಮಾನ ಮತ್ತು ಸಮಾಲೋಚನೆ

ಮುಖಾತ್ಮಗಂಟು ಮತ್ತು ರೈತ್ಕೆಗಾಡಿ :—

ಮಿಂದೂರೇರದ ರೆಲ್ಲೆಗಳಲ್ಲೆಲ್ಲಾ ಮೊರನೇ ತರಗತಿಯ ಗಾಡಿಗಳಲ್ಲಿ ಕುಳಿತು ಪ್ರಯಾಣಮಾಡುವವರು ಅನುಭವಿಸುವ ಕಷ್ಟಗಳನ್ನು ಅನ್ಯ ಅಧಿಕಾರಿಗಳಿಂದಲೂ, ತಮ್ಮ ಅನುಭವದಿಂದಲೂ, ಮತ್ತು ತಿಳಿಗಳಿಕೆಯಿಂದಲೂ ಮನಗಂಡಾಡಲು ಪೆಟ್ಟಿ ಗಂಧಿಯವರಿಗೆ ವಿಶಷ ಸಂಖ್ಯಾಂಗಿಗೂ ಸಾಧ್ಯವಿಲ್ಲ. ಇದುವರೆಗೆ ೭೬ ವರ್ಷಗಳಿಂದಲೂ ಹಿಂದೂಸ್ಥಾನದಲ್ಲಿಯೇ ಇರುವರು. ಅವರು ಈ ವರೆಗೆ ರೈಲು ಗಾಡಿಯ ಲ್ಲಿ ಪ್ರಯಾಣ ಮಾಡಿರೇ ದಾಗಲೆಲ್ಲಾ ಮೊರನೇ ತರಗತಿಯಲ್ಲಿಯೆ ಕುಳಿತು ಪ್ರಯಾಣಮಾಡಿರುವರು. ಹಿಂದೂ ಸ್ಥಾನದಲ್ಲಿರುವ ಎಲ್ಲಾ ರೈಲುಗಳಲ್ಲಿಯೂ ಕುಳಿತಿರುವರು. ಹಾಗೆ ಅವರು ಸಂಚಾರಮಾಡಿ ಕೊಣ್ಣಾರಿಸೋಡಿರುವುದರಿಂದ ಈ ವಿಷಯದಮೇಲೆ ವಿಶೇಷ ನಾಡಲು ಹೆಚ್ಚು ಉತ್ತಮಸ್ಥಿತಿಯಲ್ಲಿರುವರು. ಎಂದು ಸರಕಾರ್ರಿ ಪ್ರಿನ್ಸ್‌ಪಾಲ್ ವೂರ್‌ಕವಾಗಿ ಹೆಸರವಡಿಸಿರುವ ಪತ್ರವೊಂದರಲ್ಲಿ ಈರೀತಿ ಪ್ರಕಟಿಸಿರೆ.

ಸಾರು ದಕ್ಷಿಣ ಆಫ್ರಿಕಾದಿಂದ ಭರತಖಂಡಕ್ಕೆ ಬಂದು ೭೨ ವರ್ಷಗಳ ಮೇಲಾ ಯಿತು. ಅಂದಿನಿಂದ ನಾವು ಇಲ್ಲಿಯೇ ಇರುವೆನು ಅವರಲ್ಲಿ ಕಾಲುಭಾಗಕ್ಕಿಂತಲೂ ಹೆಚ್ಚಾಗಿ ಮೂರನೇ ತರಗತಿಯ ರೈಲುಗಾಡಿಯಲ್ಲಿ ಪ್ರಯಾಣವಾಡಿರೆಂಬೆ. ಉತ್ತರದಲ್ಲಿ ಲಾಹೂರಿನವರೆಗೂ, ದಕ್ಷಿಣದಲ್ಲಿ ಟ್ರಿಂಕಿಟಾಪಳ್ಳಿಯವರೆಗೂ, ಮತ್ತು ಪೂರ್ವಪಶ್ಚಿಮ ಕಾಂತಿಯುಂಡ ಕೆಲಕೆಲ್ಲೆಯವರೆಗೂ ಪ್ರಯಾಣ ಮಾಡಿದ್ದೇನೆ. ಮೂರನೇ ತರಗತಿಗಳಲ್ಲಿ ಕುಳಿತು ಪ್ರಯಾಣಮಾಡಿದಕ್ಕನವರ ಸ್ಥಿತಿಯನ್ನು ತಿಳಿಯಿಕೊಳ್ಳುವ ಉದ್ದೇಶದಿಂದಲೂ, ಇದನ್ನು ಇತರ ಕಾರಣಗಳಿಂದಲೂ ಮೂರನೇ ತರಗತಿ ಗಾಡಿಗಳಲ್ಲೇ ಕುಳಿತು ನನ್ನ ಕೈಲಾದ ನುಷ್ಟು ವಿ ಪರಿಶೀಲನೆಯಾಗಿ ಪರೀಕ್ಷಿಸಿರುವೆನು ಇಲ್ಲಿಯವರೆಗೆ ಸಂಚಾರವಾಗಿ ಎಲ್ಲಾ ರೈಲ್ವೆ ಏರ್ಪಾಡುಗಳನ್ನೂ ತಿಳಿಸಿಕೊಂಡಿರುವೆನು. ಬೆಲೆಬಿಟ್ಟಿ ರೈಲ್ವೆಸಂಪಾದನೆಯನ್ನು ಆಳ್ವಿಕೆಯಲ್ಲಿ ನಡೆಗೆ ಕೊಡುಬಂದಿರುವ ನ್ಯೂನಾತಿರೇಕಗಳ ವಿಷಯವಾಗಿ ಪತ್ರಿಕಾಪ್ರಸಂಗವನ್ನು ವಾಡಿರುವನು. ಆದರೆ ಸಂಖಾವತಿಯೂ ಮತ್ತು ಜನಪ್ರಿಯರೂ, ಹಾಗೆ ಬಹುಕಾಲದಿಂದಲೂ ನಂಬುಬಂದಿರುವ ಕೆಲವಸ್ಯಗಳನ್ನು—ಅವುಗಳಲ್ಲಿ ಅಸೌಕರ್ಯತೆಯ ಅಂಶವಿದ್ದಿದ್ದು ವಾದುದಾಗಿರುವುದಾದರೂ—ಸುಮ್ಮನಿರುವ ಪ್ರಯತ್ನಕಾರ್ಯದಲ್ಲಿ ಒಬ್ಬಗಾಗಿರುವುದಕ್ಕೆ ಕೆಲವು ಕಾರಣಗಳು ಇರಬಹುದೆಂದು ನನಗೆ ತೋರುತ್ತದೆ

ಈ ಸೂಚನೆಗಳನ್ನು ನಾವು ಆದರದಿಂದ ಸ್ವೀಕರಿಸುವೆವು ಅವುಗಳನ್ನು ಅನ್ಯ ದೇಶದ ವಿದ್ಯಾಂಸರೂ, ಪ್ರಮುಖರೂ ಆದ ದೇಶೀಯರೂ ಅಂತೆಯೇ ಮಾಡುವರೆಂದು ನಂಬುವೆವು.

ಈ ವಿಷಯವು ನಮ್ಮ ಮೈಸೂರು ಸಂಸ್ಥಾನಕ್ಕೂ ಒಪ್ಪುತ್ತದೆಂಬುವ ದರಲ್ಲಿ ಸಂಶಯವಿಲ್ಲವಾದರು. ಆದುದರಿಂದ ನಮ್ಮ ಮೈಸೂರು ಸರಕಾರದ ವೆರೂ ಮತ್ತು ಪ್ರಮುಖರಾದವರೂ, ಇಂತಹ ತೊಂದರೆಗಳು ಉಂಟಾಗ ದಂತೆ ೩ ನೇ ತರಗತಿಯ ರೈಲುಗಾಡಿಗಳಲ್ಲಿ ಸಂಚರಿಸುವ ಪ್ರಯಾಣಿಕರಿಗೂ ಸೌಕರ್ಯಗಳನ್ನು ಕಲ್ಪಿಸುತ್ತಾರೆಂದು ನಂಬುತ್ತೇವೆ.

ನಿರ್ಬಂಧದ ವಲಸೆಯಾಸ್ಟ್ರಿ !

೩ ನೆ ಪತ್ರಿಕೆಯ ಜಾತ್ಯಿದಾರರು ಬರೆದಿರುವುದೇನೆಂದರೆ :—

ಬಾಬು ಜೋಗೇಶಚಾಸ್ ಗುಪ್ತ B L. ಸ್ಲೀಡರ್, ಇವರ ಮಗ ಕಲ್ಕತ್ತೆಯ ಕಾಲೇಜಿನ ಉಚ್ಚತರಗತಿಯಲ್ಲಿ ಓದುತ್ತಿದ್ದ ರವೀಂದ್ರನಾದವಾಸ ಗುಪ್ತನೆಂಬ 18 ವರ್ಷ ವಯಸ್ಸಿನ ವಿದ್ಯಾರ್ಥಿಯನ್ನು, ಹೆಫೆನ್ಸ್ ಆಫ್ ಇಂಡಿಯಾ ಆಕ್ಟ್‌ಪ್ರಕಾರ ಬಂಧನದಲ್ಲಿಟ್ಟಾಗ ಈತನ ತಂದೆಯು ತನ್ನ ಮಗನನ್ನ ತಾನೇ ಎಚ್ಚರಿಕೆಯಿಂದ ನೋಡಿಕೊಳ್ಳುವುದಾಗಿ ಕೇಳಿಕೊಂಡುದರ ಮೇಲೆ ಈ ಹುಡುಗನನ್ನು ರಂಗಪುರದಲ್ಲಿದ್ದ ಅವನ ತಂದೆಯವಶಕ್ಕೇ ಬಿಟ್ಟು ಕೊಟ್ಟರು.

ಇದು ನಡೆದು ಒಂದು ವರ್ಷವಾಯಿತು. ಹುಡುಗನು ತಂದೆಯ ಸಮಾಧಾನದಲ್ಲಿಯೇ ಇದ್ದನು. ಇದಕ್ಕೆ ಕಾರ್ಯಕ್ಷೇಲ್ ಕಾಲೇಜಿಗೆ ನೇರವ ನಲು ಹಾಗು ಸರಕಾರದವರನ್ನು ಕೇಳಿಕೊಂಡುದಕ್ಕೆ ಅವ್ಯಾಕೆ ದೊರೆಯಲಿಲ್ಲ. ಇದ ಲ್ಲದೆ ಇವನು ನಮಯಸ್ಫೂರಕೂಡ ಆಟವಾಡಕೂಡದೆಂದು ಆತಂಕಪಡಿಸಿ ಪ್ಲಟ್ಟನು ಸಿ. ಐ ಡಿ (C I. D) ಅಧಿಕಾರಿಗಳೂ, ಇವನನ್ನು ಪದ್ಧತಿಕ್ರೆ ಬೆಸಿಯಲ್ಲಿಯೂ ಓದಕೂಡಿಸೆಂದೂ, ತನ್ನ ಮನೆಯ ಜನಗಳು ವಿನಾಶಾ ನುತ್ತ ಯಾರಸಂಗಡವೂ ಮಾತನಾಡಕೂಡದೆಂದೂ ಕಟ್ಟಪ್ಪಣೆ ಮಾಡಿದರು. ಪೋಧಾಯಿಯಾಗಿ ವಿದ್ಯಾರ್ಥಿಯು ಇದನ್ನೆಲ್ಲಾ ಸಹಿಸಿಕೊಂಡಿದ್ದನು. ಈಗ ಸನಾರು ೨-೩ ದಿನಗಳಿಂದ ಸುಂಕಾಗಿಯೂ, ನಿರಾಶನಾಗಿಯೂ ಇರುವಂತೆ ಕಾಣುತ್ತಿದ್ದನು. ನೊನ್ನೆ ರಾತ್ರಿ, ಸಂಪಾರಿಕ್ಕೆ ಹೊರೆಯಾಗಿ ಪೋಲೀಸಿನವರ ಉಸವ್ಯನಕ್ಕೆ ಸಿಕ್ಕ ನರಳುವ ಜೀವಿತಿಂದ ಉಪಯೋಗವೇನೆಂದು ತನ್ನ ತಾಯಿಯ ಸಂಗಡ ಯೋಚಿಸಿದನು ಬೆಳಗಾದರೆ ಈ ಸಂಕಟವಿದ್ದೇ ಇದೆ ಈ ಕಡು ಅವಮಾನೋರಯಕ್ಕೆ ಎಳುತ್ತಿದ್ದನು. ಏನ್ನ ಬೆಳಿಗಿನ 7 ಗಂಟೆಯಲ್ಲಿ ಊಟಕ್ಕೆ ಕರಾಯಿ ನೋಡಿದಾಗ, ಇವನು ಮಲಗುವ ಕೆರುಮನೆಯ ಬಾಗಿಲು ನುಜ್ಜಿತ್ತು. ಎಷ್ಟು ಕೂಗಿದರೂ ಮಾತೇ ಇಲ್ಲ ! ಬಾಗಿಲನ್ನು ಒಡೆದು ನೋಡುವಾಗ ಹುಡುಗನು ಜ್ಞಾನತಪ್ಪಿ ಬಿದ್ದಿದ್ದಾನೆ ! ಹತ್ತಿರದಲ್ಲಿ ಅಫೀಮು ನಿಶ್ಶೇಷವಾದ ಪಾಲಿನ ಪಾತ್ರೆ ಬಿದ್ದಿದೆ ! ವೈದ್ಯರು ಬಂದು ನೋಡಿದರೂ ಆಯಿತು ಮಧ್ಯಾನ್ನ ೨ ಗಂಟೆಗೆ ಪ್ರಾಣವು ಹೊರಟು ಹೋಯಿತು ! ಈತನ ತಂದೆ, ತಾಯಿ, ಸಹೋದರ, ಸಹೋದರಿಯರ ಮಾಬಿಲ್ಕೆ ವಾರವಿಲ್ಲ ! ಸಂತೆಯಬಿಂದ ಬಂಧನದಲ್ಲಿಡಲ್ಪಟ್ಟವರ ವಿಚಾರವಾಗಿ ಸಂದೇಹವನ್ನೆತ್ತಿ ಮಾಡದೆ, ಅಧಿಕಾರಿಗಳ ಪ್ರೀತಿವಾತ್ಸಲ್ಯರಾಗಬೇಕೆಂದು ಅವರಿಮಿತವಾಗಿ ಅವರವರ ಮಾತು ಕೇಳಿ ಹೀಗೆ ಮಾಡುವುದಕ್ಕಿಂತ, ಕೆಲವು ದೊಷ್ಟಮನುಷ್ಯರ ಮೂಲಕ ನಿಜಸ್ಥಿತಿಯನ್ನು ತಿಳಿದು ನಡೆಸಬೇಕೆಂದು ಜನಗಳು ಬುದ್ಧಿಕೊಂಡು ದುದಕ್ಕೆ, ಅಧಿಕಾರಿಗಳು ಕಿವಿಗೊಡದೆ ತಾತ್ಸಾರಮಾಡಿಬಿಟ್ಟರು. ಹೀಗೆ ನಿರಪರಾಧಿಗಳಾಗಿ ಯಾವ ತಪ್ಪುತಿಕ್ಕೂ ಗುರಿಯಾಗದೆ ವಿದ್ಯಾಸಂತರಾಗಿಯೂ ಮಾನಾಭಿಲಾಷಿಗಳಾಗಿಯೂ ಇರುವ ಯುವಕರು ಅತ್ಮಪತ್ಯಕ್ಕೆ ಅಧಾಗಿ ಮಾತಾಪಿತೃಗಳು ದುಃಖದಲ್ಲಿ ಮುಳುಗದಂತೆ ಆಯಿಷ್ಠಾಗದಲ್ಲೇ ಎಚ್ಚರಿಕೆ ಯಾಗಿದ್ದರೆ ಮಹೋಪಕಾರವಾಗುತ್ತಿರಲಿಲ್ಲವೆ ! ಪೋಲೀಸು ಅಧಿಕಾರಿಗಳು ಮಕ್ಕಳೊಂದಿಗೆರಾಗಿದ್ದು, ಭೂತಬಯಾ ವಕ್ಷಾತ್ತಾಪವುಳ್ಳವರಾಗಿ ಅನ್ಯರ ಮಕ್ಕಳನ್ನೂ ತಮ್ಮ ಮಕ್ಕಳಂತೆ ಭಾವಿಸಿದಲ್ಲಿ ಇಂತಹ ಅವಘಡಗಳು ಉಂಟಾ ಗುತ್ತಿರಲಿಲ್ಲವು.

ಯುದ್ಧವಾರ್ತೆ.

ಸ್ವಿಟಿಸರು ಬಿಲ್ಲಿಯಂ ವೀರಪುರುಷನಿಗೆ ಇಪ್ಪತ್ತುಂದ ಪೂರ್ವಕ್ಕೆ ಒಂದು ಮೈಲಿಯು ಪೂರ್ವಕ್ಕಾಗಿಯೂ ಆನು ಮೈಲಿ ಅಗಲವಾಗಿಯೂ ಮುಂದೆ ನುಗ್ಗಿ ಸ್ಥಳವನ್ನು ಆಕ್ರಮಿಸಿ ಕೊಂಡಿರುವರು ಇಲ್ಲಿ ಅನೇಕ ಕತ್ತುಕೊಟ್ಟಿಗಳು ಕೈಬೇಲಿಯು ಹಿಂದೆ ಹೇಳಿದಂತೆ ಕತ್ತು ಗಳು ಅಲಲ್ಲಿಯೇ ಕ್ಕಾರೆಯಾಗಿ ಕತ್ತಲೆಂಡಿರುವ ಬಲವಾದ ಕೆಲಟೆಗಳಲ್ಲಿ ಅವಿತು ಕೊಂಡಿರುವುದರಿಂದ ಬ್ರಿಟಿಷರ ಗತಿಗೆ ಕಷ್ಟವಾಗಿರುವುದು ಆದರೂ ಕಾದಕಂದ ಕಡೆಮಲ್ಲಿ ನುಗ್ಗಿ ಅವಿಗಳನ್ನು ಸ್ವಾಧೀನಪಡಿಸಿಕೊಳ್ಳುತ್ತಿರುವರು ಜರ್ಮನಿಯವರು ಫ್ರೆಂಚರ ಮೇಲೆ ಪಡೆಯನ್ ಪ್ರಾಂತ್ಯದಲ್ಲಿ ಆತ ಘೋರವಾಗಿ ಯುದ್ಧ ಮಾಡುತ್ತಿರುವರು ಅವರೊ ಕೂಡ ಸ್ಪೇಯರು ತಮ್ಮ ಫೈಯರ್, ಸ್ಟೈಯರ್, ರಕ್ತ, ಸಾಹಸಗಳಾದ ಅವರ್ಯು ತಮ್ಮ ಕಂಪಕಗಳ ಬಗೆಗೂ ಬರಗೊಡಿರದಂತೆ ಸೋರಾಡುತ್ತಿರುವರು ಈ ವ್ಯಾಪ್ತಿಯಲ್ಲಿ ಅಂತಾ ನರಾನಾ ರಿಯುದ್ಧವು ನಡೆಯುತ್ತಿರುವುದು ಕಪ್ಪಾದಲ್ಲಿನ ಗಲಾಬಯು ಇತ್ತೀ ಚಾಗಿರು ಗಿದ್ದು. ಇವೆಲ್ಲವನ್ನೂ ಕ್ರಮಕ್ಕೆ ತರುವಿಕೆಂದು ಒಂದು ಪ್ರಜಾಪ್ರತಿನಿಧಿ ಸಭೆಯನ್ನು ನಡಸ ಬೇಕೆಂದಿರುವರು ಬಣ್ಯಸ್ಥೈಸಕರು ೧೦ನಾವಟ್ಟಿಗಿದ ಪ್ರಭುವಿನ್ನ ಜರ್ಮನಿಯವರ ಮೇಲೆ ಯುದ್ಧ ವಾರಿ ಸಕ್ತಿದವನ್ನು ಕೈಬಿಡಿರುವರು ಈ ಯುದ್ಧದಲ್ಲಿ ಎರಡುಕಡೆಯವರೂ ವಿಶೇಷವಾಗಿ ಮೃತರಾದರು ತನ್ನ ಕೆಲಸಕ್ಕೆ ರಾಜೀನಾಮೆ ಕೊಟ್ಟಿದ್ದ ರಾಜಸ್ಥಾನದ ದೊಡಯನ್ನು ರಾಜಪ್ರತಿನಿಧಿಯೆಂದು ಯಾವತ್ತಿವರೂ ಸಜನನ್ನು ವಿಧಿಸಿದರು ಆತಂ ಬೌಕೆಷರ್ಡಲೆಟಿಂಗ್ ಎಂಬುವನ್ನೂ ನಾಮಪತ್ರದಲ್ಲಿದ್ದಾರೆ ಉತ್ತರ ಆಫ್ರಿಕದಲ್ಲಿ ಟರ್ಕಿ ಸೈನಿಕರು ಅರಬ್ಬಿಯನರನ್ನು ಸೇರಿಸಿಕೊಂಡಿರುವರು. ಇದನ್ನು ತಿಳಿದ ಇಟಲಿಯ ವರು ಅವರ ಮೇಲೆ ಬಿಮ್ಮ ಯುದ್ಧವಾಡಿ ಎಲ್ಲರನ್ನೂ ದಿಕ್ಕಾಪಾಲಾಗಿ ಓಡಿಸಿಬಿಟ್ಟರು

ಆಗ ಇಟಲಿಯವರಿಗೆ ಬೇಕಾದಷ್ಟು ಆಹಾರ, ಮದ್ದು, ಗುಂಡುಗಳೆಲ್ಲವೂ ಸಿಕ್ಕಿದವು ಅವೆಲ್ಲವೂ ಕೂಡ ಜರ್ಮನಿಯು ಕಂಡರಿ ಯೆಂದು ಗೊತ್ತಾಯಿತು ಪ್ರಿಟಿಷ್ ಸೈನ್ಯವು ಪಾಲಸ್ತೈನಿಗೆ ದಕ್ಷಿಣಾಫ್ರಿಂಕೆಗಳಿಂದ ಸುಗ್ಗಿ ಟರ್ಕಿಯವರ ಶೈಲುರಕ್ಷೆಯನ್ನೂ, ಒಂದು ಸಾಹುಮನ್ನೂ ಪಾಲುಮಾಡುವುದರಲ್ಲಿ ನಿರತವಾಗಿರುವಾಗ ಈ ಸಿರಿಯ ಕೆಲವು ಭಾಗಗಳಲ್ಲಿ ಯುದ್ಧಕಾಲದ ಕೆಲಸ ಕಾನೂನುಗಳನ್ನು ಜಾರಿಗೆ ತಂದಿರುವರು

ಪ್ರಿಟಿಷರ ಡ್ರಾಗ್‌ಮನ್ ಎಂಬ ದೊಡ್ಡ ಯುದ್ಧಪ ಪಡೆಗಳನ್ನು ಜರ್ಮನಿಯ ವನ ಒಂದು ಸುಮೆಂಟ್ ನಾಶಪಡಿಸಿತು ಈ ಡ್ರಾಗ್‌ಮನ್ ಎಂಬ ಒಂದು ಪಡಗು ಮೆ ೯ ಎಂದು ಗುರುತಿಸಿದ ನೀರುನಾಲಾಯಿತು. ಜರ್ಮನಿಯರ ಸುಮಾರು ಸಬ್ ಮೆರಿನ್‌ಗಳು ನಾಶವಾಯಿದವು ತಳದ ನಾವಿ ದಿಟಿಗೆ ೨೫ ದೊಡ್ಡ ನವಗುಗಳು, ೨೫ ಸ್ಲೂಪ್ಸು ಇನ್ನೂ ಕೆಲವು ದೋಣಿಗಳೂ ವಿಶ್ರಮಿಸಲಿಯನರಿಗೆ ಸಮರ್ಪಣವಾದವು ಇವುಗಳಲ್ಲದೆ ಕಂಮ ತಪ್ಪಿಸಿಕೊಂಡು ಹುಟ್ಟಿದರು. ಕಾರಣಿಕ ವಿಚಾರಣೆ ಬಹಳವಾಗಿ ನಡೆಯುತ್ತಿರುವದು ಆದರೂ ಬೇರಾಜಿಯೊಬ್ಬರು ಗೆದ್ದಲ್ಲದೆ ಯುದ್ಧವು ಮುಗಿಯುವುದಿಲ್ಲವೆಂದು ತಿಳಿದು ರಿಪಬ್ಲಿಕ್ ಜರ್ಮನಿಯವರ ಸೈನಾಕಿಕರು ಇಗ್ಲೆಂಡಿಗೆ ಹೊಪ್ಪಾಗಿ ಎದುರಿಸಿ ಸಾಮರ್ಥ್ಯವಿರುವರು ಒಂದು ವಿಮಾನವು ಲಂಡನ್ನಿಗೆ ಹೋಗಿ ಸಿದಿಮ್ಮಿನ ಗುಂಡುಗಳನ್ನು ಸುರಿಸುವದು ಆವರೆ ಕಲವು ಮಂದಿ ವಸತ್ತು ವ್ಯಾಪಾರವು. ೧೦ ಜನಗಳ ನಂಗಡಿ ಧಾಯಗಳಾದುವು ಬಹಿರ್ದಾಮಾರ್ಗ ಲಂಡಿನ್ನರು ಆದರೆ ಸ್ಥೈರ್ಯದಿಂದಲೂ ನಂಗಡಿಗಳಲ್ಲಿ ಒಬ್ಬ ಇಟಲಿಯ ಕಾರ್ಮಿಕರನು ಟಿರ್ಪಿಟ್ಟಿರುವಂತೆ ಲಂಡ್ಗಿನ ಆರ್ಫ್ಸ್‌ಬರ್ಗಾಪನ್ನು ಪಾಪ ನಿಗ ಟೆಗಳ ಕಾಲದಲ್ಲಿ ವಿನಾಶಮಾಡಿ ಎಂದಿಳಿರುವನು ಇಂಗ್ಲೆಂಡಿನಲಿ ಶೆರೆಯಲ್ಲಿದಲ್ಲಟ್ಟಿದ್ದ ಜರ್ಮನಿಯವರಲ್ಲಿ ೨೫ ಮಂದಿ ನೆಲದಲ್ಲಿ ಸುರಂಗವನ್ನು ತೆಗೆದು ತಪ್ಪಿಸಿಕೊಂಡು ಹೋಗಿರುವರು

ಅಂಚೆಯ ಮನೆ.

[All Rights Reserved]

(ಹಿಂದಿನ ಸಂಚಿಕೆಯಿಂದ ಮುಂದಕ್ಕೆ ಸಾಗಿದುದು)

ಮಾಧವ—ಆದರೆ, ಕೇಳು! ನೋಡು, ಏನು ನೋಡುತ್ತೀಯೆ? ನೋರುವುದಕ್ಕೆ ಆಸ್ಪದಂದೇನಿರುವುದು?

ಅಮಲ—ಅಗೋ ನೋಡು! ಆ ದೂರದಲ್ಲಿ ಕಾಣುವ ಬೆಟ್ಟವನ್ನು ನೋಡು! ಆ ಬೆಟ್ಟಕ್ಕೂ, ಅದರ ಆಚೆಗೂ ನೆಟ್ಟಗೆ ಹೋಗಬೇಕೆಂದು ಆಜ್ಞಾಪಿಸುತ್ತೇನೆ

ಮಾಧವ—ಅಯ್ಯೋ ಬುದ್ಧಿಹೀನ! ಆ ಬೆಟ್ಟದಮೇಲಕ್ಕೆ ಹೋಗಿ ಅಲ್ಲಿಂದ ಮುಂದಕ್ಕೆ ಹೋಗುವುದಕ್ಕೆ ನಿನಗೇನೂ ಬೇರೆ ಕೆಲಸವಿಲ್ಲವೋ! ಹುಚ್ಚು ಮಾತ್ಕಾಗಿ ಮಾತಾಡಬೇಡ. ಕೇಳು! ಆ ಬೆಟ್ಟವು ಆಕ್ಷಲಾಗಿರುವುದರಿಂದಲೇ ಅದರಿಂದಾಚೆಗೆ ಹೋಗಕೂಡದೆಂದು ಆರ್ಡರಾಗುತ್ತದೆ. ಯಾಗಲ್ಲಾ ಬಿದ್ದರೆ ಅಸ್ಟೊಂದು ದೊಡ್ಡ ಜಂಗೆಗಳು ರಾತ್ರಿರಾತ್ರಿಯಾಗಿರುವುದಕ್ಕೆ ಕಾರಣವೇನು?

ಅಮಲ—ನಾವು ಅದರಾಚೆಗೆ ಹೋಗಕೂಡದೆಂದು ಅಜ್ಞಾಪಿಸುವುದಕ್ಕಾಗಿ ಅದು ಅಲ್ಲಿದೆ ಎಂದು ನೀನು ಯೋಚಿಸುತ್ತೀಯೋ? ನನಗೆ ತೋರಿಸುವುದೇನಂದರೆ—ಭೂಮಿಯು ಪೂರ್ತಿನಾಡುವಾರಾದುದಿಂದ ತನ್ನ ಕೈಗಳನ್ನು ಆಕಾಶಕ್ಕೆತ್ತಿ ಕರೆಯುತ್ತಿದೆ ಎಂದು ತೋರುತ್ತದೆ ದೂರದಲ್ಲಿ ಇದ್ದು, ಕಿಟಕಿಯಲ್ಲಿ ಒಬ್ಬರೇ ಕುಳಿತುಕೊಂಡು ನೋಡುವವರಿಗೆ ಗೊತ್ತಾಗುತ್ತದೆ. ಆದರೆ, ನನಗೆ ತೋರುವುದೇನಂದರೆ, ವಿದ್ವಾಂಸರು—

ಮಾಧವ—ಅವರಿಗೆ ಅಂತಃ ಭ್ರಾಂತಿಗೆ ಅವಕಾಶವಿಲ್ಲ. ಅವರು ನಿನ್ನಂತೆ ಅವಿವೇಕಿಗಳಲ್ಲ

ಅಮಲ—ನನ್ನಂತೆ ಬುದ್ಧಿಹೀನನೆನ್ನುವ್ಯನನ್ನು ನಿನ್ನೆ ಕಂಡಿದ್ದೆನು ಅದು ನಿನಗೆ ತಿಳಿಯದೋ?

ಮಾಧವ—ಅಯ್ಯೋ ದೇವರೆ! ನಿಜವಾಗಿ! ಅದು ಹೇಗೆ?

ಅಮಲ—ಅವನು ಯಾರೆಂಬುವನ್ನು ಬಲ್ಲೆಯೋ? ಅವನು ಬಿದರು ಕೋಲಿಗೆ ಒಂದು ಗಂಟನ್ನು ಕಟ್ಟಿ ತನ್ನ ಭುಜದಮೇಲೆ ಕೊತ್ತು ಕೊಂಡು, ತನ್ನ ಎಡಗೈಯಲ್ಲಿ ಹಿತ್ತಾಳೆಪಾತ್ರೆಯೊಂದನ್ನು ಹಿಡಿದುಕೊಂಡು, ಕಾಲಿಗೆ ಪಾದುಕೆಯನ್ನು ಮೆಟ್ಟು ಆ ಮೈದಾನದಲ್ಲಿ ಬೆಟ್ಟದಾಚೆಗೆ ನೆಟ್ಟಗೆ ಹೋಗುತ್ತಿದ್ದನು. ನಾನು ಅವನನ್ನು ಕೂಗಿ "ಎಲ್ಲಿಗೆ ಹೋಗುತ್ತೀಯೆ?" ಎಂದು ಕೇಳಿದೆನು. "ನಾನು ಎಲ್ಲಿಗೆ ಹೋಗುತ್ತೇನೋ ಆರು ನನಗೆ ಗೊತ್ತಿಲ್ಲ" ಎಂದು ಅವನು ಉತ್ತರವಿತ್ತನು. ಆದರೆ ನಾನು ಅವನನ್ನ "ನೀನು ಏತಕ್ಕೆ ಹೋಗುತ್ತೀಯೆ?" ಎಂದು ಕೇಳಿದೆನು. ಅದಕ್ಕೆ ಅವನು "ನಾನು ಒಂದು ಕೆಲಸವಾಗಿ ಹೋಗುತ್ತಿದೇನೆ" ಎಂದು ಹೇಳಿದನು. ಚಿಕ್ಕಪ್ಪ, ನೀನು ಏನಾದರೂ ಕೆಲಸವನ್ನು ಹುಡುಕುತ್ತಿಯೋ?

ಮಾಧವ—ಆಯಾ ನಾನೂ ಹುಡುಕೇಕು. ಅನೇಕರು ಕೆಲಸಗಳನ್ನು ಹುಡುಕುತ್ತಾ ಇದಾರೆ.

ಅಮಲ—ಎಷ್ಟು ಸಂತೋಷ! ಅವರಂತೆ ನಾನೂ ಕೆಲಸವನ್ನು ಹುಡುಕಿಕೊಂಡು ಹೋಗಬೇಕು

ಮಾಧವ—ನೀನು ಕೆಲಸ ಹುಡುಕಿ ಸಿಕ್ಕದೇಸೋದರೆ ಆಗ—

(ಸಶೇಷ).

ಚಂದ್ರಕಾಂತ ತೈಲ.

೬೫ ಬೀದುಗಳನ್ನು ಸಂಪೂರ್ಣವಾಗಿ ಗುಣಪಡಿಸುವುದು ಧನುರ್ವಾಯು, ಸರ್ವಾಂಗವಾಯು, ಮೈಯ ಸಂಬಂಧವಾದ ಜಾಡ್ಯಗಳು, ಮಕ್ಕಳ ಹುಳುಹುಂದ, ಜ್ವರ, ಮೂರ್ಛಾಮಪ್ಪಗಳು ಗುಣವಾಗುವುದು ಕ್ರಯ ಕ್ರಯ ಸೀಸೆ ೧ಕ್ಕೆ ೬ ಆಣೆ

[೨-೧] ನಮ್ಮ ವಿಳಾಸ—ಚಂದ್ರಕಾಂತ ಡಿಪೊ, ಮೈಸೂರು.

೧೦೦೦ ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಮಿಸ್ರಿ ಮುರಬ್ಬಾ

ಗೌರ್ನಮೆಂಟಿನಲ್ಲಿ ರಿಜಿಸ್ಟರ್ಡ್ ಮಾಡಲ್ಪಟ್ಟಿದೆ.



ರಿಜಿಸ್ಟರ್ಡ್ ಟ್ರೇಡ್‌ಮಾರ್ಕ್

ಈ "ಸಾಲಮಿಸ್ರಿ ಮುರಬ್ಬಾ" ದ ಸೇವಕರಿಂದ-ಸಾರ್ವಭೌಮ ನಾಗರಿಕ ಇದ್ದರೂ, ಸ್ವಲ್ಪೇಂದ್ರಿಯವಾದರೂ, ಮಾತ್ರದಲ್ಲಿ ಉಂಟಾಯುತ್ತಿದ್ದರೂ, ಮೂರ್ತಿದೊಂದಿಗೆ ವಿಶ್ವಪ್ರಿಯ ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ಸೆಳೆತವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಕಠಿಣವಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ ಈ ಸಾಲಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವು ಒಳ್ಳೆಸ್ಥಿತಿಯಲ್ಲಿರುವದು ಈ ಮುರಬ್ಬಾವು ಸಾಲಮಿಸ್ರಿಯಿಂದ ಕಮಾರಿಸಲ್ಪಟ್ಟಿಲ್ಲವೆಂಬ ವ್ಯಕ್ತಪಡಿಸುವವರಿಗೆ—೧,೦೦೦ ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು ಹಾಗೆ ವ್ಯಕ್ತಪಡಿಸುವ ಬಹುಮಾನದ ಹಣವನ್ನು ನಾನು ಕೊಡಿಸಿ ನಿಶಾಕರಿಸುವುದಾಗಿ ಸರಕಾರದ ಮುಂಚಿತ ಸನ್ನಿಧಿ ಪಡೆಯಬಹುದು

ಕ್ರಯ ಡಬ್ಬಿ ೧ ಕ್ಕೆ ರೂ ೨-೦-೦. ಟಪಾಲು ಖರ್ಚು ೧ ಡಬ್ಬಿಯಿಂದ ೩ ಡಬ್ಬಿಗಳ ವರೆಗೆ ೦-೬-೦. ಉಪಯೋಗಿಸುವ ವಿಧವು ಡಬ್ಬಿಯ ಮೇತೆಯಲ್ಲಿರುವುದು.

ಡಿ ಮನ್ನಾರಂಲಾ, ಡಿಲ್ಲೀ ವೈದ್ಯರು,

[೩-೧] ೫೫, ಆನೆಸ್ಟ್ರೀ ರೋಡ್, ಬೆಂಗಳೂರು ಸಿಟಿ.

"ಸತ್ಯವಾದಿ"

ವಾರ್ಷಿಕ ಚಂದ—ಸ್ಥಳದವರಿಗೆ ೪ ಆಣೆ. ಪರವೂರವರಿಗೆ ರೂ. ೧ ಆಣೆ ೪

ಜಾತ್ರೀವಾದಾರಿಗೆ:—ದೇವೋತ್ಸವಕ್ಕೆ ಸಂಬಂಧಪಟ್ಟ ಜಾತ್ರೆಗಳೆಲ್ಲವೂ ಪ್ರಕಟಿಸಲ್ಪಡುವುವು ಇತರ ವಿಷಯಗಳನ್ನು ಬರೆದು ತಿಳಿಯಪಡಿಸಬಹುದು.

ಮ್ಯಾನೇಜರ್, "ಸತ್ಯವಾದಿ," ಮೈಸೂರು.

Printed and Published by Mr. B V Narasimha Iyengar, at the Royal Press, Mysore, for the Editor & Proprietor.

Regd.-No M 1299

MYSORE. ಪ್ರತಿ 3 ಪೈ.

SATYAVADI

ರಾಜಕೀಯ, ಸಾಮಾಜಿಕ, ಮತವಿಚಾರ, ಭಾಷಾಭಿವೃದ್ಧಿ ಮುಂತಾದ ವಿಷಯಗಳನ್ನೊಳಗೊಂಡಿರುವ

"ಸತ್ಯವಾದಿ" ವಾರಪತ್ರಿಕೆ

ವಾರ್ಷಿಕ ಚಂದಾ 0—8—0 | ಪ್ರತಿ ಮಂಗಳವಾರ ಪ್ರಕಟಿಸಲ್ಪಡುವುದು | [ಅಂಚೆಖರ್ಚು ಸೇರಿ 1—6—0

ಸಂಪುಟ I | ಮಂಗಳವಾರ 16ನೇ ಅಕ್ಟೋಬರ್, 1917 | ಸಂಚಿಕೆ 5

ಸರ್ವಂ ಪರವಶಂ ದುಃಖಂ ।
ಸರ್ವಮಾತ್ಮವಶಂ ಸುಖಂ ॥

ಸ್ವರಾಜ್ಯ.

ಮೈ॥ ಆರ್. ಜೇಳಾರವರು ತಾವು ವಾಗ್ದಂಡನದಿಂದ ವಿನೆಲ್ಬಟ್ಟನೇಲೆ ಕೊಯಮತ್ತೂರಿನಲ್ಲಿ ನಡೆದ ಒಂದು ಮಹಾಸಭೆಯಲ್ಲಿ ಈತೀತ ಸಂಭಾಷಣೆ ನಡಿಸಿರುತ್ತಾರೆ

" ನಮ್ಮ ವಿಷಯದಲ್ಲಿ ನಮ್ಮ ದೊರೆಮಾತೆಯು (ಭರತ ಖಂಡವ) ಇನ್ನು ತನ್ನ ಮಂತ್ರಿಯನ್ನೂರಿದವಳಾಗಿಲ್ಲವೆಂದು ಪ್ರಪಂಚಕ್ಕೆಲ್ಲ ಸ್ಪಷ್ಟಪಡಿಸಿರುವಳು. ಅವಳು ಎದ್ದು ತನ್ನ ಕಾಲುಗಳಮೇಲೆ ನಿಂತಿಹಳೆ. ಅವಳು ಪ್ರಕಟನಮಾಡುತ್ತಾಳೆ. ಅವಳು ವರಾತ ಕೇಳುತ್ತಾಳೆ ಆವಳು ಹಟುವಿಂದ ಕೀಳಿ ಸಫಲಯೊಂಬಲ್ಲಳು. .....

" ಅದರೆ ನಾನು ಒಂದು ಕಣಮೆ ಮಾತನ್ನು ಜೇಳಬೇಕಾಗಿದೆ ನಮ್ಮೆನ್ನ ಸಾಗ್ವಂಧನದಿಂದ ಬಿಟ್ಟಮಾತ್ರಕ್ಕೆ, ಹೋರಾಟವೆಲ್ಲವೂ ಮುಗಿಯಿತೆಂದು ತಿಳಿದರೆ ನಿಮಗೆ ಕೆಡಕುಂಟಾಗುವುದು. ನ್ಯಾಯವಾಗಿ ಬಗಳವು ಈಗತಾನೇ ಪ್ರಾರಂಭಿಸಿರುವುದು. ಸತ್ಯವಾದ ಹೋರಾಟವು ಇನ್ನು ಮುಂದೆ ಇರುವುದು. ಈಗ ಮುಗಿದ ಜಗಳವು ಜಯದ್ರಥನನ್ನು ನಿಜವಾಗಿ ಮಾಡಿಕೊಳ್ಳಲು ಬೇಕಾದ ಬಲವನ್ನು ನಮಗೆ ವಾಗ್ದಾನ ಮಾಡುತ್ತದೆ ಅದರೆ ನಮಗೆ ನಮ್ಮ ಪ್ರತಿಯೊಬ್ಬನ ಶಕ್ತಿಯೂ ಮತ್ತು ಪ್ರತಿಯೊಬ್ಬ ಹಿಂದೂದೇಶದ ಸ್ತ್ರೀಪುರುಷರ ಸಂತೋಷಕರವಾದ ಮತ್ತು ದೃಢಸಂಕಲ್ಪವಾದ ಸಹಕಾರವೂ ಬೇಕಾಗಿರುತ್ತದೆ."

ಶ್ರೀಮತಿ ಬೆಸೆಂಟಿರವರು.

" ಸಂಕಲ್ಪ, ಬುದ್ಧಿ, ಗ್ರಹಣಶಕ್ತಿ—ಇವು ಮಾನವಸಲ್ಲಿರಕಕ್ಕೆ ವಿಶೇಷವಾದ ತ್ರಯ್ಯೈಕತ್ವವಾಗಿವೆ. ಕಲ್ಪನೆಗೆ ಗ್ರಹಣಶಕ್ತಿ; ಪ್ರೇರಣೆಗೆ ಬುದ್ಧಿ; ಸಿದ್ಧಿಗೆ ಸಂಕಲ್ಪ "

" ಇತಿಹಾಸ ಗುಹೆಗಳಲ್ಲಿ ಸೃಜನಾಂಗವವಾದ ಐತಿಹ್ಯಗಳ ಅಗ್ರಾಹಕ್ಕೂ, ಪೂಜ್ಯಕ್ಕೂ ಪಾತ್ರವಾಗಿ, ನಮ್ಮ ಸುವಿಶಾಲಗಳಲ್ಲಿ ಭಾಗಿಯಾವವರಲ್ಲಿ ಶ್ರೀಮತಿ ಬೆಸೆಂಟಿರವರು ಪಾತ್ರವ- ಇದು ನಮ್ಮನ್ನು ಆಳೆಯು ಉದಾತ್ತವಾದ ಧೈರ್ಯಕ್ಕೆ ನಮ್ಮ ಮನಃಪೂರ್ವಕವಾದ ಕೃತಜ್ಞತೆಯನ್ನು ಸ್ಪಷ್ಟಪಡಿಸುವಂತೆ ಮಾಡಿತು- ಯುದ್ಧದಲ್ಲಿ ಕ್ರೌರ್ಯವು ಸಂಭವಿಸುವಂತೆಯೇ ರಾಜಕೀಯಾಗನೈವೆಂಬುದಕ್ಕೂ ಅನಾವಾವರುತ್ತದೆ- ಗತಿಯೆಂಬುದು ಆಸ್ಪಷ್ಟವಾದುದನ್ನು ಬಲುಬೇಗನೆ ಸಂಭವಿಸುವಂತೆ ಮಾಡಿತು, ಮನೋಗತಗಳಲ್ಲಿ ಸಂಭವಿಸುವಲ್ಲಿ ಬಿಗಿ, ವಾಸ್ತವಿಕವಾದಿಂದ ನನ್ನ ಪ್ರೇಮಭಕ್ತಿಯನ್ನು ಸಮರ್ಪಿಸುತ್ತೇನೆ. "

ರವೀಂದ್ರನಾಥ್ ಟಾಗೂರು.

ಶ್ರೀಮತಿ ಬೆಸೆಂಟರವು ತಮ್ಮ ಎಪ್ಪತ್ತೈದನೇ ವರ್ಷದ ಜನ್ಮೋತ್ಸವಕಾಲದಲ್ಲಿ ಭಾರತೀಯರನ್ನು ಮಾತ್ರವೇ ಅಲ್ಲದೆ ಪ್ರಪಂಚದ ಲಕ್ಷಾಂತರ ಸ್ನೇಹಿತರನ್ನೂ ಮತ್ತು ಹಿಚ್ಚಿಗೆಯರನ್ನೂ ಕುರಿತು ಈ ಪೈಕಿನಾತ್ಮಕವಾದ ಮಾತುಗಳಿಂದ ವಂದಿಸಿರುವರು. ಈಹೊತ್ತು ಪ್ರಪಂಚದಲ್ಲಿ ಬೆಸೆಂಟರವರು ವಿಖ್ಯಾತರಾದ ವ್ಯಕ್ತಿಯಾಗಿಯೂ ಅಗ್ರಗಣ್ಯರಾಗಿಯೂ ಮತ್ತು ಸ್ತ್ರೀಪ್ರಭಾಗಿಯೂ ಇರುತ್ತಾರೆ. ಸರ್ 1917 ನೇ ಇನವಿ ಅಕ್ಟೋಬರ್ ತಿಂಗಳು 1 ನೇ ತಾರೀಖು ಅವರ ಜನ್ಮೋತ್ಸವದ ದಿನವನ್ನು ಮನೋಜ್ಞಕ್ಕೆ ಯುಳ್ಳ ಲಕ್ಷಾಂತರ ಜನರು ಒಡಪರಿಗೋಸುಗವಾಗಿಯೂ ಮತ್ತು ಅನಾಥ ರಿಗೋಸುಗವಾಗಿಯೂ ಹೇಗೆ ಕಷ್ಟಪಟ್ಟು ಸ್ವಾರ್ಪಣಾಗವನ್ನು ಮಾಡಿರುವಂತಹ ಮಹೋನ್ನತ ಬೆಸೆಂಟರವಲ್ಲಿಗೆ ವಿನಯಪೂರ್ವಕನಾದ ಪ್ರೀತಿಯಿಂದ ಬಂದಿದ್ದರು. ಸಜ್ಜನಶಕ್ತಿಗಳನ್ನು ನೋಡಿರುವ ಅವರ ಜೀವಮಾನ ಜಟ್ಟಿಯು, ಪ್ರತಿಯೊಬ್ಬನೂ ಒಬ್ಬ ತಿಳಿದುಕೊಳ್ಳಲು ಬೇಕಾದಷ್ಟು ವಿಷಯವನ್ನೊಳಗೊಂಡಿರುವ ಗ್ರಂಥವಾಗಿರುತ್ತದೆ. ಈ ಮಹೋನ್ನತವಾದ ವೈದ್ಯೆಯ ವಿಷಯದಲ್ಲಿ ಪ್ರತಿಯೊಬ್ಬರಿಗೂ ಹೃದಯದಲ್ಲಿಯೂ ಇರುವ ಸಂತೋಷವು, ಕೃತಜ್ಞತೆಯೂ, ಮತ್ತು ವಿನಯವೂ ಇವುಗಳನ್ನು ಹೇಳಲು ತಕ್ಕಷ್ಟು ಸರಿಯಾದ ಮಾತುಗಳೇ ಇಲ್ಲವೆಂದು ಏಂಬೆ ಹೇಳಿದ ಒಬ್ಬ ಸಂಘಾಪಕನ ಮಾತು ಸರ್ವಕಾಲಗಳಿಗೆ ಅನ್ವಯವಾಗಿದೆ ಅನಿಬಸೆಂಟರವರಲ್ಲಿ ಜೀವಿಸುತ್ತಿರುವ ನಮ್ಮ ಹಿಂದೂದೇಶೀಯನಾಗಿರುವ ಒಬ್ಬ ಹೊಸ ವಿದ್ಯಾರ್ಥಿಯು ಇತಿಹಾಸದ ಫೊಟಿಸರ್ಪದ ಲಕ್ಷಾಂತರ ಕಷ್ಟ ಜನರಿಗೆದಲುವಾಗಿ ನಾಲ್ಕನೇ ಒಂದು ಭಾಗ ವಷ್ಟಾಯದಿಂದಲೂ ತನ್ನ ಪ್ರೀತಿಪತ್ರಾದ ದಯೆಯನ್ನು ಧಾರಾಳವಾಗಿ ಹೊರಿಯುವಳು. ಆಕೆಯು ಭರತಖಂಡದ ಮತ್ತು ಭಾರತೀಯರ ಸಲುವಾಗಿಯೇ ಜೀವಿಸಿರುವಳು; ಕೆಲಸಮಾಡುತ್ತಿರುವಳು; ಮತ್ತು ಅಧಿಕತರ ಪೀಡನಗಳನ್ನನುಭವಿಸಿರುವಳು. ಆಕೆಯು ನಮಗೋಸುಗವಾಗಿ ಕಷ್ಟಗಳನ್ನು ಸಹಿಸಿರುವಳು ಆಕೆಯು, ಪ್ರತಿಯೊಬ್ಬ ನಿಷ್ಪಟಿಯೂ ಮಹತ್ವವೆಂದು ಎಣಿಸುವ ಮತ್ತು ಎಣಿಸತಕ್ಕ ಸ್ವಾತಂತ್ರತೆಯನ್ನೇ—ಆಂತಃ ಸ್ವಾತಂತ್ರತೆಯನ್ನು ಜಾತೀಯರು ಹೊಂದಲೆಂದು ಆತ್ಮಾರ್ಪಣೆಯನ್ನು ಗೈದಿರುವಳು.

ಆಕೆಯು ಒಲೆದ ಕುಶಲಪ್ರಶ್ನವತ್ರದಲ್ಲಿ ಈತೀತ ಜೇಳಿರುತ್ತಾರೆ:—

" ತನ್ನ ಭಾರತೀಯ ಸಹೋದರ ಸಹೋದರಿಯರ ನೇವೆ ಮಾಡಲು ಸ್ವತಂತ್ರತೆಯನ್ನು ಕೊಡಮಡಿರುವುದು ನನಗೆ ಸಂಭವಿಸಬಹುದಾದ ಅತಿ ದೊಡ್ಡ ಸನ್ಮಾನವಾಗಿರುತ್ತದೆ. ಈ ವಿಚಾರವನ್ನು ಸ್ವಾರ್ಥಪರರೂ, ಸ್ವಪ್ರೇಶಾಭಿಮಾನಿಗಳೆಲ್ಲರೂ ಪರಿಗಣಿಸಲಾರರೆಂದು ನನಗೆ ಗೊತ್ತಿರುವುದು. ಆದರೆ ಯಾವಗೆ ಅಂತಹ ದೆನ್ಮವಿರುವುದೋ ಅವರು ತಿಳಿದುಕೊಳ್ಳುವರು. ಕಳವು ವರ್ಷಗಳ ಹಿಂದೆ ಹಿಂದುಸಾನು ತನ್ನ ಮನೋಗತವನ್ನು ಈತೀತ ಜೇಳಿರುತ್ತಾಳೆ:—

" ಪ್ರಭುವನ್ನು ಕಾಣದ, ದೌರ್ಬಲ್ಯವನ್ನು ಸಹಿಸದ, ಸ್ವಬಲವನ್ನೇ ನಂಬಿ

ಕೊಂಡಿರುವ, ಸಹೋದರರೆ ಕಲಸವೇ ತನ್ನದೆನ್ನುವ ಒಬ್ಬ ಸ್ವತಂತ್ರವುರು ಸನ ಅಂತಃಕರಣವು ಗಾಂಭೀರ್ಯವುಳ್ಳದುದು, ಸತ್ಯವಾದುದು, ನಂಬಿಕೆಯಾದುದು, ಮತ್ತು ಧೈರ್ಯವುಳ್ಳದುದು." ಸಜವಾಗಿಯೂ ಅಕೆಯು ಭೆರತ ವರ್ಷದ ಬಾರತೀಯರನ್ನೇಕರಿಗಿಂತಲೂ ನಿಜಭಾರತೀಯಳೆಂದು ಸ್ಪಷ್ಟಗೊಂಡಿರುತ್ತಾಳೆ. ಅಕೆಯ ನ್ಯಾರ್ಥತ್ಯಾಗದಿಂದ ಪ್ರತಿಯೊಬ್ಬ ಸತ್ಯವಾದಿಯು ಅಕೆಯನ್ನು ಅಧಿಕತರವಾಗಿ ಪ್ರೀತಿಸುತ್ತಾನೆ. ಅಕೆಯು ದೇಶಮಾತೆಯ ಸ್ವಾತಂತ್ರ್ಯದಸಲುವಾಗಿಯೂ, ಮತ್ತು ಪ್ರೀತಿಗೋಸುಗವಾಗಿಯೂ ಮಾಡಿರುವ ಸೇವೆಗಳನ್ನು ನಾವು ಹೊಗಳುವ್ಯದಕ್ಕಲ್ಲ. ಇಲ್ಲಿ ಆ ವಿಷಯಗಳೆಲ್ಲವ್ಯೂ ಪುನರಾವರ್ತನವನ್ನು ಹೊಂದಲು ತಕ್ಕದ್ದೆಂದು ಎಲ್ಲರಿಗೂ ತಿಳಿದಿದೆ. ಹೆಚ್ಚೇಕೆ? ಅಕೆಯು ಇಂಗ್ಲೆಂಡಿನ ಅಧಿನ ಹಿಂದೂದೇಶದ ಮಾನನೀಯರಾದ ಸ್ನೇಹಿತರಿಗೆ ಯಾವನಿಧದಲ್ಲಿಸೂ ಕಡಮೆ ಇಲ್ಲ. ನ್ಯಾರ್ಥತ್ಯಾಗದಲ್ಲಿ ಈಕೆಯು ಧರ್ಮದ ಎತ್ತರವಾದ ಗದ್ದಿಗೆಯಮೇಲೆ ನಿಂತು ವಿರಾಜಿಸುತ್ತಾ ಅವಳೆಲ್ಲರನ್ನು ವಿಸಾಸಿಸುತ್ತಾಳೆ. ಡಾ|| ಗ್ಲಾಡ್‌ಸ್ಟನ್ ಮತ್ತು ಸೈ| ಬಾಪಾಬಾಯಿ ಇವರು ತಮ್ಮ ಜೀವನದಲ್ಲಿ ಕೆಲವು ಅಂಶಗಳಲ್ಲಿ ಪ್ರಸಿದ್ಧಿಯನ್ನು ಹೊಂದಿದ್ದರೆ ಚಿಸಂಟರವರು ರಾಜಕೀಯ, ಸಾಮಾಜಿಕ, ಮತವಿಚಾರ ಮತ್ತು ಧರ್ಮಾಭಿವೃದ್ಧಿ ಈ ನಾಲ್ಕರಲ್ಲಿಯೂ ಪ್ರಸಿದ್ಧಿಯೊಂದಿರುವರೆಂದು ಸೈ|| ಮರ್ದಾರವರು 'ವೈನಧಾಗ' ಸಭೆಯಲ್ಲಿ ಹೇಳಿದರು. ನಾವು ಹೇಳುವಂತೆ ಅವರ ಜೀವಮಾನವೆಲ್ಲವ್ಯೂ ಮಾನವಜನರ್ಗದ ಸಲುವಾಗಿ ಬಾತ್ರ, ಮತ್ತ, ವರ್ಣ ಅಥವ ಲಿಂಗ ಯಾವ ವೈತ್ಯಾಸವನ್ನು ಮಾಡದೆ ಸಹಾಯ ಮಾಡುವುದರಲ್ಲಿಯೇ ಕಳೆದುಹೋಗಿದೆ ಹಿಂದೂದೇಶವು, ಜನಾಂಗಗಳೆಲ್ಲವನ್ನು ಒಂದಾಗಿ ಮಾಡುವ ವೈಭವತಕಾರ್ಯದಲ್ಲಿ ನಿರತಳಾದುದಕ್ಕೆ ಆಕೆಯನ್ನು ಎಲ್ಲಕ್ಕಿಂತ ಶ್ರೇಷ್ಠವಾಗಿ ಕಾಣುತ್ತದೆ ಆಕೆಯು 71ನೇ ಜನ್ಮೋತ್ಸವದ ದಿನ ಪ್ರತಿಯೊಬ್ಬನೂ ಆಕೆಯಲ್ಲಿ ಸಂತೋಷದಿಂದ ಮನಸ್ಸಿಟ್ಟು ಬಂದಿದುದು ಎಷ್ಟು ಆಶ್ಚರ್ಯ! ನಮ್ಮ ಇತಿಹಾಸದಲ್ಲಿ ಪ್ರಸಿದ್ಧಿಗೊಂಡಿರುವ ಯೂರೋಪಿಯಂತೆಯೇ ಈಕೆಯು ಅಪಹಜನೆಗಳಿಂದ ಆವರಿಸಲ್ಪಟ್ಟಿದ್ದರೂ ಅವುಗಳೆಲ್ಲವನ್ನೂ ಜಯಿಸಿ, ಕಷ್ಟಸುಖಗಳನ್ನು ಜಯಿಸಿದವರಲ್ಲಿ ಪ್ರಥಮ ಸ್ತ್ರೀಯಾಗಿ, ಅವ ವೈಭವದಿಂದ ಪ್ರತಿಶಿಸುತ್ತಿದ್ದಾಳೆ. ನಾವೆಲ್ಲರೂ ನೆಮ್ಮ ಭಾವದಿಂದ ಸರ್ವಶಕ್ತನೂ, ಸರ್ವದಯಾಮಯನೂ ಆದ ಭಗವಂತನನ್ನು, ಅಕೆಯನ್ನು ದೀರ್ಘಾಯುಷ್ಯವಂತಳನ್ನಾಗಿಯೂ, ಆಕ್ಷಯವಾದ ಪ್ರೀತಿಗೂ ಪ್ರೇರಣೆಗೂ ಪಾತ್ರಳನ್ನಾಗಿಯೂ, ಮತ್ತು ಮಾನವಜನರ್ಗಕ್ಕೆ ಮಾರ್ಗದರ್ಶಿಕಳನ್ನಾಗಿಯೂ ಮಾಡಲೆಂದು ಪ್ರಾರ್ಥಿಸುತ್ತೇವೆ.

ವಿಶ್ವವಿದ್ಯಾಲಯವೆ ಮುಖ್ಯೋದ್ದೇಶಗಳು.

ಕಾರ್ನಿಗಿ ನ್ಯೂಮನ್ ಎಂಬಾತನು, ವಿಶ್ವವಿದ್ಯಾಲಯ ಶಿಕ್ಷಣದ ವ್ಯಾಪಾರಿಕ ಉದ್ದೇಶವನ್ನು ಈರೀತಿಯಲ್ಲಿ ಸ್ಪಷ್ಟಗೊಳಿಸುತ್ತಾನೆ:—

"ವಿಶ್ವವಿದ್ಯಾಲಯದ ಶಿಕ್ಷಣವು ಶ್ರೇಷ್ಠವಾದ ಆದರೆ ಸಾಮಾನ್ಯ ಉದ್ದೇಶಕ್ಕೆ ಎಲ್ಲರಿಗೂ ವಾಚಿಕೆಯಾದ ಮಾರ್ಗವಾಗಿದೆ. ಶಿಕ್ಷಣವು ಸಂಘದ ವಿವೇಕವನ್ನು ಹೆಚ್ಚಿಸುವುದರಲ್ಲಿಯೂ, ಜನರ ಮನಸ್ಸನ್ನುದ್ಧರಿಸುವುದರಲ್ಲಿಯೂ, ಜನಾಂದ ಕಲಿಯುವಿಕೆಯನ್ನು ಪುಷ್ಟಿದ್ಧಗೊಳಿಸುವುದರಲ್ಲಿಯೂ, ಜನರ ಅಭಿಮಾನಕ್ಕೆ ತಕ್ಕಂತೆ ಧರ್ಮಾಭಿವೃತ್ತಿಗಳನ್ನು ಮತ್ತು ಜನರ ಅಪೇಕ್ಷೆಗೆ ಸ್ಪರ್ಧೋದ್ಯೋಗಗಳನ್ನೂ ಒದಗಿಸುವುದರಲ್ಲಿಯೂ ಕಾಲಾನುಗುಣವಾಗಿ ಮಹತ್ತೋಭಾವನಗಳನ್ನು ವಿಸ್ತರಿಸುವುದರಲ್ಲಿಯೂ. ಸ್ವಾಚಿತ್ರವನ್ನಾಗಿ ಪಾಡುವುದರಲ್ಲಿಯೂ, ರಾಜಕೀಯ ಬಲವನ್ನು ಸುಲಭವಾಗಿ ಉಪಯೋಗಿಸುವುದರಲ್ಲಿಯೂ, ಜನರಲ್ಲಿ ರಹಸ್ಯಸಂಪರ್ಕ ಮಾಡುವುದನ್ನು ಬೇರೆ ಮಾಡುವುದರಲ್ಲಿಯೂ ಉದ್ದೇಶಿಸುತ್ತದೆ. ನಿಜಾಭಿಪ್ರಾಯವನ್ನೂ ಮತ್ತು ತೀರ್ಮಾನ್ನೂ ಕೊಡುವುದಕ್ಕೆ ಸಲುವಾಗಿ ನಿರ್ಮಲವಾದ ವಿವೇಕಜ್ಞಾನವನ್ನೂ, ಅಂತಃಪ್ರಜ್ಞಾನವನ್ನು ನೈರ್ದ್ದಿಗೊಳಿಸಲು ನಿಜಾಂತರವನ್ನೂ ಅಂತಃಪುದನ್ನು ಸ್ಪಷ್ಟಪಡಿಸಲು ವಾಕ್ಚಾತುರ್ಯವನ್ನೂ, ಅವುಗಳನ್ನು ಮನಗಾಣುವಂತೆ ಹೇಳುವ ಶಕ್ತಿಯನ್ನೂ ಅಂತಃಪ ಶಿಕ್ಷಣವು ಕೊಡುತ್ತದೆ. ಶಿಕ್ಷಣವು, ವಿಷಯಗಳು ಯಾಸಯಾವಿಧಿಯಲ್ಲಿರುವುದೆಂಬುದನ್ನು ತಿಳಿಯುವುದಕ್ಕೂ, ಸರಿಯಾದ ಮಾರ್ಗವನ್ನು ಹಿಡಿಯುವುದಕ್ಕೂ, ತೊಂದರೆಯುಂಟಾಗಲೀ, ಯೋಜನೆ ಯಿಂದಲಾಗಲೀ ಮುಕ್ತನಾಗುವುದಕ್ಕೂ, ಮತ್ತು ಸಂಘಂಧವಿಲ್ಲದುದನ್ನು ತ್ಯಜಿಸುವದಕ್ಕೂ ಕಲಿಸುತ್ತದೆ. ಅದು, ನಂಬಿಕೆಯಿಂದ ಕಾರ್ಯತತ್ಪರನಾಗುವುದಕ್ಕೂ, ಸುಲಭದಿಂದ ಯಾವನಸ್ಸುವನ್ನಾದರೂ ವಶಮಾಡಿಕೊಳ್ಳುವುದಕ್ಕೂ, ಅವನನ್ನು ಸಿದ್ಧನನ್ನಾಗಿ ಮಾಡುತ್ತದೆ. ಇತರರಿಗೆ ತಕ್ಕಂತೆ ತಾನು ಇರುವುದು ಹೇಗೆಂಬುದನ್ನೂ, ಪರರನ್ನು ಯಾವರೀತಿಯಲ್ಲಿ ಪ್ರೇರಿಸಬೇಕೆಂಬುದನ್ನೂ ತೋರಿಸುತ್ತದೆ. ಅವನು ಯಾವಸಭೆಯಲ್ಲಿಯೂ ಸುಬುದ್ಧಿಯಿರುವನು; ಎಲ್ಲರಲ್ಲಿಯೂ ಸಮಾನಭಾವದಿಂದಿರುವನು; ಅವನಿಗೆ ಮಾತನಾಡುವುದಕ್ಕೂ ಮೌನವಾಗಿರುವುದಕ್ಕೂ ಕಾಲಕಾಲಗಳು ಗೊತ್ತಿರುವುದು; ಅವನು ಸಂಭಾಷಿಸಲು ಸಮರ್ಥನು; ಅವನು ಕವಿಗೊಟ್ಟು ಕೇಳುವನು; ಪ್ರಳಿಕೊಡುವುದಕ್ಕೆ ಸಂಧಿ ಇಲ್ಲದವೇಳೆಯಲ್ಲಿ, ಅವನು ಸಂಗತವಾದ ಪ್ರಶ್ನೆಯನ್ನು ಕೇಳಿ ಸಮಯೋಚಿತವಾದ ಜಾತವನ್ನು ಕಲಿಯುವನು; ಅವನು ಯಾವಾಗಲೂ ಸಿದ್ಧನಾಗಿರುವನು; ಎಂದಿಗೂ ಅಪಹಾಸ್ಯವನ್ನು ಹೊಂದನು; ಅವನು ಮನೋಧರ್ಮವನ್ನು ಒಟುಮಾಡಿವ ಸ್ನೇಹಿತನು ಮತ್ತು ನಿನು ನಂಬತಕ್ಕ ಸ್ನೇಹಿತನು; ಅವನು ಯಾವಾಗ ಗಂಭೀರವಾಗಿರಬೇಕೆಂಬುದನ್ನೂ, ಯಾವಾಗ ಸಹಾಸ್ಯವದನನಾಗಿರಬೇಕೆಂಬುದನ್ನೂ ತಿಳಿದಿರುವನು; ಗಾಂಭೀರ್ಯದೊಡನೆ ಸಹಾಸ್ಯವದನನಾಗಿರುವುದಕ್ಕೂ ಮತ್ತು ಫಲದಾಯಕವಾದ ಗಂಭೀರಮಂದಿರುವ ದೂಕ್ಕೆ ಸ್ಥಿರವಾದ ಉಚಿತಜ್ಞಾತಿಯನ್ನು ಹೊಂದಿರುತ್ತಾನೆ. ಅವನ ಮನಸ್ಸು ಈ ಪ್ರಸಂಡದಲ್ಲಿ ಇರುವಾಗ ನ್ಯಯಂಶಾಂತವಾಗಿರುವುದು. ಅದು ಹೋಗಿರುವುದಕ್ಕಾಗದಾಗ ತನ್ನಲ್ಲಿಯೇ ಸುಖವಾಗಿರಲು ಸಾಧಕಗಳನ್ನು ಹೊಂದಿರುತ್ತದೆ. ಅವನು ಜನರ ಮಧ್ಯದಲ್ಲಿಯಿರಿ, ವಿಶಾಂತವಾಸದಲ್ಲಿಯೂ, ತನ್ನನ್ನು ಸೇವಿಸುವಂತಹ ಬುದ್ಧಿಬಲವನ್ನು ಹೊಂದಿರುವನು; ಅಂತಹವನಿಲ್ಲದಿದ್ದರೆ ಉಚ್ಚಜೀವಿಯು ನೀಚಜೀವಿಯೇ, ಅಂತಹವನಿದ್ದರೆ ಲೋಭವೂ, ಅಶುಧ್ಧವೂ ಮಾಯವಾಗುವುವು. ಒಬ್ಬ ಮನುಷ್ಯನನ್ನು ಇದೆಲ್ಲವನ್ನೂ ಮಾಡುವಂತೆ ಪ್ರೇರಿಸುವ ಅಕಲಿತನವು ಒಂದು ಗುಣದಲ್ಲಿರುತ್ತದೆ. ಆ ಗುಣವು, ಕಾರ್ಯಕ್ಷಮದಲ್ಲಿ ಹೇಗೆಂದರೆ ಹಾಗೆ ತಿರುಗುವುದಕ್ಕನುಗುಣವಾಗಿಲ್ಲದಿದ್ದರೂ, ಸ್ವರೇಂದ್ರಿಯ ಗ್ರಾಹ್ಯಗುಣವು ಕಡಮೆಯಾಗಿದ್ದರೂ, ಅಲ್ಪವಿಜಿತ್ವವಿದ್ದರೂ ಅವಂಪೂರ್ಣವಾಗಿದ್ದರೂ ಅಭ್ಯೋಗ್ಯವನ್ನೂ, ಸಂಪತ್ತನ್ನೂ ಕೊಡುವಷ್ಟಾದರೂ ಉಪಯೋಗಿಸುತ್ತೇ ಇರುವುದು."

ವೃತ್ತಾಂತ ಸಂಗ್ರಹ.

ಕೃಷ್ಣಾನಯಂಬಿ ಹುಚ್ಚುಗಾಳಯು ಜರಾನಿನಲ್ಲಿ ಎದ್ದು ಹೇಳಲಶಕ್ಯವಾದ ಅನಾಯತನವನ್ನು ಮಾಡುತ್ತಲಿದೆ. ಇದೂ ನಿಂತಿಲ್ಲ. ಅನಾಹುತವು ಎಂಟು ಕೋಟ್ಯಾಂತರ ರೂಪಾಯಿ ನಷ್ಟವಾಗಿರುತ್ತೆ ಟೋಕಿಯೋ ಎಂಬ ಊರಿನಲ್ಲಿ ಮಾತ್ರವೇ 300 ಜನಗಳಿಗೆ ಜಾಸ್ತಿಯಾಗಿ ಸತ್ತರು. 3000 ಮನೆಗಳ ನೆಲಸಮವಾದವು ಮತ್ತು 1,50,000 ಸಮುದ್ರದಲ್ಲಿ ಮುಳುಗಿಹೋದವು 5,00,000 ಜನ ಪ್ರಜೆಗಳು ಮನೆಯಿಲ್ಲದೆ ಇರುತ್ತಾರೆ. ಟೊಕಿಯೊ ಸುತ್ತಮುತ್ತಲಿರುವ ಅನೇಕ ಗ್ರಾಮಗಳು ನಾಶವಾದವು. ಸುಮತ್ರಾ ದ್ವೀಪದಲ್ಲಿ 30 ಜನಗಳು ಸಿಕ್ಕಿದರು. ಉರಪಾಯು ಸುತ್ತಮುತ್ತಲಿರುವ ಚಿಕ್ಕ ಚಿಕ್ಕ ದ್ವೀಪಗಳು 300 ಜನ ನಿವಾಸಿಗಳೊಡನೆ ಪಸ್ಚಿಮ ಸಮುದ್ರದಲ್ಲಿ ಮುಳುಗಿ ಅಗೋಚರವಾಗಿ ಹೋಗಿವೆ.

ಲಿಫ್ಟ್‌ನೆಂಟು, ಜಿ. ಶ್ರೀನಿವಾಸಮೂರ್ತಿ ಬಿ. ಯಂ. ಆಸ್.

ನಮ್ಮ ದೇಶದವರಾದ ಬೆ|| ಜಿ. ಶ್ರೀನಿವಾಸಮೂರ್ತಿಯವರು ಇಲ್ಲಿ ವಿದ್ಯಾವ್ಯಾಸಂಗಮಾಡಿ ಬಿ. ಎ. ಬಿ. ಎಲ್ ಪರೀಕ್ಷೆಗಳಲ್ಲಿ ತೇರ್ಗಡೆಯೊಂದಿ ಬಿಷ್ಟರ್‌ಗೆ ಸೃಸ್ತಿಪಡೆದ ಸೈದ್ಧಾಂತಿಕಸ್ಪರ್ಧೆಯಲ್ಲಿಯೂ ಎಂ. ಬಿ. ಸಿ ಯಂ. ಪರೀಕ್ಷೆಯನ್ನು ಕೊಟ್ಟು ತಮ್ಮ ವಿದ್ಯಾಕುಶಲತೆಯನ್ನು ಮದ್ರಾಸು ಗಾರ್ನಿಸೆಂಟಿನಲ್ಲಿ ತೋರ್ಪಡಿಸುತ್ತಿದ್ದರು ಇವರ ಶಕ್ತಿಯನ್ನು ಮೆಚ್ಚಿ ಇವರನ್ನು ಆಯುರ್ವೇದ ಮತ್ತು ಯುನಾನಿ ದಿನಧಿಗಳ ಶೋಧನಾಕಾರ್ಯಕ್ಕೆ ಮದ್ರಾಸ್ ಸರ್ಕಾರದವರು ಜಾನಾಯಿಸಿದ್ದರು. ಈ ಚಿಕ್ಕ ವಯಸ್ಸಿನವರಿಗೆ ಮಿಲಿಟು ಸರ್ವಿಸ್ ದೊರತಿರುವುದು. ಇವರಿಗೆ ಲಿಫ್ಟನೆಂಟು ದರ್ಜೆಯನ್ನು ಕೊಟ್ಟು ಪೂನಾದಲ್ಲಿರುವ ಯುದ್ಧದ ಆಸ್ಪತ್ರೆಗೆ ಕಳಹಿಸಿರವದಾಗಿ ಕೇಳುತ್ತೇವೆ. "ವಿದ್ಯಾ ಸರ್ವತ್ರಪೂಜ್ಯತೆ"

ವಾಗ್ದಂಧದಲ್ಲಿರುವ ಸುಖವುದ್ದಲ್ಲಿ ಮತ್ತು ಶಾಕುತ್ತಲ್ಲಿ ಎಂಬುವರನ್ನು ವಿಮುಕ್ತರನ್ನಾಗಿ ಮಾಡಲು ಒಂದನಿಜೇಧರೂಪವಾದ ಅನೇಕ ಉಪಾಸಧೆಗಳನ್ನು ನಡೆಸಿರುವರು. ಆದಾಗ್ಯೂ ಈ ಇಬ್ಬರು ಮುನಲ್ಮಾ ದೇಶಾವಿಮಾನಿಗಳನ್ನು ಇನ್ನೂ ನಿರ್ಬಂದವಿಂದ ಬಿಟ್ಟಿರುವುದಿಲ್ಲ.

ಬ್ರಿಗಾಕಾದಲ್ಲಿ ಮುಂಜನೆಯುವ ರಾಷ್ಟ್ರೀಯ ಮಹಾಸಭೆಗೆ ಅಧ್ಯಕ್ಷರು ಯಾರಾಗಬೇಕೆಂಬುವ ವಿಚಾರದಲ್ಲಿ ಸಂಘಸಿದ್ದ ಎರಡು ಅಭಿಪ್ರಾಯಗಳೂ ಒಂದಾಗಿ ಈಗ ಶ್ರೀಮತಿ ಬೆಸಂಟರವರನ್ನು ಸಭೆಗೆ ಅಧ್ಯಕ್ಷರನ್ನಾಗಿ ಮಾಡಿರುತ್ತಾರೆ

ಭಾರತೀಯರು ಅನುಭವಿಸುತ್ತಿರುವ ಕಷ್ಟಗಳನ್ನು ದೇಶೀಯ ಆಂಗ್ಲೋಯರಿಗೆ ತಿಳಿಸುವವಲುವಾಗಿ ಲಂಡನ್ನಿಗೆ ಹೋಗಿರುವ ಜೋಸೆಫ್ ಬ್ಯಾಪ್ಟಿಸ್ತ ಎಂಬುವರು "ನಾನು ತೆಗೆದುಕೊಂಡಿರುವ ಕಾರ್ಯವನ್ನು ಸಾಧಿಸಲು ನನ್ನ ಸಹಾಯಕ್ಕೆ ಮತ್ತೆ ಕೆಲವರನ್ನು ಲಂಡನ್ನಿಗೆ ಕಳುಹಿಸಬೇಕು." ಎಂದು ಬರೆದಿರುತ್ತಾರೆ

ಹಿಂದೂದೇಶದ ಸ್ವರಾಜ್ಯ ಶಾಸನಸಭೆಗೆ ಕೆಲವುದಿನಗಳಹಿಂದೆ ಒಂದು ಲಕ್ಷರೂಪಾಯಿಯನ್ನು ಕೊಟ್ಟ ಬೆ|| ಜೋಮಾಜಿಯವರು ಬೆ|| ಜೋಸ್ ರವರ ವಿದ್ಯಾಸವಿದ್ಯಾಲಯಕ್ಕೆ ಮತ್ತೊಂದು ಲಕ್ಷರೂಪಾಯಿಯನ್ನು ಕೊಟ್ಟಿರುತ್ತಾರೆ.

ಮ|| ಮಹಮ್ಮದ್ದಲಿಯವರನ್ನು ಮುಂದೆ ನಡೆಯುವ "ಆಲ್ ಇಂಡಿಯಾ ಮುಸ್ಲಿಂಲೀಗ್" ಸಭೆಗೆ ಅಧ್ಯಕ್ಷರನ್ನಾಗಿ ಮಾಡಲುತ್ತಾರೆಂದು ತಿಳಿದುಬಂದಿರುತ್ತದೆ ಇವರಿಗೆ ಬೀಪ್ರದಲ್ಲಿ ಬಂಧ ವಿಮೋಚನೆಯಾಗಲೆಂದು ಹಾರೈಸುತ್ತೇವೆ.

ಕಳೆದ ಫೆಬ್ರವರಿ ಕೋಲಾರದಲ್ಲಿ ವೇಶ್ಯಾಸ್ತ್ರೀಯರು ಒಂದು ಸಭೆಯನ್ನು ನಡೆಯಿಸಿ ಅಲ್ಲಿ ತಾವು ತಮ್ಮ ಕಸುಬನ್ನು ಬಿಟ್ಟು ಇತರ ಹಿಂದೂ ಸ್ತ್ರೀಯ ರಂತೆಯೇ ಪತಿವ್ರತೆಯರಾಗಿರಬೇಕೆಂತಲೂ, ಇತರ ಹಿಂದೂ ಬಾಲಕ ಬಾಲಕಿಯರಿಗೆ ಕೊಡುತ್ತಿರುವ ಸಲುಭೆಯನ್ನು ಸುನವುಳ್ಳ ಸರಕಾರದವರು ತಮ್ಮ ಮಕ್ಕಳಿಗೂ ಕೊಟ್ಟು ಅವರನ್ನು ಊರ್ಜಿತಸ್ಥಿತಿಗೆ ತರಬೇಕೆಂತಲೂ ರಾವನ್ನು ಮಾಡಿರುತ್ತಾರೆ

ಯುದ್ಧ ವಾರ್ತೆ.

ಬ್ರಿಟಿಷರು ಎಂದಿನಂತೆ ಮುಂದೆ ನುಗ್ಗಿ ಪೋಗುತ್ತಲಿದಾರೆ. ಸುಮಾರು 11 ಮೈಲಿಯಷ್ಟು ಪ್ರದೇಶವನ್ನು ಜೆಲ್ಲಿಯಂಗೊಳಗೆ ಅಕ್ರಮಿಸಿಕೊಂಡರು ಜರ್ಮನಿಯವರೇನೋ ಸೋಲಿ-ಗುತ್ತಾ ಬಂದಿದೆ ಕಳೆದವಾರದಿಂದ ಈಚೆಗೆ ಸೈನ್ಯ ನಷ್ಟವು ಎಸಲಾತನಾದುದುಂದ ಜರ್ಮನಿಯವರು ರಣ್ಯಾವಣಂಗದ ಲ್ಲಿದ್ದ ತಮ್ಮ ಸೈನಿಕರನ್ನು ಹಿಂತಿರುಗಿ ಕರೆಯಿಸಿಕೊಳ್ಳುತ್ತಿರಾರೆ ಯುದ್ಧದ ಸಾಲಿನ ರಾಜ್ಯಗಳಲ್ಲಿ ಅಕಸ್ಮಿಕವಾದ ಯುದ್ಧಗಳು ನಡೆಯುತ್ತಿವೆ. ಫಿರಂಗಿಗಳ ಹೊಸೆತದ ಹೋರಾಟವನ್ನು ವಿವರಿಸುವುದಸದಳ. ಜರ್ಮನಿಯವರು ಒಂದು ರಾತ್ರಿಯಲ್ಲಿ ಬ್ರಿಟಿಷರ ಒಂದು ಕಂದಕಕ್ಕೆ ನುಗ್ಗಿ ನಷ್ಟವನ್ನುಂಟು ಮಾಡಿ ಸಿಕ್ಕಿದವರನ್ನು ಕೈಸೆರೆಮಿಡಿದುಕೊಂಡು ಹಿಂತಿರುಗಿ ಬರುತ್ತಿದ್ದರು ಆಗ ಮಿತ್ರಸುಂತಿಯ ಸೈನಿಕರು ಅವರ ಬೆನ್ನತ್ತಿ ತಮ್ಮವರನ್ನು ಬಿಡಿಸಿಕೊಂಡು ಅವರ ಕಡೆಯವರನೇಕರನ್ನು ಕೊಂದುಬಂದರು ಬ್ರಿಟಿಷ್ ಮತ್ತು ಫ್ರೆಂಚ್ ವೈದ್ಯಾನಿಕರು ಶತ್ರುಗಳ ಫೀಲ್ಡ್‌ಸ್ಟೇರ್ಷ್ ಕಾರ್ಯಾಚರಿ ಇವುಗಳ ಬೇಳೆ ಗುಂಡುಗಳನ್ನು ಸುರಿಸಿ ನಾಶಪಡಿಸುತ್ತಿರುವರು. ಇಂಗ್ಲೆಂಡಿನ ಬೇಳೆ ಸಿಡಿಗುಂಡುಗಳನ್ನು ಹಾಕಬೇಕೆಂದು ಬರುತ್ತಿದ್ದ ಕಲವು ಶತ್ರು ವಿಮಾನಗಳನ್ನು ನಾಶಪಡಿಸಿದರು. ಸ್ಪೆಂಜರ ವಾರಿನಲ್ಲಿ ಪರ್ಷಿಯಾದಲ್ಲಿ ನಿರಂಗಿಗಳ ಹೋರಾಟವು ಅತಿಭಯಂಕರವಾಗಿರುವುದು ಜರ್ಮನಿಯವರು ಮಲುವುದಳಿ ಹೋರಾಟವಾಗಿ ಮುತ್ತಿಗೆ ಹಾಕಿದರು ಆದರೆ ಹಿಂದಕ್ಕೆ ಓಡಿಸಲ್ಪಟ್ಟರು.

ಕಾಕ್ಯಾದಲ್ಲಿ ಒಂದು ಸಭೆಯು ಹಿಂದೆ ಮಳಿದಂತೆ ನಡೆಯಿತು ಆದರೆ ಜನರ ಅಭಿಪ್ರಾಯವು ಬಿನ್ನಾಭಿನ್ನವಾಗಿದ್ದುದರಿಂದ ಪ್ರಜಾಪ್ರತಿನಿಧಿಪ್ರಭುತ್ವ ವುಂಟಾಗುವುದು ಸಂದೇಹವಾಗಿದೆ ಆದರೂ ಯುದ್ಧವನ್ನು ಭಯಂಕರವಾಗಿ ಕಾಯುತ್ತಿರುವರು. ರೀಗಾ ಪತ್ತನದಲ್ಲಿದ್ದ ಒರ್ಮನಿಯವರನ್ನು ಹಿಂದಕ್ಕೆ ಒಡಿಸುತ್ತಿರುವರು. ಇಟಲಿಯವರು ಆಸ್ಟ್ರಿಯಾದವರ ಯುದ್ಧದ ಹಡಗುಗಳವೇಲೆ ವಿಮಾನದಿಂದ ಸಿಡಿಮದ್ದಿನ ಗುಂಡುಗಳನ್ನು ಸುರಿಸಿ ನಷ್ಟ ಪಡಿಸಿರುತ್ತಾರೆ ಬಾಗ್ದಾದಿನಪತ್ತಿರ ಟರ್ಕಿಯರುಗೂ ಮತ್ತು ಬ್ರಿಟಿಷರಿಗೂ ನಡೆದ ಕದನದಲ್ಲಿ ಟರ್ಕಿಯವರು 300 ಬಂಡಿಗಳೊಂದಿಗೆ ಸೋತುಹೋದರು. ಅಮೇರಿಕದವರು ಸುಬೆಮೇರ್ಗಳನ್ನು ನಾಶಪಡಿಸಲು ಹೊಸ ಜಲಯಂತ್ರಗಳನ್ನು ತಯಾರು ಮಾಡಿರುವರು. ಅಲ್ಲದೆ ವಿಮಾನಗಳನ್ನು ಕಟ್ಟುತ್ತಿರುವರು, ಶತ್ರುವಿನ ಟಾರ್ಪಿಡೋವಿಗೆ ಬ್ರಿಟಿಷರ ಹಡಗೊಂದು ತಗಲಿ ಐರ್ಲೆಂಡ್ ಉತ್ತರಭಾಗದಲ್ಲಿ ಮುಳುಗಿಹೋಯಿತು. ಜಪಾನಿನವರು ಒಂದು ಯುದ್ಧದಾಟಿಗನ್ನು ಸಂರಕ್ಷಿಸುತ್ತಿದ್ದರು ಅದು ಶತ್ರುವಿನ ಮತ್ತೊಂದು ಟಾರ್ಪಿಡೋವಿಗೆ ತಗಲಿ ಮುಳುಗಿಹೋಯಿತು. 370 ಜನರನ್ನು ಬದುಕಿಸಿದರು ಇದಲ್ಲದೆ 16 ಪ್ರಯಾಣೀಕರ ಹಡಗುಗಳೂ, ಇನ್ನೂ ಕೆಲವು ಸಣ್ಣಪ್ಪ ಮುಳುಗಿಸಲ್ಪಟ್ಟವು.

ರಾತ್ರಿವೇಳೆಯಲ್ಲಿ ಜರ್ಮನಿಯ ವೈಮಾನಿಕರು ತಂಡತಂಡವಾಗಿ ಬಂದು ಲಂಡನ್ನಿನ ಬೀಳುಬಣದಮೇಲೆ ಸಿಡಿಗುಂಡುಗಳನ್ನು ಸುರುಸುತ್ತಿದಾರೆ. ಅದುಂದ ನಷ್ಟವೇನು ವಿಪರೀತವಾಗದಿದ್ದರೂ ನ್ಯಾಯಾನ್ಯಾಯವಾಗುತ್ತಿದೆ. ಕಠಾರಾಗುವ ವಿಷಯವೇನೋ ಹೆಚ್ಚಾಸ್ತವಾಸ್ತವದಲ್ಲಿನೆ ಯಾವುದೂ ಖಂಡಿತವಿಲ್ಲ.

ಪಾತಿವ್ರತ್ಯ.

(Communicated)

ಪತಿವ್ರತಾಧರ್ಮವು ಪುರಾತನಕಾಲದಿಂದಲೂ ಆರ್ಯ ಮಹಿಳೆಯರಿಗೆ ಪಾರಮಾರ್ಥಿಕವಾಗಿರುತ್ತಿಂಬುದು ಸರ್ವವೇದ್ಯವಾಗಿದೆ. ಪತಿಯು ಸುಖದ ಕಾಲಗಳಿಗೆ ಸಮಾನಸ್ಥಿತಿಯಿಂದ ಭಾಜನರಾಗಿ ಪತಿಯಾಜ್ಞಾನುವರ್ತಿಸಿಗಳಾಗಿದ್ದು ನಿರ್ದಿಷ್ಟ ಪತಿಭಕ್ತಿಯಿಂದ ತಾವೂ ಸಚ್ಚರಿತ್ರೆಯರಾಗಿ ಲೋಕೋಪಕಾರವನ್ನು ಮಾಡಿರುವುದಕ್ಕೆ ಅನಸೂಯ, ಅರುಂಧತಿ, ತಾರಾ ಯಣಿ, ಸೈವ್ರೇಯಿ, ಇಂದ್ರಮತಿ, ದಮಯಂತಿ, ಸಾವಿತ್ರಿ, ಮುಂತಾದ ಆರ್ಯಮಹಿಳೆಯರು ನಿರಂತರ ಸಾಕ್ಷಿಗಳಾಗಿರುತ್ತಾರೆ. ಇಂತಹ ಸ್ತ್ರೀಯರ ಚರಿತ್ರೆಯೇ ಪುಣ್ಯಚರಿತ್ರೆ. ಇವರುಗಳು ಸತವಳಿಕೆಯೇ ಲೋಕಕ್ಕೆ ಸದೋಧೆಮಾಡಿ ಉದ್ಯಾನ ಪ್ರಸೂನದಲ್ಲಿ ಪಾತಿವ್ರತ್ಯದ ಮಹಿಮೆಯು ಬೆಳಗುವಂತೆ ಮಾಡಿರುತ್ತದೆ ಆರ್ಯಮಹಿಳೆಯರು ಸಂಪೂರ್ಣ ವಿದ್ಯಾವತಿಯರಾಗಿದ್ದುದೇ ಇಂತಹ ದರ್ಜೆಕ್ಕೆ ಕಾರಣವಾಗಿತ್ತೆಂಬುದರಲ್ಲಿ ಸಂದೇಹವಿಲ್ಲ. ಈಗಲೂ

ನಾಧ್ಯೋಪಕೋಪಾಧ್ಯಾಯರುಗಳ ಸಹಾಯದಿಂದಲೇ ಸನಾತನಸಂಸ್ಥೆಯು ನೆಲೆಗೊಂಡಿರುತ್ತದೆ ಇಂತಹ ಸಾಧ್ವಿಯರೇ ನಮ್ಮ ಆರ್ಯಬಾಲಿಕೆಯರಿಗೆ ವಿದ್ಯೆ, ಧರ್ಮ, ಗುಣ ಮುಂತಾದ ಬಾಗಿಗಳನ್ನು ಬೋಧಿಸುವುದಕ್ಕೆ ಆರ್ಹರು. ಇಂತಹ ಸದ್ಬೋಧ ಬೋಧಕಿಯಲ್ಲಿ ನಮ್ಮ ಬಾಲಿಕೆಯರು ಪತಿವ್ರತಾದರ್ಮವನ್ನರಿತು ಮುಂದಿದ್ದಗತಿಗಳನ್ನು ಹೊಂದುವುದಕ್ಕೆ ಸಂಪೂರ್ಣ ಸಹಾಯವಾಗುತ್ತದೆ ಹೀಗಲ್ಲದೇ, ಗುಣವತಿಯರಲ್ಲದೇ, ಅಲ್ಪವಿದ್ಯಾವತಿಯರಾಗಿ ಕೇವಲ ಕಾದಂಬರಿ ಮುಂತಾದ ಶೃಂಗಾರಗ್ರಂಥಗಳನ್ನೋದಿ ಇಂದ್ರಿಯಪರವಶೆಯರಾಗಿ, ಬಿನ್ನರುಚಿಗಳನ್ನ ಸೇವಿಸಿ ಸಾತಿಪ್ರೇತಕ್ಕೆ ಉದ್ಯುಪಸೆಯನ್ನು ಮಾಡಿದ ಸ್ತ್ರೀಯರುಗಳು ಉದರಪರಿಪಾಲನೆಗಾಗಿ ಉಪಾಧ್ಯಾಯಿನಿರಾದಲ್ಲಿ ಅವರು ಬಾಲಿಕೆಯರಿಗೆ ಯಾವಧರ್ಮವನ್ನು ಬೋಧಿಸಬೇಕು! ಪತಿವ್ರತಾಧರ್ಮವನ್ನು ಬೋಧಿಸಲು ಅವರಿಗೆ ಸಂಕೋಚ. ಒಂದುವೇಳೆ ಬೋಧಿಸಿದರೂ, ಅದು ಪ್ರಪಂಚ ಇಂತಹ ಉಪಾಧ್ಯಾಯಿನಿಯರುಗಳ ಸಂಸರ್ಗದಲ್ಲಿರುವುದರಿಂದ ನಮ್ಮ ಬಾಲಿಕೆಯರು ದಿನಕ್ರಮದಲ್ಲಿ "ಗುರುವಿನಂತೆ ಶಿಷ್ಯ" ಎಂಬ ಗಾದೆಯನ್ನು ಸಾರ್ಥಕಪಡಿಸಿ ವ್ಯವಹಾರದಲ್ಲಿ ಆಭ್ಯಂತರವಿರುವುದಿಲ್ಲ. ಆದ್ದರಿಂದ ತಂದೆತಾಯಿಗಳು ಬಾಲಿಕೆಯರನ್ನು ಇಂತಹ ಉಪಾಧ್ಯಾಯಿನಿಯರುಗಳಲ್ಲಿ ವಿದ್ಯಾಭ್ಯಾಸಕ್ಕೆ ಕಳುಹಿಸುವುದರಿಂದ ಪೂರ್ಣಪರಿಹಾರವಾಗಬೇಕು. ಅಲ್ಲದೆ ಧರ್ಮಪ್ರತಿಪಾಲಕರಾದ ನಮ್ಮ ಸರಕಾರದವರೂ ಉಪಾಧ್ಯಾಯಿನಿಯರನ್ನು ನೇಮಿಸುವಲ್ಲಿ ಅವರ ಗುಣಾವಲೋಕನವನ್ನು ಪ್ರಾಮುಖ್ಯವಾದ ಆರ್ಹತೆಯನ್ನಾಗಿ ಅಂಗೀಕರಿಸಿದಲ್ಲಿ ಪತಿವ್ರತಾಧರ್ಮವು ನಮ್ಮರಾಷ್ಟ್ರದಲ್ಲಿ ಶಾಶ್ವತಸ್ಥಾಯಿಯಾಗಿರುವುದಕ್ಕೆ ಸಂದೇಹವಿರುವುದಿಲ್ಲ.

— ——

ಚಂಚಲೆಯ ಸುನೆ.

[All Rights Reserved.]

(ಎಂದಿನ ಸಂಚಿಕೆಯಿಂದ ಮುಂದಕ್ಕೆ ಸಾಗಿದುದು).

ಅಮಲ—ಅಮೇ ಸಂತೋಷವಲ್ಲವೆ? ಅಮೇಲೆ ನಾನು ಇನ್ನೂ ಮುಂದಕ್ಕೆ ಹುಡುಕಿಕೊಂಡು ಹೋಗುತ್ತೇನ ಅವನು ತನ್ನ ಸಮಯ ಹೋದ ಬೋಧನ್ನು ಹೆಚ್ಚಿಕೊಂಡು, ನಿಧಾನವಾಗಿ ನಾಯುತ್ತಿದ್ದುದ್ದನು ನೋಡಿದ ಅವನು ಅತ್ತೀಮರದ ಕಳಗೆ ನೀರುಹುಯುವ ಬಳಗ ಹೋಗಿ ಕೊಳೆಯಲ್ಲಿ ತನ್ನ ಪಾದಗಳನ್ನು ತೊಳೆದುಕೊಂಡನು ನಂತರ ತನ್ನ ಗಂಟಿನಿಂದ ಸ್ವಲ್ಪ ಹುರಿಬೆನ್ನು ಬಿಚ್ಚಿ, ನೀರಾಸಲ್ಲಿ ಬೆಸಿ ತಿನ್ನುವುದಕ್ಕೆ ಪ್ರಾರಂಭಿಸಿದನು. ಪುನಃ ಗಂಟುಕಟ್ಟಿ, ಹೆಗಲಮೇಲಕ್ಕೆ ಮುದುಸಿಕೊಂಡನು. ನದಿಯನ್ನು ಹಾಯ್ದನು. ಅವನ ಹಾಗೆ ನಾನು ನದಿಬಳಿಗೆ ಹೋಗಿ ಪರಿಬ್ಬನ್ನು ತಿನ್ನಬೇಕೆಂದು ಚಿಕ್ಕಮ್ಮನನ್ನು ಕೇಳಿರುವೆನು.

ಮಾಧವ—ನಿನ್ನ ಚಿಕ್ಕಮ್ಮನು ಅದಕ್ಕೆ ಏನು ಹೇಳಿದಳು?

ಅಮಲ—"ನಿನಗೆ ಗುಣವಾಗಲಿ, ನಂತರ ನಾನು ನಿನ್ನನ್ನು ಕರೆದುಕೊಂಡು ಹೋಗುವೆನು" ಎಂದು ಹೇಳಿದಳು. ಚಿಕ್ಕವ್ವಾ! ನನಗೆ ಯಾವಾಗ ವಾಸಿಯಾಗುತ್ತದ.

ಮಾಧವ—ನಿನ್ನಗು! ಎಷ್ಟತಾಳಲಾಗುವುದಿಲ್ಲ.

ಅಮಲ—ಏನಿದ್ದೇ! ನನಗೆ ಗುಣವಾದಕೂಡ್ಲೆ ನಾನು ಅಲ್ಲಿಗ ಸೆಟ್ಟಿಗೆ ಹೋಗುವೆನು.

ಮಾಧವ—ನೀನು ಎಲ್ಲಿಗೆ ಹೋಗುವ?

ಅಮಲ—ಅನೇಕಾನೇಕ ಹೆಣಗಳನ್ನೆಲ್ಲ ನೀರಿನಲ್ಲಿ ತಾಡುಕೊಂಡು, ದಾಟಿ ಹೋಗ ಬೇಕೆ ನದ್ಯಾಪ್ತದ ಏರಿಯಲ್ಲಿ ಎಲ್ಲರೂ ಜಾಗಲನ್ನು ಮುತ್ತಿಕೊಂಡು ಸ್ನೇಹಪಾತ್ರಿರುವಾಗ ನಾನು ದೂರದಿಂದಲೇ ಕೆಲಸ ವನ್ನು ಮಾಡುತ್ತಾ ಆಲಿಯುವೆನು.

ಮಾಧವ—ಹಾಗಾದರೆ, ನೀನು ಹೊದಲು ಗುಣವಾಡಿಕೊಳ್ಳುವುದು ಉತ್ತಮ. ಆನಂತರ—

ಅಮಲ—ಹಾಗಾದರೆ, ನಾನು ವಿದ್ಯಾವಂತನಾಗುವುದು ನಿನಗೆ ಬೇಕಿಲ್ಲ. ಅಲ್ಲವೇ ಚಿಕ್ಕಪ್ಪ!

ಮಾಧವ—ಹಾಗಾದರೆ ನೀನು ಏನಾಗುವೆ? [ಸರೀಕ್ಷೆ]

ಚಂದ್ರಕಾಂತ ತೈಲ.

1.5 ಬಂದೊಗಳನ್ನು ಸಿವಿಲುವಮಂದಲೆ ಧನುರ್ವಾಯು, ಪಾರ್ಶ್ವವಾಯು, ಮೂಳೆ ಸಂಬಂಧವಾದ ಜಾಡ್ಯಗಳು, ಮತ್ತಳಿ ಮಲಿಮಂದ, ಜ್ವರ, ಮುಂತ್ಕಾದುವುಗಳು ಗುಣವಾಗುತ್ತವೆ ಕ್ರಯ ಸೀಸೆ 1ಕ್ಕೆ 1 ಆಣೆ

[೨-೨] ನಮ್ಮ ವಿಳಾಸ:—ಚಂದ್ರಕಾಂತ ಡಿಪೋ, ಸ್ಯೆನೂರು.

೧೦೦೦ ರೂಪಾಯಿಗಳು ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ.



ರಿಜಿಸ್ಟರ್ಡ್ ಟ್ರೇಡ್‌ಮಾರ್ಕ್

ಈ "ಸಾಲಾಮಿಸ್ರಿ ಮುರಬ್ಬಾ" ಪ್ರಸೇವನೆಯಿಂದ-ವೀರ್ಯವೃದ್ಧಿಯಾಗಿ ಇವ್ವರೂ, ಸ್ವಪ್ನಸ್ಖಲನ ಪ್ರಿಯವಾದರೂ, ಮುಕ್ಕಾದಲ್ಲ ಉರಿಮೂತ್ರವಿದ್ದರೂ, ಮೂತ್ರದೋಂಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲ ರಕ್ತವು ಕೆಟ್ಟು ಹೋಗಿದ್ದರೂ ಈ "ಸಾಲಾಮಿಸ್ರಿ ಮುರಬ್ಬಾ" ಸೇವನೆಯಿಂದ ಗುಣವಾಗಿ ಶರೀರವು ಒಳ್ಳೆಸ್ಥಿತಿಯಲ್ಲಿರುವದು ಈ ಮುರಬ್ಬಾವು ಸಾಲಾಮಿಸ್ರಿಯಿಂದ ತಯಾರಿಸಲ್ಪಟ್ಟಿಲ್ಲವೆಂದು ನಿಶ್ಚಯಪಡಿಸುವವರಿಗೆ—೧,೦೦೦ ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವದು ದಾಗೆ ನಿಶ್ಚಯಪಡಿಸಲು ಬಯಸುವವರು ಹಣವನ್ನು ನಾನು ಕೊಡುವ ಸರಕಾರಿಸಾಧ್ಯಾಪೆರೆ ಸರಕಾರದ ಮೂಲಕ ಪ್ರಂದ ಪಡೆಯಬಹುದು

ಕ್ರಯ ಡಬ್ಬಿ ೧ ಕ್ಕೆ ರೂ. ೨-೦-೦. ವಿಪಾಲು ಪಿರ್ಜು ೧ ಡಬ್ಬಿಯಿಂದ ೪ ಡಬ್ಬಿಗಳ ವರೆಗೆ ೦-೬-೦. ಉಪಯೋಗಿಸುವ ವಿಧವು ಡಬ್ಬಿಯ ಜೊತೆಯಲ್ಲಿರುವುದು

ಡಿ. ಮನ್ನಾಲಾಲ್, ಡಿಲ್ಲೀ ವೈದ್ಯರು,

[೫-೫] ೫೫, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಬೆಂಗಳೂರು ಚಂದಾದಾರರಿಗೆ ಸೂಚನೆ.

ಬೆಂಗಳೂರಿನಲ್ಲಿ ಚಂದಾದಾರರಾಗಿಲು ಇಷ್ಟವಿಲ್ಲವಿದ್ದಲ್ಲಿ, ಅಲ್ಲಿ ನಮ್ಮ ಪ್ರತಿನಿಧಿಗಳಾದ ಶ್ರೀಮತಿ ಬಾಲಸರಸ್ವತಿಯವರಿಗೆ ಚಂದಾಹಣವನ್ನು ಕೊಟ್ಟು, ರಸೀತಿ ಪಡೆದು, ಪತ್ರಿಕೆಯನ್ನು ಅವರಿಂದಲೇ ಪಡೆಯಬಹುದು ಇತರ ಮಹಿಳೆ ಚಂದಾದಾರರಾಗುವವರಿಗೆ ವಾರ್ಷಿಕೆಚಂದಾ 12 ಆಣೆ ಮಾತ್ರ ಅಕಾರರಿಗೆ ರೂ 1—೦—೦

ವಿಳಾಸ—ಶ್ರೀಮತಿ ಬಾಲಸರಸ್ವತಿ,
15, ಆರ್ಕಾಟು ಶ್ರೀನಿವಾಸಾಚಾರ್ ಸ್ಟ್ರೀಟು,
ಬೆಂಗಳೂರು ಸಿಟಿ.

"ಸತ್ಯವಾದಿ"

ವಾರ್ಷಿಕ ಚಂದ—ಸ್ವಳದವರಿಗೆ 8 ಆಣೆ. ಪರಸ್ವಳದವರಿಗೆ ರೂ 1 ಆಣೆ ೬. ಪತ್ರಿಕೆಸಂಬಂಧ:—ದೇಶೋನ್ನತಿಗೆ ಸಂಬಂಧಪಟ್ಟ ಪಾತ್ರಿಗಳೆಲ್ಲವನ್ನೂ ಪ್ರಕಟಿಸಲ್ಪಡುವವು. ಇತರ ವಿಷಯಗಳನ್ನು ಬರೆದು ತಿಳಿಯಪಡಿಸುವುದು

ವ್ಯವಸ್ಥಾಪಕರು, "ಸತ್ಯವಾದಿ," ಮೈಸೂರು

Printed and Published by Mr B V Narasimha Iyengar, at the Royal Press, Mysore, for the Editor & Proprietor.

REGD. No M. 1299 ಬೆಲೆ ಪ್ರತಿ 3 ಪೈ.

SATYAVADI

ರಾಜಕೀಯ, ಸಾಮಾಜಿಕ, ಮತವಿಚಾರ, ಭಾಷಾಭಿವೃದ್ಧಿ ಮುಂತಾದ ವಿಷಯಗಳನ್ನೊಳಗೊಂಡಿರುವ

"ಸತ್ಯವಾದಿ" ಪಾರಪತ್ರಿಕೆ

ವಾರ್ಷಿಕ ಹುಂದಾ 0—8—0. ಪ್ರತಿ ಮಂಗಳವಾರ ಪ್ರಕಟಿಸಲ್ಪಡುವುದು. [ಅಂಚೆಚ್ಚು ಸೇರಿ 1—6—0

ಸಂಪುಟ I ಮಂಗಳವಾರ 23ನೇ ಅಕ್ಟೋಬರ್, 1917 ಸಂಚಿಕೆ 6

ಸತ್ಯಂಬ್ರೂಯಾತ್ಪ್ರಿಯಂಬ್ರೂಯಾನ್ನ ಬ್ರೂಯಾತ್ಸತ್ಯಮಪ್ರಿಯಮ್ |
ಪ್ರಿಯಂಚನಾನೃತಂಬ್ರೂಯಾದೇಷಧರ್ಮಸ್ಸನಾತನಃ ||
ಆತ್ಮಂವಾರ್ಥಾಯಜೀವಾನಾಂ ರಕ್ಷಣ್ಪ್ರಾಣಭೃತಾಂ ತ್ಯಜೇತ್ |
ಆತ್ಮಾನಮಿಂಸಯೇನಾಯುಕ್ತಃ ಸದಸ್ಯ ಇತಿಕಶ್ಚಯಃ ||

ಸ್ವರಾಜ್ಯ.

ಸ್ವರಾಜ್ಯ ಶಾಸನವು, ಕಾರ್ಯೋಸಾಧನಮದ್ಯಾವನ್ಮಾಗಿಯೂ ಮತ್ತು ಒಳಾಡಳಿತಾರವನ್ನಾಗಿಯೂ ಮಾತ್ರವಲ್ಲದೆ ಮಾನವ ದೈರ್ಯಸ್ಥೈರ್ಯಗಳು ಊರ್ಜಿತಸ್ಥಿತಿಯನ್ನು ಹೊಂದುವಂತೆ ಮಾಡುತ್ತದೆ ಎಂದು ಹಳ್ಳಿಯ ಅಧಿಪತಿ ಒಬ್ಬ ಸಣ್ಣ ಜನಾಂಗದ ಪೋಷಣೆ ಆಡಳಿತದಲ್ಲಿರತಕ್ಕವನು, ಸಾಧನವಾಗಿ ಯೋಚಿಸಲು ಮತ್ತು ಕೆಲಸಮಾತ್ರಕಾಲ ಸಮಯವನ್ನು ಕೂಟ್ಟಾಗಲಲ್ಲದೆ ಮಾನುಷ ಸ್ವಭಾವವನ್ನು ಅದರ ಸಂಪೂರ್ಣಾರ್ಥದಲ್ಲಿ ತಿಳಿದುಕೊಳ್ಳಲು ಸಮರ್ಥರಾಗುವರು. ಅಂತಹ ಸಮುದಾಯ ಜೀವಕಾಗಿರುವ ಪ್ರದೇಶದ ಪ್ರತಿಯೊಬ್ಬನೂ ಅಲ್ಪತರನಾದ ಮನುಷ್ಯನಾಗಿರುವನು. ಅವನ ಯೋಜನೆಗಳಲ್ಲಾಗಲಿ, ಶಕ್ತಿಯಲ್ಲಾಗಲಿ, ಆಲೋಚನೆಯಲ್ಲಾಗಲಿ, ಪ್ರಯತ್ನಗಳಲ್ಲಾಗಲಿ ಕ್ಷುಲ್ಲಕತೆಗಳಾಗಿ ಏಂತಿವೆ ಜೀವಾತ್ಮಕ್ಕೆ ಇಂತಹ ಒಳಕಾರ್ಯವಾವ ಕ್ಷುಲ್ಲಕಸ್ವಭಾವವು ಅವನಿಗೆ ಪ್ರಾಣಹಾನಿಗಿಂತಲೂ ಅಧಿಕತರವಾದ ಉಪಪತಿಯಾಗಿರುತ್ತದೆ.

ನೆವರಾತ್ರಿ.

ಶ್ರೀಮತ್ಕರ್ನಾಟಕೋರ್ವೀಪತಿಯೆಸಸ ಮಯಾರಾಜಯತ್ಸೈಂಪ್ರಧೀಪಾಮ |
ಸಾಮಾತ್ಯಂ ಸಾನುಜಂ ತಾಂ ಸಕಲಬುಧಜನೋಪೇತನಾಶ್ವೀಯಕಲ್ಪೇ ||
ಸ್ಥೈರ್ಯಾತೀಯುತೋದ್ಯತ್ಪರಪದಕಟಿಯೋಗೋಧೋವಲಾದ್ಯ
ಸಂಪಂ |
ನಾಕೋದಂ ಶ್ರೀಮಹೇಂದ್ರಪುರದೊಳಗೆ ಸಿಂಹಾಸನಾರೂಢನಾದಂ || ೧ ||

ಮಹಿಷೂರಿಪ್ರಾಂತ್ಯದೆಲ್ಲಾ |
ಸಮಕಾರಿತ ವಿಷಯಸಂಪಗಳ್ ಜಟ್ಟಿಸುತ್ತೊಲ್ ||
ಸುಜಿತವಿ ಯುವರಾಜಂ ತಾಂ |
ಸಹಮಂತ್ರ್ಯಧಿಕಾರಿಸಭೆಯತೆರೆಯಿಂತೆಂದೆಂ || ೨ ||

ದೇಶದಜನಗಳ್ ಮುದದಿಂ |
ದೇಶದವಸ್ತುವ ವಿಧಿಪಕಾಶಲಂತಾಸಾ |
ದಾಸಿಜವಸ್ತುಸಿದರ್ಶಿ |
ದರ್ಶಮೆಸಿತಂ ವಿಭವದೆಸೆಗೆಂ ಪ್ರಧಮೊಳ್ || ೩ ||

ಪ್ರಜೆಗಳ್ ಕೋರುವ ಸುಖಮಂ|
ನಿಜಮಿಂ ಪ್ರತಿವಿಧಿಗಳ್ದಮಿತರಿಲ ಸದೆಯೊಳ್ ||
ಪ್ರಜೆಗಳಕಾರ್ಯವ ನೊಡದವಿಪ |
ಸುಜನಂ ಮಿಶ್ರೇತ್ತರಾಜ್ಯ ಸಸ್ತಗಸಚಿವಂ || ೪ ||

ವರವಿದ್ಯಾಪ್ರದೆಯೆಸಿದ |
ಸರಸತಿಯಂ ಮೂಲತಾಪೆ ಶುಭಕರದಿಸದೊಳ್ ||
ಗುರುತರಭಕ್ತಿಯಿನಾರ್ಚ್ಚಿಂ |
ಮಿಪಮೋಳ್ ಪೂಜಿಸ್ಪೆದು ಕೋರಿಕವಹೆವರ್ || ೫ ||

ಇದುನೆ ನವರಾತ್ರಿಯೆಂಬರ್ |
ಪದುಳದಿಜನಮಲ್ಲ ದುರ್ಗೆಯಂ ಒಹುವಿಧದಿಂ ||
ಸದನಂಗಳೊಳಾರಾಧಿಸಿ |
ಮುದದಿಂ ದುತ್ಸವವಚಿಪರಾದಿರವಿಂದಂ || ೬ ||

ಹುಗಜರಥಪಸ್ತ್ರೀಂಗಳ |
ಗಂಮಯಿಂ ಪೂಜೆಗೆಯ್ದು ಬಲಿಗಳ ಕುಡುತಂ ||
ನರನರ ಸಹೆಯುತೆ ವರಸುಂ |
ನಿರತಂ ತೋಷಿಪವನಮಿಯಲ್ತೆ ಮಹನವಮಿ || ೭ ||

ದರಪಿಗ್ವಿಜಯೋದಂಭ |
ಕ್ಕರವರ್ ಜಕುರಂಗಬಲಂ ಪೆರಸುಸಡಿವುದಿಂ ||
ಪರಮಿಯದಶಮಿಯೆಂದೀ |
ಸಾಯನ್ನವೆಂ ದಶಮಿಗೆವರ್ಪಂದಿರ್ಕುಂ || ೮ ||

ಚಾಮುಂಡಾ ಕರುಣಾಕಟಾಕ್ಷದಿನಿವಂ ಶ್ರೀಕೃಷ್ಣರಾಜಂ ಸದಾ |
ಧರೆಮೆಚ್ಚಾಕೃತವರ್ಗನುಂ ಪೊರೆಗೆ ಪಾಳಾರಾಸ್ಯಸಮಾನೋದರಂ ||
ಸಾಮಾತ್ಯಂ ಪರಿವಾರಮಿತ್ರಸಹಿತಂ ದೀರ್ಘಾಯುರಾರೋಗ್ಯದಿಂ |
ಸೋಮಸ್ತ್ರೈವಧಗಾಮಿನೀಧರವರ ಶ್ರೀಕಂಠನದ್ದಕ್ತಿಯುಂ ||

ಮೈಸೂರು ಸಂಸ್ಥಾನದ ಮಂತ್ರಿಪದವಿ.

ಮಂತ್ರಿಕಂತ್ರ್ಯೆಸಿತಸ್ಯೇತಿರ್ದೇಶಕಾಲೋಚಿತಸ್ಥಿತಿಃ |
ಯತ್ರರಾಜ್ಞಿಭನೇದ್ಭಕ್ತಸ್ತೋಮಾತ್ಯಃ ಪೃಥುವೀಪತೇಃ ||
ಸಮ್ಯಮಾತ್ಯಃಸದಾಪ್ರೇಯಾನ್ನಾನ್ಯಕಿಂಚಿನ್ಮಯಾ ಪ್ರವರ್ಣ್ಯತೇ |
ಕೋಶಕೋಶವಸಂಪ್ರಾಪ್ತಾ ಪ್ರಾಣಾಯಾನ್ತಿಪ್ರಾಣಸಭೂಪತೇಃ ||
ಅಂತಸ್ಥಾನೈರಕುಟಿಲೈರಚ್ಛಿದ್ರೈಃ ಸುಪರೀಕ್ಷಿತೈಃ |
ಮಂತ್ರಿಭಿರ್ಧಾರ್ಯತೇರಾಜ್ಯಂ ಸುಸ್ತಂಭೈರಿವಮಂದಿರಮ್ ||

ಅಮಾತ್ಯ ಪದವಿಯು ಅನಾದ್ಯನ್ಯವಾದುದು. ದೇಶದ ಉನ್ನತಿಯಾಗಲೀ ಅವನತಿಯಾಗಲೀ ಅಮಾತ್ಯನ ಆಲೋಚನೆನ್ನನುಸರಿಸಿರುವುದು. ಅಮಾತ್ಯನು ಅತಿಶಯದೀಕ್ಷಾಸಂಪನ್ನನಾಗಿದ್ದು ಸತ್ಯವಲಂಬಿಯಾಗಿ ರಾಜ್ಯಾಡಳಿತವನ್ನು ಕೈಗೊಂಡರೆ ಪ್ರಜೆಗಳು ಸುಖಿಗಳಾಗಿ ದೇಶವು ಉತ್ಕರ್ಷವನ್ನು ಹೊಂದುವುದು. ಅವನು ಅವಿಚ್ಛಿನ್ನವಾಗಿ ಉನ್ನೇಕ್ಷಿಯಿಂದ ಆಡಳಿತ

ಮಾಡುವುದರಿಂದ ಪ್ರಜೆಗಳು ದುಃಖಿಭಾಗಿಗಳಾಗಿದೇಶವು ಅವನತಿಯನ್ನು ಹೊಂದುವುದು. ಆದುದರಿಂದಲೇ, ದೇಶವನ್ನಿಲಸಲೂ, ಶುದ್ಧಾಂತಃಕರಣವನ್ನೂ, ಸತ್ಯಾಬಲಂಬಿಯೂ, ನಾನಾಶಾಸ್ತ್ರನಿಶಾರದನೂ, ಲೋಕವ್ಯವಹಾರಜ್ಞನೂ, ರಾಜಭಕ್ತನೂ, ಪ್ರಜಾಸೌಖ್ಯಪರಾಯಣನೂ ಆದವನೇ ಮಹತ್ತಾದಾ ಮಂತ್ರಿಪೀಠಕ್ಕೆ ಮುಖ್ಯನಾತ್ರನು.

ಈಗಿನ ಯುದ್ಧ ಮತ್ತು ಸಮಗ್ರ ಭರತಖಂಡದಲ್ಲುಂಟಾಗಿರುವ ಸ್ವರಾಜ್ಯಸಾನದ ಉದ್ವೇಗ ಇವುಗಳು ವಿಷಯತವಾಗಿರುವ ಇಂತಹ ಸಮಯದಲ್ಲಿಯೇ ಮೈಸೂರು ಸಂಸ್ಥಾನದ ಮಂತ್ರಿಶ್ರೇಷ್ಠರಾದ ಸರ್. ಎಂ. ವಿಶ್ವೇಶ್ವರಯ್ಯನವರು ಮಂತ್ರಿಪದವಿಯಿಂದ ನಿವಾಮುಮೊಂದುವರೆಂಬ ವದಂತಿಯು ಎಸ್ಟೆತ್ತ ವಿಚಾರಶೀಲರಾಗಿರುತ್ತದೆ. ನವಕಾರದವರು, ಪತ್ರಕರ್ತರು, ಮತ್ತು ಪ್ರಜೆಗಳು, ಇವರು ತಮ್ಮ ಅಭಿಪ್ರಾಯವನ್ನು ಪ್ರಜೆಗಳ ಹಿತಕ್ಕೋಸುಗವಾಗಿಯೂ, ದೇಶೋದ್ಧಾರಕ್ಕಾಗಿಯೂ ಮಾಡಿರುವ ಕಾರ್ಯಗಳ ಮೂಲಕ ಇವರನ್ನು ಹಿಂದಿನ ಮಂತ್ರಿಶ್ರೇಷ್ಠರೊಂದಿಗೆ ಹೋಲಿಸಿ ಪ್ರಬುದ್ಧರೂ ವಾಗ್ಮಿಗಳೂ ಮತ್ತು ಇಂಜಿನೀಯರೂ ಆದ ಇವರನ್ನೇ ಪುಷ್ಪನೈಪ್ಪಿಯನ್ನು ಕರೆಯ ವಸಲುವಾಗಿ ಅಧಿಪ ಪಿಂಡಪೃಷ್ಟಿಯೆನ್ನು ನೂರಿಸುವಸಲು ವಾಗಿ ಬೇಕಾದುದನ್ನು ಮಾಡುತ್ತಿದುವರು.

ಮೈಸೂರು ಸಂಸ್ಥಾನದಲ್ಲಿ ವ್ಯಾಪಾರಚಿಂತನೆಯು ಮೂಲಸೂತ್ರಗಳನ್ನು ಸ್ಥಾಪಿಸುವ ಮನೋರಥದಿಂದ ಪ್ರಯತ್ನಿಸಿದ ಮಂತ್ರಿಶ್ರೇಷ್ಠರಲ್ಲಿ ತೀರ್ಥರೇಪರಾದ ಮೆ|| ರಂಗಾಚಾರ್ಲುರವರೇ ಮೊದಲನೆಯವರು. ಆದರೆ ಆ ಮನೋರಥವು ಆನಂತರಿಂದೇ ವಿಲೀನವಾಗಿ ಹೋಯಿತು. ಇವರನಂತರ ಬಂದ ಸರ್. ಕೆ. ಶೇಷಾದ್ರಿಅಯ್ಯರವರು-ಅಂತಹ ಪ್ರಜಾಪಿತವನ್ನೂ, ಅವಶ್ಯಾಯಗಳನ್ನು ವಿಲಗೊಳಿಸುವ ಸೂತ್ರಗಳನ್ನೂ ಸ್ಥಾಪಿಸುವದರಲ್ಲಿ ಪ್ರಧಾನರಾಗಿದ್ದರು. ತದನಂತರದಲ್ಲಿ ಸರ್. ಪಿ. ಎನ್. ಕೃಷ್ಣಮೂರ್ತಿಗಳು ಪ್ರಜಾಪಿತತ್ವಾಗಿ ಸಮೊಂದನ್ನು ಮಾಡಲಿಲ್ಲವೆಂದು ಸೈಷ್ಟವಾಗಿ ಹೇಳಲು ಯದು. ಇವರಸಂತರದಲ್ಲಿ ಮಂತ್ರಿಗಳಾದ ಮೆ|| ವಿ. ಪಿ. ಮಾಧವರಾಯರು, ಕಾರ್ಯದಲ್ಲಿಯೂ ಮಾತಿನಲ್ಲಿಯೂ ಭಿನ್ನಭಾವದಿಂದ ಪ್ರವರ್ತಿಸುತ್ತಾ ಪ್ರಜೆಗಳಿಗೆ ಪ್ರತಿಕೂಲಗಳನ್ನು ಮಾಡುತ್ತಿದ್ದರಲ್ಲದೆ ಆವರ ಕಾರ್ಯನೆಲ್ಲವೂ ನಿರಂಕುಶವಾಗಿಯೇ ಇದ್ದುವು. ಪ್ರಬಿಸ್ ಇಂಡಿಯಾಕ್ಕೆ ರ್ ಕರ್ಜನ್‌ರವರು ಯಾವುದೇ ಅಧಿಕಾರವಿಲ್ಲದಿದ್ದರೂ ಮೈಸೂರು ಸಂಸ್ಥಾನವನ್ನು ಮಾಧವರಾಯರು ಹಾಗೆಯೇ. ಆದರೆ ಕರ್ಜನ್‌ರವರು ಅಲ್ಪಜೀವಿಯಾಗಿದ್ದ ಪ್ರಜಾಪಿತನೆಂಬ ದೇವತೆಯನ್ನು ಸೂರಿಪ್ಪಿಸಿ ಸೀಲಕ್ಕೆದ್ದು ಹಿಂದಾಡುವಂತೆ ಮಾಡಿದರು. ಮಾಧವರಾಯರಾದರೋ ಅಲ್ಪಜೀವದಲ್ಲಿದ್ದ ದೇಹವನ್ನಾಗಿ ಮಾಡಿದರು. ಇವರಿಂತರ ನಂದ ಮೆ|| ಆನಂದರಾಯರವರಿಗೆ ಭೂಗರ್ಭವನ್ನು ಹೂಂದಿಸಿಟ್ಟರು

ತದನಂತರಾಯರನಂತರ ಸರ್. ಎಂ ವಿಶ್ವೇಶ್ವರಯ್ಯನವರು ಸಚಿವೋತ್ತಮರಾಗಿ ಕಾರವಾಸಿದರು. ಇವರು ಅಂದಿನಿಂದ ಇಂದಿನವರೆಗೂ ನಾಡಿನುದ್ದಕ್ಕೂ ಮಾಡಿರುವ ಕಾರ್ಯಗಳಲ್ಲಿ ಕೆಲವು ಚಿಲ್ಲರೆ ಸ್ವಾನಾತಿಲಕ್ಕೆಗಳನ್ನಿರೂ ಅವೆಲ್ಲವೂ ಪ್ರಜೆಗಳಿಗಾಗಿಯೂ ಮತ್ತು ದೇಶೋದ್ಧಾರದಸಲುವಾಗಿಯೂ ಆದುದುಂದ ಮೈಸೂರು ಶ್ರೀಮನ್ಮಹಾರಾಜರವರ ಪ್ರತಿಮೊಬ್ಬ ಪ್ರಜೆಯ ಪ್ರೀತಿಪಾತ್ರರಾಗಿರುತ್ತಾರೆ ಇವರು, ನೀರಿನ ವಿಳಿಗೆಗೂ ಮತ್ತು ಆದರ ಸ್ಥಿರಾಸ್ತಿಭೂಗರವೇ ಮುಖ್ಯವಾದುದರಿಂದಲೂ, ರಾಜ್ಯದ ಕ್ಷೇಮದಲ್ಲಿ ಮರ್ಜಿಲವಾಗಿದ್ದದುದರಿಂದಲೂ ಅಂತಹ ಸ್ಥಿರಾಸ್ತಿಭಾರಿಸಲು ಬೇಕಾದ ಪ್ರಯತ್ನಗಳನ್ನು ಮಾಡಿಕೊಡಗಿದರು. ಇವರು ಇವನ್ನು ನಿರ್ವಾಹಕತ್ವದಲ್ಲಿ ಒಲವ್ಯಯದನ್ನಾಗಿ ಮಾಡಿಲು ಪಡಾಗಿಲ್ಲ. ಹೆಚ್ಚುಹೆಚ್ಚಾಗಿ ದ್ರವ್ಯವ್ಯಯಮಾಡಿ ಬೇರೆಬೇರೆ ಸ್ಥಾಪಿಸಲ್ಪಟ್ಟಿನ್ನು ಇವುಗಳ ಗುಣದೋಷಗಳನ್ನು ಫರಿತಾಂಶ

ದಿಂದ ನಿರ್ಣಯಿಸಬೇಕಾಗಿರುವುದು. ಅದು ಹಾಗಿರಲಿ ಇವರ ಐದುವರ್ಷದ ಆಳ್ವಿಕೆಯಿಂದೀಚೆಗೆ ದಸ್ತರದಕಟ್ಟನ್ನು ಬಿಚ್ಚಿ ನೋಡಿದರೆ ಕೆಲವು ನ್ಯೂನಾತಿರಿಕ್ತಗಳಾಗಿಯೂ, ಕೆಲವು ಪ್ರಶಂಸನೀಯಗಳಾಗಿಯೂ ಬರುವುವು. ಇವುಗಳನ್ನು ಮುಂದಿನಸಂಚಿಕೆಯಲ್ಲಿ ಸಮಾಲೋಚಿಸುವೆವು.

ಮೈಸೂರು ನಾಗರಿಕತೆಗೊಂದು ಕಳಂಕ

ಮೈಸೂರು ನಾಗರಿಕತೆಯಲ್ಲಿ ಉಚ್ಚಸ್ಥಾನವನ್ನು ಪಡೆದಿರುವುದು ನಿಶ್ಚಯ. ಆರೋಗ್ಯ ಸಹಾಯ ಸಂಸ್ಥಗಳೂ, ಅಧ್ಯಾಪಕ ಸಭೆಗಳೂ, ವೃತ್ತಪತ್ರಿಕಾಲಯಗಳೂ, ವಾಹನಾಲಯಗಳೂ, ಚಿಕಿತ್ಸಾ ಮಂದಿರಗಳೂ, ವಾಚನಾಲೆಗಳೂ, ಅತಿವ್ಯಾಪ್ತಿಯಾಗಿ ಸರ್ವತ್ರಿನೆಲಸಿರುವುದೂ ನಿಶ್ಚಯ. ಬಲಾತ್ಕಾರ ವಿದ್ಯಾಭ್ಯಾಸವೂ, ಸ್ತ್ರೀವಿದ್ಯಾಪ್ರಚಾರವೂ, ಹಿಂದುಳಿದ ಜನವರ್ಗವನ್ನುದ್ಧರಿಸುವ ಪ್ರಯತ್ನವೂ ನಡೆಯುತ್ತಲಿದ್ದು, ನಡೆದೂ ಇರುವುದು ನಿಶ್ಚಯ. ವಿದ್ಯುಚ್ಛಕ್ತಿಯ ದೀಪಗಳೂ, ನಾಲುಮತಗಳೂ, ದೊಡ್ಡನೊಡ್ಡ ಕಟ್ಟಡಗಳೂ, ಚಿತ್ರವಿಚಿತ್ರವಾದ ಬಣ್ಣಗಳಿಂದ ಕೂಡಿದ ಕಟಾಂಜನಗಳೂ, ಉದ್ಯಾನವನಗಳೂ, ಸರ ಮನಸ್ಸಿಗೆ ಆಶ್ಚಾನಂದವಿವನ್ನುಂಟುಮಾಡುತ್ತಿರುವುದೂ ನಿಶ್ಚಯ. ಇವಗಳಿಂದೆಲ್ಲ ಬುದ್ಧಿವಿಕಾಸವೂ, ಸಂತೋಷವೂ, ವಿನೋದವೂ, ಉಂಟಾಗುತ್ತಿರುವುದೂ ನಿಶ್ಚಯ. ಇವ್ಯಾದರೂ ನಮಗೇನೋ ಅಭ್ಯುದಯ ಕಾರ್ಯಗಳ ಸಮಾರಂಭವೂಡಿಸಿಯೇ ತೋರಲಿಲ್ಲ. ಏಕೆಂದರೆ ಮದ್ಯಸಾನವೇನಾದರೂ ದಿನವಿಸಕ್ಕೆ ಕಡಮೆಯಾಗುತ್ತಿರುವುದೇ? ವ್ಯಭಿಚಾರವು ಹುಟ್ಟಡಗುವುದೇ? ಜೂಜಾಟದ ತಲೆಯೆತ್ತಿದಿಯುವುದೇ? ಅತಿವ್ಯಯವು ಅಡಗಿ ಹೋಗಿರುವುದೇ? ಲಂಡವು ವ್ಯಾಶಸ್ತ್ಯವನ್ನು ಹೊಂದಿದಿಯುವುದೇ? ಎಲ್ಲವೂ ಪಾಗಿರಲಿ ಹಿಂದುಳಿದ ಜನವರ್ಗವು ಮುಂದೆ ಬರಲೆಂದು ಹಾರೈಸಿ ಮಾಡುತ್ತಿರುವ ಪ್ರಯತ್ನಗಳಿಗಾದರೂ ಮನಗೊಟ್ಟು ಮೇಲ್ಮೆ ಪಡೆಯುತ್ತಿರುವುದೇ? ಒಂದೂ ಇಲ್ಲವಲ್ಲಾ! ಇದೇನು ಸೋಜಿಗ! ಬೆಳಕು ಹುಡುಕಿದರೆ ಸಿಯೇ "ಗುರು ಧರ್ಮಕೊರಣ್ಯಯಿಕ್ಷಾ!" "ಎಕ್ಕಮ್ಮನ ಒಸಗೆ" "ತಿವಾ! ಸುವೇವಾ!" "ನಾರಾಯಣ! ಗೋವಿಂದ" "ಛೋಂ ಛೋಂ ಛೋಂ! ಅನ್ನದಾನ ಸಬ್ರಹ್ಮಣ್ಯ! ತಿರುಪತಿ ವೆಂಕಟರಮಣ"! "ಜೈಸೀತಾರಾಂ!" "ಹುರ್ರಾ ಹುರ್ರು ಹುರ್ರಾ ಹುರ್ರು! ಮಾರಮ್ಮ-ಪೆಸಲುಮಾರೀ ಕಾಗುಮಾರಿ! ಅರಿಕನಾ ತೆಪಗೋ! ಕುಂಕುಮಾ ತೊಗೋ! ಹಳೇಕಾಲೆ ತೊಗೋ! ಹಳೇಕುಪ್ಪಸಾ ತೊಗೋ! ಮಯಾ! ಆಹಾ! ಹುರ್ರಾ ಹುರ್ರು ಹುರ್ರಾ ಹುರ್ರು!" "ಜಯವಾಗತ್ತೈತೆ! ಜಯವಾಗುತ್ತೈತೆ! ಬುಡು ಬುಡು ಬುಡು" ಎಂಬ ಜಯಧ್ವನಿಗಳಿಂದೊಡಗೂಡಿ ಎಂದು ಭಿಕ್ಷೆ ಹಾಕಿದರೆ ಹೂಗಬತ್ತಿಯೂ ಇಲ್ಲದಿದ್ದರೆ ಬೊಗಳುತ್ತಲೂ ಅರಿಯದ ಹೆಂಗಸರು ಮಕ್ಕಳನ್ನು ಅಂಜಿಸಿ ಮೊಬ್ಬಿಹೊರೆದು ದೇಹಪ್ರಮದಲ್ಲಿ ಹಿಂದುಳಿದ ಧನವಾಜನೆಯಲ್ಲಿ ಮುಂದುನಲಿರುವ ಅವಮೃತ್ಯು ದೇವತೆಗಳನ್ನು ಕುರಿತು ನವು ಹೇಳುವ ? ಇದನ್ನು ಏನೆಂದು ವರ್ಣಿಸಬಹುದು? ನಾಗರಿಕತೆಯನ್ನ ಪೆಪ್ಪೆಸವರೂ ಹಿಂದುಳಿದವರನ್ನು ಮುಂದೆ ತರಬೇಕೆನ್ನು ವವರೂ ಇವರ ಕಾಟವನ್ನು ತ್ಯೆಸಲೇಕ ಯತ್ನಿಸಲಿಲ್ಲ ? ಇವಿಗೇಕೆ ಶಿಕ್ಷೆಯನ್ನೇರ್ಪಡಿಸಲ್ಲ ? ಹಲವು ವೇಳೆ ಪ್ರಜಾಪ್ರತಿನಿಧಿ ಸಂಘದಲ್ಲಿ ಈ ವಿಷಯವು ಪ್ರಸ್ತಾವಿತವಾಗಿ ಹಾಗೆಯೇ ಆಗಿಹೋದುದೇಕೆ? ವಾಕ್ಚಾತುರ್ಯದೇಶವನ್ನಾಗಿಯೇ ಮಾಡಿಬಿಡಬೇಕೆಂದಾತಿಸುವ ದೇಶಾಭಿಮಾನಿಗಳೆಲ್ಲರೂ ಅಲ್ಲಿರುವಂತೆ ಭಿಕ್ಷಕಾರುಗೊಂದು ರಾಜಸವನ್ನೇಕೆ ಇಲ್ಲಿಯೂ ಏರ್ಪಡಿಸಲಿಲ್ಲ ? ಆಯಿತು, ಇನ್ನು ಕೆಲವುಕಾಲ ನೀರೀಕ್ಷಿಸೋಣ. ರಾಜಧಾನಿಯಲ್ಲಿರುವ ಧರ್ಮಶಾಲೆ ಗಳೂ ಛತ್ರಗಳೂ, ಅನುಕೂಲಸ್ಥರ ವಾಲಾಗಿ ನಿಲ್ಲುವದಕ್ಕೆ ನೆಲೆಯಿಲ್ಲದೆ ಊರೂರು ಅಲೆಯುವ ತಿರುಪಗಾರರಿಗೆ ನಿರ್ಬಂಧವಾಗಲಿ ನಿವಾಸವಾಗಲಿ ಇಲ್ಲದೆ ಅಶ್ವಿನ್ಸ್‌ದರ್ ಬಜಾರಿನಮುಂಭಾಗದಲ್ಲಿಯೂ ಕೆಳಭಾಗದಲ್ಲಿಯೂ,

ಅಂಗಡಿ, ಮಳಿಗೆ, ಪಾಪು ಇವುಗಳ ಬಳಿ ತಿಕ್ಕಿದ ಸ್ಥಳದಲ್ಲಿ ಊಟ, ಉಪಚಾರ, ಸಂತೋಷ ಮುಂತಾದುವನ್ನು ಮಾಡಿಕೊಂಡು ಅಲ್ಲೆಲ್ಲ ಹೇಸಿಗೆಪಡಿಸಿ ಕೆಡಿಸುತ್ತಿರುವುದು ಯಾವ ನಾಗರಿಕರ ಮನಸ್ಸಿಗೂ ಹಿಡಿಯುಲಿಲ್ಲವೆ? ಇದು ನಾಗರಿಕತೆಗೆ ಕಳಂಕವಲ್ಲವೆ? ಇದನ್ನು ಸಂಪದಭ್ಯುದಯ ಸೂಚಕವೆಂದಾಗಲೀ, ಪುರಾಭಿವೃದ್ಧಿಕಾರ್ಯದ ಚಿಹ್ನೆಯೆಂದಾಗಲೀ ತಿಂದುಳಿದದ್ದನ್ನು ಮುಂದೆ ತರುವ ಲಕ್ಷಣದ ಆಶಾಭಿಸಂದೆಂದಾಗಲೀ ಯೋಚಿಸಬಹುದೆ? ಈ ವಿಷಯದಲ್ಲಿ ನೋಡಾಧಿಮಾನಿಗಳ ಅಭಿಪ್ರಾಯವೇನಿರಬಹುದು? ಈ ನವರಾತ್ರೆಯಲ್ಲಿ ನಡೆಯುವ ವಿವಿಧ ಸಂಘಗಳಲ್ಲಿ ಯಾವುದರಲ್ಲಾದರೂ ನಾವು ಸೂಚಿಸಿರುವೀ ಕುಂದುಕೊರತೆಗಳ ವಿಷಯವನ್ನು ಸರಿಬಟ್ಟೀತೇನೋ ಎಂದು ನಂಬಿ ನಿರೀಕ್ಷಿಸುತ್ತಾ ಈ ಲೇಖನವನ್ನು ಇಷ್ಟಕ್ಕೆ ನಿಲ್ಲಿಸುವೆವು.

ಪತ್ರಿಕಾಮಾನೆ ಮತ್ತು ಸಮಾಲೋಚನೆ.

ವಸ್ತುಪ್ರದರ್ಶನ—

ಮೈಸೂರು ವಸ್ತುಪ್ರದರ್ಶನವು ೫೦ ನೆ ತಾರೀಖಿನಲ್ಲಿ ತೆರೆಯಲ್ಪಟ್ಟಿತು. ನಮ್ಮ ದೇಶೀಯರು ತಮ್ಮ ಬುದ್ಧಿಕುಶಲತೆಯನ್ನು ತೋರ್ಪಡಿಸಿ ಮಾಡಿ ಪ್ರದರ್ಶಿಸಿರುವ ವಸ್ತುಗಳನ್ನು ಅನೇಕರು ನೋಡಿ ಸಂತೋಷಪಡುತ್ತಿರುವರೆ. ಈಸಲ ಅನ್ಯೇನೂ ಹೆಚ್ಚಿನವಸ್ತುಗಳು ಇಲ್ಲದಿದ್ದರಿಂದ ಪ್ರತಿಯೊಂದು ಕೊಠಡಿಯೂ ಅಲಂಕರಿಸಲ್ಪಟ್ಟಿರುವುದು. ನೋಡಿದ್ದಂಲ್ಲಿ "ಮೈಸೂರು ಹೋಂ ಇಂಡಸ್ಟ್ರೀಸ್" ಬಹುತರವಾಗಿ ಅಭಿವೃದ್ಧಿಗೆ ಬರುತ್ತಿರುವುದೆಂದು ಗೊತ್ತಾಗುತ್ತದೆ. ಆದರೆ ಅಲ್ಲಿನ ಆಡಳಿತವರ್ಗದವರು ಸಮರ್ಪಕವಾಗಿ ಕಂಡು ಬರಲಿಲ್ಲ. ಅಲ್ಲಿ ಪ್ರದರ್ಶಿಸಿರುವ ಪದಾರ್ಥಗಳಲ್ಲಿ ಚಿತ್ರದುರ್ಗದ ಟಿಪ್ಪುಕ್ಕು ಕೊಠಡಿಯಲ್ಲಿಟ್ಟಿದ್ದ ಚಿತ್ರದ ಸಮಾಚಾರವನ್ನು ಕೆಲವನ್ನು ಕೈಯಿಕ್ಕೆ ತೆಗೆದುಕೊಳ್ಳಲು ಕೇಳಲು ರಾಜಮನೆತನದವರು ಬಂದು ನೋಡುವವರಿಗೂ ಮಾರುವುದಿಲ್ಲವೆಂದು ತಿಳಿಸಿದರು. ಸುರುಬಿನ ಮೋಗಿ ನೋಡುವಲ್ಲಿ ಅನೇಕಪದಾರ್ಥಕ್ಕೆ "ನೋಲ್ಡ್" ಬೆಂಬ ಚೀಟಿಯು ಅಂಟಿಸಿತ್ತು. ಇದರ ನಿಜಾಂಶ ತಿಳಿಯಲು ಅಲ್ಲಿನ ವೀಕ್ಷಿಸುವವರನ್ನು ಕೇಳಲು "ನನಗೆ ತಿಳಿಯದು" "ತನಗೆ ತಿಳಿಯದು" ಎಂಬ ಉತ್ತರಮಾತ್ರ ಬಂದಿತು. ನೋಡ್ಡಿದವರೆಲ್ಲರಿಗೆ ಒಬ್ಬರಿಗೂ ತಿಳಿಯದ ಹಾಗೆ ಆ ಪದಾರ್ಥಗಳು ಹ್ಯಾಗೆ ಮಾರಲ್ಪಟ್ಟಿವೆ? ಬಹು ಆಶ್ಚರ್ಯಕರವಾಗಿದೆ. ಅಥವಾ ಆ ಪದಾರ್ಥಗಳನ್ನು ತಮ್ಮವರಿಗೆ ಯಾರಿಗೊ ಇಷ್ಟವೇಕೆಂಬ ಉದ್ದೇಶದಿಂದ "ಚಾಯಸಿತ್ಯಾಸ" ಬಂದ "ನೋಲ್ಡ್" ಬೆಂಬ ಚೀಟಿಯನ್ನು ಕೆಟ್ಟಿರಬಹುದೋ? ಯಾವನೂ ತಿಳಿದುದುವಿಲ್ಲ. ಅಲ್ಲಿ ಪ್ರದರ್ಶಿಸಿರುವ ಪದಾರ್ಥಗಳನ್ನು ಕೇಳಿದವುಗೆ ನಿಷ್ಕೃಷ್ಟತಾಕಾಲಿಕ ಕ್ರಯವನ್ನು ಕೊಡಲು ತಕ್ಕ ವಿಚಾರವು ಮಾಡಿ ಆ ಮೂಲ್ಯ ನಮ್ಮ ದೇಶದ ಕೈಗಾರಿಕ ಕುಶಲತೆಯು ಅಭಿವೃದ್ಧಿಯಾಗುವಂತೆ ಮಾಡುವರೆಂದು ನಂಬುತ್ತೇವೆ.

ಬಳಿದೇಳದ ವೃತ್ತಾಂತ.

ಮೆಸೊಪೊಟೇಮಿಯಾ ಯುದ್ಧಭೂಮಿಯಲ್ಲಿರುವ ನಮ್ಮ ಸೈನಿಕರಿಗೆ ಕೆಲಸಮಾಡಿಕೊಡುವಸಲುವಾಗಿ ಬೆಂಗಳೂರ್ ಸೆಂಟ್ರಲ್ ಬಂದಿಖಾನೆಯಿಂದ 130 ಮಂದಿ ಖೈದಿಗಳನ್ನು ಬಿಡುಗಡೆಮಾಡಿ ಕಳುಹಿಸಿಕೊಟ್ಟಿರುತ್ತಾರೆ.

ಮೈಸೂರು ಸಂಸ್ಥಾನದಲ್ಲಿ ತ್ರೈಗಂಧವು ಗಿಡಗಳಿಗೆ "ಸ್ಮೈಲ್" ಎಂಬ ಸೊಬಾಸ್ಯ ತಗಲಿ ಲಕ್ಷಾಂತರರೂಪಾಯಿಗಳು ಬೆಲೆಬಾಳುವಷ್ಟು ಮರಗಳ ಸಾಲುಗಳು ನಾಶನಾಗಿರುವವು. ರೋಗದ ಪರಿಹಾರಕ್ಕೆಸಲುವಾಗಿ ಸರಕಾರದವರು ನಾನಾವಿಧವಾದ ವಿಚಾರಣೆಗಳನ್ನು ಮಾಡುತ್ತಿರುವರು.

ಮೈಸೂರಿನಲ್ಲಿ ವಸ್ತು ಪ್ರದರ್ಶನವೆಂಬುದು ಸನ್ 1917 ನೇ ಇಸವಿ ಅಕ್ಟೋಬರ್ ತಿಂಗಳು ೨೦ನೇಯ ತಾರೀಖು ಪ್ರಾರಂಭವಾಯಿತು. ನವೆಂಬರ್ ತಿಂಗಳು ೭ ರವರೆಗೂ ತೆರೆಯಲ್ಪಟ್ಟಿರುವುದು.

ಬರುವ ತಾ|| ೨೫ರಲ್ಲಿ ಪ್ರಜಾಪ್ರತಿನಿಧಿ ಸಭೆಯು ಆರಂಭಿಸಲ್ಪಡುವುದು.

ಸಂಜೆಗೂಡಿನಿಂದ ಹೊರಡುವ ರೈಲು ಮೈಸೂರು, ಯಡತೊರೆ, ಅರಕೀಕೆರೆ, ಹರಿಹರ ಮಾರ್ಗವಾಗಿ ಶಿವಮೊಗ್ಗಾವರೆಗೆ ತಲವುವಂತೆ ಹೊಸದಾಗಿ ಸಾಕಿರುವ ಮಾರ್ಗದಮಟ್ಟಿಗೆ ಒಂದು ಜನರಿಯಿಂದ ಬಿಡುವದಾಗಿಯೂ ಆ ಮಾರ್ಗದ ಮತ್ತು ಮೈಸೂರು ಬೆಂಗಳೂರು ಮಾರ್ಗದಮೇಲಣ ಅಧಿಕಾರ್ಯವನ್ನೆಲ್ಲಾ ತಾವೇ ವಹಿಸಿಕೊಂಡು ನಡೆಯುವುದಾಗಿಯೂ ನಮ್ಮ ಸರಕಾರದವರು ನಿಶ್ಚಯಿಸಿಕೊಂಡಿರುವರೆಂದು ತಿಳಿದುಬಂದಿರುತ್ತದೆ.

ಶಿವಮೊಗ್ಗ ಶಿವಮೊಗ್ಗಾ ಪ್ರಾಂತ್ಯ ಬಯಲಾಗಿ ಮಳೆಯಾಗಿ ರೈಲು ರಸ್ತೆಯು ಸುಮಾರು ೨೦೦ ಅಡಿದೂರ ಕೊಚ್ಚಿಹೋಗಿ ನೀರಿನಲ್ಲಿ ಮುಳುಗಿ ಹೋಗಿರುವುದರಿಂದ ಶಿವಮೊಗ್ಗಕ್ಕೆ ಟಿಕೆಟ್ಟು ಕೊಡುವದಿಲ್ಲವೆಂಬಲೂ ಅಮಾರ್ಗದಲ್ಲಿ ಸರಿಯಾಗಿ ರೈಲು ಬಿಡಲು ಇನ್ನೂ ಎಂದುವಾರವಾಗಬಹುದೆಂಬಲೂ ತಿಳಿಯಬರುತ್ತೆ.

ಈಗ ದಸರಾಮಹೋತ್ಸವದ ವೈಭವದಿಂದ ಮೈಸೂರು ಪಟ್ಟಣವು ಪೂರ್ಣಕಳಾಮಯಿಂದಿರುವುದು. ದಿನನಿತ್ಯ ಸಾಯಂಕಾಲ ನಮ್ಮ ಸ್ನೇಹಿತರುಗಳವರ ದರ್ಬಾರು ವೈಭವವನ್ನು ನೋಡಿ ಸಂತೋಷಿಸಿಹಲು ಬೇಕಾದ ಎಲ್ಲಾ ಸೌಕರ್ಯಗಳಿಂದಲೂ ತುಂಬಿತುಳುಕುವಾಗಿ ಜನಗಳು ಬಂದು ಬೀಡುತ್ತಿರುವರು. ಸ್ನೇಹಿತರುಗಳ ಸಿಂಹಾಸನಾರೋಹಣವನ್ನು ನೋಡಲು ಆತುರರಾಗಿ ಜನಗಳು ಸೂರ್ಯಕಿರಣ್ಣನ್ನು ಸಹ ಮನಗೊಡದೆ ಕಾಯುತ್ತಿರುವುದನ್ನು ನೋಡಿದರೆ ರಾಜಭಕ್ತಿಯು ಎಷ್ಟರಮಟ್ಟಿಗೆ ಇರುವದೆಂಬುದು ವ್ಯಕ್ತವಾಗುತ್ತೆ. ಈ ಪಟ್ಟಣಕ್ಕೆ ಗತಿಸಿದ ಸಿಟಿ ಪೋಲೀಸ್ ಸೂಪರ್‌ಟೆಂಡೆಂಟರವರ ಸ್ಥಾನಕ್ಕೆ ಬಂದಿರುವ ರೂಸನಂತರಾಯರು ಬಹಳ ಅನುಭವಸ್ಥರಾಗಿಯೂ ಬಹು ಉತ್ಸಾಹಶಾಲಿಗಳಾಗಿಯೂ ಮತ್ತು ಅವರ ಮತದವರಾಗಿಯೂ ಇರುವ ಪೋಲೀಸ್ ಮುಖ್ಯಾಧಿಕಾರಿಗಳವರು ಜನಾನುಕೂಲಕ್ಕೆ ಅವಕಾಶವಾಗಲೆಂದು ಮಾಡಬೇಕಾದ ಉತ್ಸವಕಾರ್ಯಗಳ ಒಪ್ಪಂದಿಗೆ ಕೊರತೆಯನ್ನುಂಟುಮಾಡಿ ವೈಭವವನ್ನು ನೋಡಿ ಸಂತೋಷಪಡದಲು ಅನಕಾಶವಿಲ್ಲದೆ ಹಿಂದುಗಿದು ಕೋಟೆಯಲ್ಲಿನ ವಿದ್ಯುದ್ದೀಪಕ್ಕೆಯು ತೋರಣಗಳನ್ನು ಕೋಟೆಬಾಗಿಲಿನಲ್ಲಿ ಇರಿಸಿರುವ ಚಿತ್ರವಿಚಿತ್ರವಾದ ಅಲಂಕಾರಗಳನ್ನೂ ನೋಡಿ ಆನಂದಪಡುತ್ತಿರುವರು ವಿಶಾಲವಾದ ಸ್ಥಳವಾದಲ್ಲಿ ಜನರು ಮನದಣಿಯುವಂತೆ ಪ್ರಭುಭಕ್ತಿಯನ್ನು ತೋರ್ಪಡಿಸಿ ದರ್ಬಾರು ವೈಭವವನ್ನು ನೋಡಿ ಆನಂದವಟ್ಟು ತಮ್ಮ ತಮ್ಮ ಸ್ಥಳಗಳಿಗೆ ತೃಪ್ತಿಯಿಂದ ಮೋಗುವಂತೆ ಬಂದ ಜನಗಳಿಗೆ ಸಿಟಿಪೋಲೀಸ್ ಮುಖ್ಯ ಅಧಿಕಾರಿಗಳೂ ಅವರ ಹಿಬ್ಬಂದಿಗಳೂ ಏಕೀಭಾವದಿಂದ ಅನುಕೂಲವಾಗದಂತೆ ಅವಕಾಶವಿತ್ತು ತೃಪ್ತಿಪಡಿಸುವರೆಂದು ನಂಬುತ್ತೇವೆ.

ಯುದ್ಧ ವಾರ್ತೆ.

ಯುದ್ಧರಂಗದಲ್ಲಿ ಇವಾಸ್ಥಿತಿಯು ಬಹಳ ಅನಾನುಕೂಲವಾಗಿರುವುದು. ಮಳೆಯು ಅಪಾರವಾಗಿ ಸುರಿಯುತ್ತಿರುವುದು. ಅನಾಗ್ಯೂ ಬ್ರಿಟಿಷರು ಜೆರ್ಮಿಯವರಿಗೆ ರಕ್ತಗಳಮೇಲೆ ನುಗ್ಗಿದ ಪರಾಕ್ರಮಕ್ಕೆ ಜಯವನ್ನು ಪೊಂದಿಸುವರು. ಇಲ್ಲಿ ಇವರು ರಕ್ತಸಕ್ತೆದವರಲ್ಲಿ ಸಿಕ್ಕಿದವರೆಲ್ಲರನ್ನೂ ಸೆರೆಹಿಡಿದಿದ್ದಲ್ಲದೆ ಅನೇಕ ಆಯುಧೀಯ ಫಿರಂಗಿಗಳನ್ನೂ ಕಿತ್ತುಕೊಂಡಿರುತ್ತಾರೆ. ಪರಾರಂಗದಲ್ಲಿ ಗಾಯಪಟ್ಟು ಬಿದ್ದಿರುವವರನ್ನು ವಾಗಿಸಿಕೊಂಡು ಬರುವುದು ಬಹಳ ಕಷ್ಟವಾಗಿದೆ. ಪ್ರಿಟಿಷ್ ವೈದ್ಯಾಧಿಕಾರಿಗಳು ಈ ಯುದ್ಧದಲ್ಲಿ ಬಹಳ ಸಹಾಯಮಾಡಿರುತ್ತಾರೆ. ಫ್ರೆಂಚರ ಸೈನ್ಯಶಾಲಿನಲ್ಲಿ ಒಂದು ರಾಜ್ಯಕ್ಕೆ ಚರ್ಚಿಯೆಯವರು 11 ದಿನದವರಿಗೆ ಘೋರವಾದ ಮುತ್ತಿಗೆಯನ್ನು ಸಿಡಿಮದ್ದಿನ ಗುಂಡುಗಳನ್ನೂ ಹಾಕಿದರು. ಆದರೆ ಯಾವ ಪ್ರಯೋಜನವೂ ಆಗಲಿಲ್ಲ. ಫ್ರೆಂಚರು ಬಹು ಸಾಹಸದಿಂದ ಅವರನ್ನು ಹಿಮ್ಮೆಟ್ಟಿಸಿದರು. ಜರ್ಮನಿಯ ನಾವಿಕರಲ್ಲಿ ಬಹಳ ಗಲಭೆಯುಂಟಾಗಿರುವದು. ಕೆಲವರು ದಂಗೆ ಎದ್ದು ಅಧಿಕಾರಿಯೊಬ್ಬನನ್ನು ಸೀರುನಾಲುಮಾಡಿದುರು. ಇದನ್ನು

ಕೇವಿದನಂತರ ಅವರು ಹಿಡಿಯಲ್ಪಟ್ಟರು. ಕೈದರ್ ಹಕ್ಕನ್ನರ್ತಿಯು ಇವರಲ್ಲಿ ಕೆಲವರನ್ನು ಗುಂಡಿನ ಪಾಯಿಗೆ ಕಟ್ಟಬೇಕೆಂತಲೂ, ಉಳಿದವರನ್ನು ಸೆರೆ ಹಾಕಬೇಕೆಂತಲೂ, ಕಠಿಣವಾಗಿ ನಿರ್ಬಂಧಿಸಿರುವನು. ಈ ದಂಗೆಯು ಜರ್ಮನಿಯೊಳಗೆ ತುಂಬಾ ಕಳವಳವನ್ನುಂಟುಮಾಡಿರುವುದು. ರಷ್ಯಾದಲ್ಲಿ ಪ್ರಜಾಪ್ರತಿನಿಧಿ ಗೌನ್ಸಿಲ್ ಒಂದು ಸ್ಥಾಪಿತವಾಗಿರುವುದು. ಇದು ಎಷ್ಟುಕಾಲ ನಿಲ್ಲುವುದೋ ನೋಡಬೇಕು. ರಷ್ಯಾಸೈನಿಕರು ರೀಗಾಕೊಲ್ಲಿಯಲ್ಲಿರುವ ಎರಡು ದ್ವೀಪಗಳಿಗೆ ಮುತ್ತಿಗೆ ಹಾಕಿ ತಮ್ಮ ವಶಪಡಿಸಿಕೊಂಡು ಜರ್ಮನಿಯ ವರ ಕೆಲವ ಹಡಗುಗಳನ್ನು ಮುಳುಗಿಸಿರುವಂತೆ ತಿಳಿದು ಬಂದಿರುತ್ತದೆ. ಮತ್ತೆ ಇವರು ಸಾಮ್ರಾ ಸೈಸರನಲ್ಲಿ ಕೆಲವು ಗ್ರಾಮಗಳನ್ನು ಸ್ವಾಧೀನಪಡಿಸಿಕೊಂಡಿರುವರು. ರಷ್ಯಾಸೈನಿಕರು ಕೆಲವರು ಟರ್ಕಿಯ ಕೆಲವು ಕಲ್ಲಿದ್ದಲು ತುಂಬಿಕೊಂಡು ಬರುತ್ತಿದ್ದ ಹಡಗುಗಳನ್ನು ಮುಳುಗಿಸಿ ಒಂದನ್ನು ಕೊಳ್ಳೆಹೊಡೆದಿರುವರು. ಟರ್ಕಿಯವರು ಪೂರ್ವದಲ್ಲಿ ಅರ್ಮೀನಿಯರನ್ನು ಕೊಂದು ಹಾಕುತ್ತಿದ್ದಂತೆ ಈಗ ಅರಬ್ಬಿಯರನ್ನು ಕೊಲುತ್ತಿದ್ದಾರಂತೆ. ಬ್ರಿಟಿಷರು ಗೆದ್ದುಕೊಂಡ ಮೆಸಪಟೇಮಿಯಾದಲ್ಲಿರುವ ರಾಮಾದಿ ಎಂಬ ಪಾಳ್ಯದಲ್ಲಿ ಬೇಕಾದಷ್ಟು ಯುದ್ಧಸಾಮಗ್ರಿಗಳು ಅವರಿಗೆ ದೊರತಿವೆ. ಅಮೇರಿಕಾದವರು ಸೈನ್ಯವನ್ನೂ ಯುದ್ಧದ ಹಡಗುಗಳನ್ನೂ ಬಹು ಕ್ಷಿಪ್ರವಾಗಿ ತಯಾರು ಮಾಡುತ್ತಿರುವರು. ಸ್ವೆಯ್ಜ್‌ನಲ್ಲಿ ಒಂದು ಜರ್ಮನಿ ಸಬ್‌ಮರೀನನ್ನು ಸೆರೆಯಲ್ಲಿಟ್ಟಿದ್ದರು. ಅದು ಈಗ ತಪ್ಪಿಸಿಕೊಂಡ ಹೋಗಿರುವುದು. ಇಟಲಿಯವರು ಆಸ್ಟ್ರಿಯಾದವರ ಒಂದು ಟಾರ್ಪಿಡೋವನ್ನು ತಮ್ಮ ಹಡಗಿಗೆ ಸೇರಿಸಿಕೊಂಡರು. ಜರ್ಮನಿಯವರು ಹೊಸಕರವಾಗಿ ಕಟ್ಟಿದ ಒಂದು ಹಡಗು ಸಿಡಿಮದ್ದಿಗೆ ತಗಲಿ ನಾಶವಾಯಿತಂತೆ ಕಳೆದವಾರದಿಂದೀಚೆಗೆ ೨೧ ದೊಡ್ಡ ಹಡಗುಗಳು ೬ ಸಣ್ಣವ್ವಾ ಇನ್ನೂ ಕೆಲವು ದೋಣಿಗಳೂ ಮುಳುಗಿಸಲ್ಪಟ್ಟಿರುವುವು.

ಜರ್ಮನಿಯವರು ಅಶ್ವಾಸ್ ಮತ್ತ್ ಲೋರೇನ್ ಸೀಮೆಗಳನ್ನು ಬಿಟ್ಟು ಕೊಡುವುದಿಲ್ಲವಂತೆ. ಅದುದುವಿಂದ ಕದನು ಯಾಗಲೆ ಆಗುವ ಸಂದರ್ಭವಿಲ್ಲ. ಜರ್ಮನಿಯವರು ತಮ್ಮ ಮಾತು ಸ್ವಸ್ಥವಾಗುವತನಕ ಯುದ್ಧಸಡೆಯುವೇಕೆಂದೆನ್ನುತ್ತಾರೆ. ಎರಡು ಪಕ್ಷದವರಲ್ಲಿಯೂ ಅಸಾಧಾರಣ ಸೈನ್ಯವಿದೆ. ಅದರಲ್ಲೂ ಶಕ್ತಿಯುಕ್ತವಾದ ಫಿರಂಗಿಗಳು ಬಹಳವಾಗಿವೆ. ಆದುದರಿಂದ ಪ್ರತಿಯೊಬ್ಬರಲ್ಲಿಯೂ ವಿಶೇಷವಾಗಿ ಲಕ್ಷ್ಯವಾಗಬೇಕೆಂದು ಹುಕುಂ ಆಗಿರುವುದು. ಕೆಲವು ಕಾಲದಿಂದಲೂ "ಕಾಯ್ ಲೆಯಲ್ಲಿದ್ದ ಲಾಯ್ಡ್ ಜಾರ್ಜ್‌ರವರು ಸ್ವರ್ಗಸ್ಥರಾದರು. ಇಂಗ್ಲೆಂಡಿನಲ್ಲಿ ಕ್ಯಾಬಿನೇಟಿನ ಕೆಲಸವನ್ನೂ ಪ್ರೀಯರೇ ಮಾಡುತ್ತಿರುವರು.

ಅರಿಕೆಯ ಮನೆ.

[All Rights Reserved]

(ಹಿಂದಿನ ಸಂಚಿಕೆಯಿಂದ ಮುಂದಕ್ಕೆ ಸಾಗಿದುದು)

ಅಮಲ—ನಾನು, ಈಗಲೇ ಆವುದರಿಸಿಯುವಾಗಿಯೂ ಯೋಚನೆ ಮಾಡಿದೆ; ಆದರೆ ನಾನು ನಿನಗೆ ಕೊನೆಗೆ ಹೇಳುವೆನು.

ಮಾಧವ—ಅತಿಕ್ಷೇಮ ಆದರೆ—ನೀನು, ಪರಕೀಯರನ್ನು ಕರೆದು ಪುಸಲಾವಣೆಹೊಡೆ ಮಾತನಾಡುವುದೆಂಬುದನ್ನು ತಿಳಿದುಕೊಳ್ಳಬೇಕು.

ಅಮಲ—ಆದರೆ ನನಗೆ ಅಪರಿಚಿತರೊಡನೆ ಮಾತನಾಡುವುದರಲ್ಲಿ ಪ್ರೀತಿ.

ಮಾಧವ—ಒಂದುವೇಳೆ ಅವರು ನಿನ್ನನ್ನು ಅಪಹರಿಸಿದರೆ?

ಅಮಲ—ಅದೊಂದು ಶೋಭಾಯಮಾನವೇ ಆಗಿರುವುದು! ಆದರೆ ಅವರೂ, ಎಂದಿಗೂ ನನ್ನನ್ನು ದೂರಕ್ಕೆ ಕರೆದೊಯ್ಯುವುದಿಲ್ಲ. ಅವರೆಲ್ಲರೂ ನಾನು ಇಲ್ಲಿಯೇ ಇರಬೇಕೆನ್ನುತ್ತಾರೆ.

ಮಾಧವ—ನಾನು ನನ್ನ ಕೆಲಸಕ್ಕೆ ಹೋಗುತ್ತೇನೆ. ಆದರೆ ಮುದ್ದು ಮಗುವೇ, ನೀನು ಹೊರಗೆ ಹೋಗಬಾರದು, ತಿಳಿಯಿತೆ?

ಅಮಲ—ಹೂಲ್ಲ, ನಾನು ಹೋಗುವುದಿಲ್ಲ. ಆದರೆ ಚಿಕ್ಕಪ್ಪ! ಬೀದಿಯ ಆಚೆಯಿರುವ ಈ ಕಿರುಮನೆಯಲ್ಲಿರುವೆನು.

[ಮಾಧವನು ಹೋಗುವನು.

ಗೌಳಿಗ—ಮೊಸರು ಬೇಕೇ? ಮೊಸರು, ಜಿಲ್ಲೇ ಸಮುದ್ರಮೊಸರು.

ಅಮಲ—ಮೊಸರು ಮಾರುವನೇ. ಎಲೋ ಮೊಸರು ಮಾರುವನೇ!

ಗೌಳಿಗ—ನೀವು ನನ್ನನ್ನು ಏಕೆ ಕರೆದಿರಿ? ಮೊಸರು ಕೊಳ್ಳುವಿರಾ?

ಅಮಲ—ನಾನು ಹೇಗೆ ಕೊಳ್ಳಲಿ? ನನ್ನಲ್ಲಿ ಹಣವಿಲ್ಲ.

ಗೌಳಿಗ—ಎಂಕಪ ಮುಡುಗ! ಮಾಗಾದರೆ ಕರೆದುದೇಕೆ? ಆಹಾ! ಎಂತಹ ಕಾಲಹರಣ.

ಅಮಲ—ನನ್ನ ಕೈಲಾಗಿದ್ದರೆ ನಿನ್ನ ಸಂಗಡ ಬರುತ್ತಿದ್ದೆನು.

ಗೌಳಿಗ—ನನ್ನ ಸಂಗಡ?

ಅಮಲ—ಹೌದು, ನೀನು ದೂರದಲ್ಲಿ ಬೀದಿಯಲ್ಲಿ ಕೂಗುತ್ತಿದ್ದುದನ್ನು ಕೇಳಿದಾಗ, ನಾನು ಮನಸೊಂಬಲಲ್ಲಿದ್ದೆನು.

ಗೌಳಿಗ—(ತನ್ನ ಜೊತೆಗೋಲನ್ನು ಕೆಳಗಿಟ್ಟು) ನನ್ನ ಕಂದನೆ! ನೀನು ಇಲ್ಲಿ ಏನೇನು ಮಾಡುತ್ತಿರುವೆ? [ಸನೇಕ]

ಚಂಪೆ ಕಾಂತ ತೈಲ

1-ನೆ ಬೀದಿಗಳನ್ನು ನೀಲಿಯುತ್ತವೆಯಾದರೆ ತಲೆನೋವು, ಪಡಿಗಾಮರಿತಿ, ಮೇಜ ಸಂಬಂಧವಾತ ಜಾಡ್ಯಗಳು, ಮಕ್ಕಳ ಹಲ್ಲುಮಂದ, ಜ್ವರ, ಮುಂತಾದುವುಗಳು ಗುಣವಾಗುತ್ತವೆ. ಕ್ರಯ ಸೀಸೆ 1ಕ್ಕೆ 1 ಆಣಿ.

[೨-೩] ನಮ್ಮ ವಿಳಾಸ:—ಇಂದ್ರಕಾಂತ ಡಿಪೋ, ಮೈಸೂರು.

೧೦೦೦ ರೂಪಾಯಿಗಳು ಬಹುಮಾನ.

ಲೋಕದಲ್ಲಿಯೆ ಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಗ್ಯಾರಂಟಿಯಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ.



ರಿಜಿಸ್ಟರ್ಡ್ ಟ್ರೇಡ್‌ಮಾರ್ಕ್

ಈ "ಸಾಲಾಮಿಸ್ರಿ ಮುರಬ್ಬಾ" ದ ಸೇವನೆಯಿಂದ-ವೀರ್ಯವೃದ್ಧಿ ಶಾಂತತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಮೊಣಕಾಲ್ಲು ನೋವಿದ್ದರೂ, ಹಸಿವೆ ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕಟ್ಟುಹೋಗಿದ್ದರೂ ಈ "ಸಾಲಾಮಿಸ್ರಿ ಮುರಬ್ಬಾ" ಸೇವನೆಯಿಂದ ಗುಣವಾಗಿ ಶರೀರವು ಬಲಿಷ್ಠವಾಗಿ ಕಾಂತಿಯುಕ್ತವಾಗುವುದು. ಈ ಮುರಬ್ಬಾವು ಸಾಲಾಮಿಸ್ರಿಯಿಂದ ತಯಾರಿಸಲ್ಪಟ್ಟಿಲ್ಲವೆಂದು ವ್ಯಕ್ತಪಡಿಸುವವರಿಗೆ—೧,೦೦೦ ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನವ ಹಣವನ್ನು ನಾನು ಕೊಡದೆ ನಾನಾಕಂಸುವುವಾದರೆ ಸರಕಾರವ ಮೂಲಕ ನನ್ನಂದ ಪಡೆಯಬಹುದು.

ಕ್ರಯ ಡಬ್ಬಿ ೧ ಕ್ಕೆ ರೂ. ೨-೦-೦. ಟಪಾಲು ಖರ್ಚು ೧ ಡಬ್ಬಿಯಿಂದ ೪ ಡಬ್ಬಿಗಳ ವರೆಗೆ ೦-೬-೦. ಉಪಯೋಗಿಸುವ ವಿಧವು ಡಬ್ಬಿಯ ಜೊತೆಯಲ್ಲಿರುವುದು.

ಡಿ. ಮನ್ನಾಲಾಲ್, ಡಿಲ್ಲೀ ಫೈದ್ಯರು,

[೨-೩] ೧೫, ಆವೆನ್ಯೂ ರೋಡ್, ಬೆಂಗಳೂರು ಸಿಟಿ.

"ಸತ್ಯವಾದಿ"

ವಾರ್ಷಿಕ ಇಂದು:—ಸ್ವಳದವರಿಗೆ ೪ ಆಣೆ. ಪರಸ್ಥಳದವರಿಗೆ ರೂ. ೩ ಆಣೆ ೦.

ಚಾತ್ಮೀದಾರರಿಗೆ:—ದೇಶೋನ್ನತಿಗೆ ಸಂಬಂಧಪಟ್ಟ ಚಾತ್ಮಿಗಳೆಲ್ಲವನ್ನೂ ಪ್ರಕಟಿಸಲ್ಪಡುವುವು. ಇತರ ವಿಷಯಗಳನ್ನು ಬರೆದು ತಿಳಿಯಬಹುದು.

ಮ್ಯಾನೇಜರ್, "ಸತ್ಯವಾದಿ," ಮೈಸೂರು.

Printed and Published by Mr. B. V. Narasimha Iyengar, at the Royal Press, Mysore; for the Editor & Proprietor.

Regd. No. M 1299. ಪ್ರತಿ ಪ್ರತಿ 3 ಪೈ.

SATYAVADI

ರಾಜಕೀಯ, ಸಾಮಾಜಿಕ, ಮತವಿಚಾರ, ಭಾಷಾಭಿವೃದ್ಧಿ ಮುಂತಾದ ವಿಷಯಗಳನ್ನೊಳಗೊಂಡಿರುವ

"ಸತ್ಯವಾದಿ" ವಾರಪತ್ರಿಕೆ

ವಾರ್ಷಿಕ ಚಂದಾ 0—8—0 | ಪ್ರತಿ ಮಂಗಳವಾರ ಪ್ರಕಟಿಸಲ್ಪಡುವುದು. [ಅಂಚೆಸಹಿತ ಸೇರಿ 1—6—0

ಸಂಪುಟ I ಮಂಗಳವಾರ 30ನೇ ಅಕ್ಟೋಬರ್, 1917 ಸಂಚಿಕೆ 7

ಪ್ರಬುದ್ಧಾನಾಮಯಞ್ಚಾನಾಂ ಧರ್ಮಪ್ರವಚನಂ ಕೃತಮ್ ।
ಯಸ್ಮಾತ್ತದವನಮುಕ್ತಃ ಸಧರ್ಮಾ ಇತಿ ನಿಶ್ಚಯಃ ॥
ಸರ್ವೇಷಾಂ ದೆವ್ಯಸಿದ್ಧ್ಯರ್ಥಂ ಸರ್ವೇಷಾಂ ಚ ಹಿತೈಷಿಣಃ ।
ಕರ್ಮಣಾಮನುಷಾನಾಚ್ಚ ಸಧರ್ಮಂ ಶೌನಕಾಬ್ರವೆ ॥

ಸ್ವರಾಜ್ಯ.

ಭವಿಷ್ಯತ್ಕಾಲಕ್ಕೆ ನಾವು ಬಲವುಳ್ಳವರಾಗಿರಬೇಕು. ನಮ್ಮಲ್ಲಿಗೆ ಬರುವ ದು॥ ಮಾಂದಿಗಾರಿಗೆ, ಈಗ ಭಾರತೀಯ ಜನಾಂಗವು ಕೇವಲ ಶಕ್ತಿಹೀನ 'ಪುನರುದ್ಧಾರಣ' ಎಂದೆನಿಸುವುದನ್ನು ಸಹಿಸುವುದಿಲ್ಲವೆಂದು ನಾವು ಸ್ಪಷ್ಟ ಗೊಳಿಸಬೇಕು. ನಾವು ಸತ್ಯವಾದ ರಾಜಕೀಯ ಶಕ್ತಿಗಿಂತ ಕಡಿಮೆಯಾದ ಯಾವುದನ್ನೂ ಸ್ವೀಕರಿಸಲಾಗುವುದಿಲ್ಲ. ಆ ಶಕ್ತಿ ಎಂತಹುದು? ಶಕ್ತಿಯನ್ನು ಹೇಳುವುದು "ಮದ್ರಾಸ್ ಮೇಲ್" ಅಲ್ಲವು. ತನ್ನೊಳಗೆ ಸ್ವಾತಂತ್ರ್ಯವನ್ನು ಹೇಳುವುದು "ಪಾಮಸೀಯರ್" ಅಥವ "ಇಂಗ್ಲಿಷ್‌ಮನ್" ಅಥವ "ಸ್ಟೇಟ್ಸ್‌ಮನ್" ಇವುಗಳಲ್ಲವು. ಅದನ್ನು ಹೇಳುವುದು "ವಿಶೋಷ್ಯ ಸಂಘಘ್ಯಾ" ಅಲ್ಲ, ಅಥವ "ಸಾಂಕುಶಕ್ರಭುತ್ವವು" ಅಲ್ಲ. ನಮಗೆ ಯಾವ ಶಕ್ತಿ ಬೇಕೆನ್ನುವುದು, ನಮ್ಮ ಹೃದಯದಲ್ಲಿ ಹುಟ್ಟಿ ನಮ್ಮ ಬಾಯಿಯಿಂದಲೇ ಬರಬೇಕು. ಭಾರತೇಯರು ಯಾವುದಾದರೊಂದು ಶಕ್ತಿಯು ಬೇಕೆಂದರೆ ಅದು ಅವರಿಗೆ ಕೊಡಲ್ಪಡುವುದು. ನಮಗೆ ಬೇಕಾದುದನ್ನು ನಾವು ಹೇಳಬೇಕು. ಆನಬೇಡ, ಕೊಡುವೆಂಬುದನ್ನು ಹೇಳುವುದು ಅವರಿಗೆ ಅಲ್ಲ. ವರಗಳ ಕಾಲವು ಕಳೆದುಹೋಯಿತು. ಬಿಡುಮಾನಗಳ ಕಾಲವು ಬಹುದೂರವಾಯಿತು, ವರಾತಮಾಡುವ ಶೈಲಿಯು ಒದಗಿಬರುವುದು. ನಮಗೆ ಇದುಬೇಕು ಆದರೆ ಅದುಬೇಕು ಎಂದು ನಾವು ಹೇಳುವುದು ಅದನ್ನು ನಾವು ಕೊಂಡು ಬೆವ್ವ. ಅದನ್ನು ನೀವು ಕೊಡಬೇಹೋದಪಕ್ಷದಲ್ಲಿ, ಒಳ್ಳೆಯದು—ಉಳ್ಳೆಗ ಅದನ್ನು ನೀವ ಎಡುಬಿಬೇಕಾಗುವದು.

ಮೈಸೂರು ಸಂಸ್ಥಾನದ ಮಂತ್ರಿವರ್ಗ.

ಹಿಂದಿನ ಸಂಚಿಕೆಯಲ್ಲಿ "ಮೈಸೂರು ಸಂಸ್ಥಾನದ ಮಂತ್ರಿವರ್ಗ" ಎಂಬ ಶೀರ್ಷಿಕೆಯಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರ ಮಂತ್ರಿತ್ವದಲ್ಲಿ ಕೆಲವು ಸ್ವಾತಂತ್ರಿಕತ್ವಗಳೂ, ಹಲವು ಪ್ರತಿಕೂಲತೆಗಳೂ ಇದ ಕಾರ್ಯ ಗಳಿರುವುದೆಂದೂ ಅವುಗಳನ್ನು ಮುಂದಿನ ಸಂಚಿಕೆಯಲ್ಲಿ ಸಮಾಲೋಚಿಸುವೆ ನೆಂದೂ ತಿಳಿಸಿದ್ದೆವಷ್ಟೆ. ಈಗ ಅವುಗಳನ್ನು ಬಲ್ಲಿ ವಿವರಿಸುವೆವು—

(1) ಇವರು ಮಂತ್ರಿಗಳಾದಂದಿನಿಂದ ಹೊಸಹೊಸ ಏರ್ಪಾಡುಗಳು ಮಾಡಲ್ಪಟ್ಟಿರುವುದೇ ಹೊರತು ಪೂರ್ವದಿಂದಿದ್ದ ಇಲಾಖೆಗಳು ತಿದ್ದು ಪಾಡುಗಳಲ್ಲದೆ ಕೈಗ್ಯಾ ಹೊಂದುವಂತೆ ದಾಗಿಯೇ ಬಿಡಲ್ಪಟ್ಟಿರುವುವು. (2) ಐದು ಕಾರ್ಯದ ಜವಾಬ್ದಾರಿಯು ಬಿಬ್ಬರಿಂದೊಬ್ಬರಿಗೆ ಬಿದ ಬಾವಗೆಯಾಗಲು ಮಾರ್ಗವಾದುದು. (3) ಮೂಲಧನ್ಯಾಂತರಿಂದ ವೃದ್ಧಿಯ ಹಣವಿಲ್ಲದಿರುವುದು, ಅದರಲ್ಲಿಯೂ ಮಿಷ್ಟ ದ್ರವ್ಯವು ಕಂಡೇ ಬಾಸ್ಪದನಾದ ಉದ್ಯೋಗದಮೇಲೆಯೇ ಬಿಟ್ಟಿರುವುದು (4) ನ್ಯಾಯ ತೀರ್ಮಾನದಲ್ಲಿ ಮಿಶ್ರಾರವಿಲ್ಲದ ನಂಬಿಕೆ ಮತ್ತು ಅವರಾಧಿಗಳನ್ನು ಎಚ್ಚಿಸುವುದರಲ್ಲಿ ಬಿಬ್ಬಳಿಗರಿಕೆ. (5) ಯಾವ ಯೋಜನೆಯೂ ಬಲ್ಲದೆ ಸ್ವಜೆಗಳಲ್ಲಿ 'ಪಾಶ್ಚಿವಾತ್ಯರ ಅಭ್ಯಾಸಗಳನ್ನು ಜಾರಿಗೆಯಲ್ಲಿ ತರಲು ಬಿದ್ದುಕ್ಕಿರಾಗಿರುವುದು. (6) ಲಂಚಕೋರ ಪ್ರಜೆಗಳ ಅಪವ್ಯಾದವು ತಿರಸ್ಕರಿಸಲ್ಪಟ್ಟಿರುವುದು. (7) ಸರಕಾರವೂ ಮತ್ತು ಅದರ ನೌಕರದಾ ಹೊಂದಿದ್ದ ಬೋಗ್ಯತೆಯ ಪರಿಣಾಮವು ಮುರಿಯಲ್ಪಟ್ಟಿದು, ಅಂತಹು ದನ್ನು ಈಗ ಹೊಂದುವುದು ಅತಿಸುಲಭ; ಮತ್ತು ಕಾರ್ಯನಿರ್ವಾಹಕರ ಅಧಿಕಾರವೂ ನಿರ್ಬಲವಾಗಿ ಹೋಗಿರುವುದು.

ಈ ರೀತಿಯಲ್ಲಿ ಸ್ವಾಸ್ಥಾತಿರಿಕ್ತಗಳ ಪಟ್ಟಿಯನ್ನು ಸುಲಭವಾಗಿ ಹೆಚ್ಚಿಸ ಬಹುದು. ಆದರೆ ಹೀಗೆ ಹೇಳುತ್ತಾ ಹೋದರೆ ಎಂತಹ ಮಂತ್ರಿಯುಕೂಡ ರಾಜಿನಾಮೆ ಮತ್ತು ಪ್ರಜೆಗಳ ಪ್ರೀತಿಗೆ ಪಾತ್ರನಾಗುವುದಿಲ್ಲವೆಂಬುದರಲ್ಲಿ ಸ್ವಲ್ಪವೂ ಸಂಶಯವಿಲ್ಲ. ಇದರೆ ಸರ್. ಎಂ ವಿಶ್ವೇಶ್ವರಯ್ಯನವರ ವಿಷಯ ದಲ್ಲಿ ಮಾತ್ರ ಹಾಗೆ ಹೇಳಲಾಗದು. ಇವರಲ್ಲಿ ಎಷ್ಟು ಸ್ವಾಸ್ಥಾತಿರಿಕ್ತಗಳಿದ್ದರೂ ಅವೆಲ್ಲವೂ ಮರೆಮಾಡುವಂತಹ, ಪ್ರಜಾಪೌಷ್ಟಿಯಾಯಕವಾದ ಮತ್ತು ನೇರೋತ್ಪತ್ತಿಕಾರಕವಾದ ಹಲವು ಮುಖ್ಯಕಾರ್ಯಗಳನ್ನು ಇವರು ನಡಾಯಿಸುತ್ತಿರುತ್ತಾರೆ. ಇವರು ಏಂದಿನ ಸಚಿವರಂತೆ ತಮ್ಮ ಪರಿವಾರಜನ ರನ್ನು ಕಂಡು ಅವರಿಗೆ ಉತ್ತಮ ಪದವಿಗಳನ್ನು ಕೊಡುವಂತಹ ಪಕ್ಷಪಾತ ವನ್ನು ಎಟ್ಟಾಗಿಲ್ಲ. ಸರ್ವಸಮದರ್ಶಿಗಳಾಗಿರುವರು. ಇವರ ಆಳ್ವಿಕೆಯಲ್ಲಿ—

(1) ಮುಗಿದು ಸಫಲವಾದರೆ, ಲಕ್ಷಾಂತರ ಎಕರೆ ಭೂಮಿಯು ವೃಷ ಸಾಯಕ್ಕೆ ಅನುಕೂಲವಾಗಿ ಪ್ರಜೆಗಳ ಸೌಕರ್ಯಕ್ಕೆ, ರಾಜ್ಯದ ಸಂಪ ತ್ತಿಗೂ ಕಾರಣಭೂತವಾದ (Cauvery Reservoir) ಕೃಷ್ಣರಾಜ ಸಾಗರದ ಆಣೆಕಟ್ಟು. (2) (New Mysore Treaty) ನ್ಯೂಸೂ ರಿನ ಹೊಸ ಒಪ್ಪಂದ. (3) (Mysore University) ಮೈಸೂರು ವಿಶ್ವವಿದ್ಯಾಲಯ. (4) ನ್ಯಾಯವಿಧಾಯಕ ಸಭೆ (Legislative Council) ಮತ್ತು ಪ್ರಜಾಪ್ರತಿನಿಧಿ ಸಭೆ (Representative Assembly) ಇವುಗಳಲ್ಲಿ ಕೆಲವು ತಿದ್ದುಪಾಡುಗಳು. (5) ಮೂಲ ಶಾಲೆಗಳ (Primary Schools) ಸಂಖ್ಯೆಯ ಅಭಿವೃದ್ಧಿ. (6) ಹೊಸ ರೈಲುದಾರಿಗಳ (New Railways) ಏರ್ಪಾಡು. (7) ವಿದೇಶದಿ

ಗಳನ್ನು ಸುಧಾರಿಸುವ ಯತ್ನ. (೫) ಮೈಸೂರು ಬ್ಯಾಂಕು. (Mysore Bank) (೬) ಗಂಧದ ಮರದಿಂದ ಎಣ್ಣೆತೆಗೆಯುವ ಕಾರ್ಖಾನೆ (Sandle Wood Oil Factory) ಇವೇ ಮುಂತಾದ ಇನ್ನೂ ಅನೇಕ ಕಾರ್ಯಗಳು ದೇಶೋನ್ನತಿಗಾಗಿಯೂ, ಪ್ರಜಾಸೌಕರ್ಯಕ್ಕಾಗಿಯೂ ಮಾಡಲ್ಪಟ್ಟಿರುತ್ತವೆ

ಇವರ ಶಕ್ತಿವೈಭವ, ಕೆಲವು ಜಿಲ್ಲಾಪಟ್ಟಿಗಳನ್ನು ಮಾತ್ರವೇ ಸುಪರ್ದಿಗೆ ಬಿಲ್ಲಿಯ ಉದ್ಯೋಗಸ್ಥರಿಗೆ ಅನುಕೂಲಮಾಡಿಕೊಟ್ಟು ಅವರಲ್ಲಿ ಪ್ರಖ್ಯಾತ ರಾಗಬೇಕೆಂಬಲ್ಲ; ಕೆಲವು ಕೊಳಕಚ್ಚೆಗಳನ್ನು ಕಟ್ಟಿಸಿಕೊಟ್ಟು ದಾತೃನೆನಿಸಿ ಕೊಳ್ಳಬೇಕೆಂದಲ್ಲ. ಅದರೆ ಪ್ರಜೆಗಳ ಸರ್ವಾಭಿವೃದ್ಧಿಗಳೆಂಬ ಕೊಳಗಳನ್ನು ಏರಿಸುತುಳುಕುವಂತೆ ಮಾಡಬೇಕೆಂತಲೂ, ಸಫಲಗೊಳಿಸಬೇಕೆಂತಲೂ ಇವರ ಉದ್ದೇಶವು ಇವರಲ್ಲಿ ಅವರ ಅಪಾರವಾದ ಬುದ್ಧಿಯು ತೋರುವುದು. ಇದು ಏಂದು ಇವಮಿಗಿರುವ ದೂರಾಲೋಚನೆಯು ಗೊತ್ತಾಗುವುದು. ದೂರಾಲೋಚನೆಯಿಲ್ಲದವನ ಜೀವನವು ಜೀವನವೇ ಅಲ್ಲ. ಆದರೆ-ಅಂತಹರು ವಿರಳ ದೂರಾಲೋಚನೆಯುಳ್ಳ ಪ್ರಭುವಿದ್ದನು ಪ್ರಜಾಹಿತಕ್ಕಾಗಿಯೂ,ದೇಶೋನ್ನತಿಗಾಗಿಯೂ ಎಷ್ಟಗಳಿಗೆ ಮಾರ್ಗದರ್ಶಕನಾಗಿ ತಾನು ಮುಂದಾಳಾಗಿ ಕಷ್ಟಪಟ್ಟು ಕೆಲಸಮಾಡುವನು.

ಸರ್. ಎಂ. ವಿಶ್ವೇಶ್ವರಯ್ಯನವರ ಉದ್ದೇಶವೂ ಇಂತಹುದೇ. ಪ್ರಜೆಗಳ ಪ್ರಾಮುಖ್ಯತೆಯನ್ನು, ಅವರ ಭಾಗದ ಕಾರ್ಯಗಳನ್ನೂ ಮತ್ತು ರಾಷ್ಟ್ರದ ಒಳಗೂ ಹೊರಗೂ ತಮಗೆ ಪೂಜ್ಯತೆಯನ್ನೂ ತಿಳಿಸಬೇಕೆಂಬುದೇ ಇವರ ಉದ್ದೇಶ. ಇವರು, ಹೊಗಚಾಗಿದ್ದ ಪ್ರಜಾಹಿತಕ್ಕೆಂಬ ದೇಶವನ್ನು ಹೊರಗೆ ತೆಗೆದು ಅದಕ್ಕೆ ಜೀವಕಳೆಯನ್ನು ಕುಂಬರುಸ್ತಾರೆ. ಇದು ನಮಗೆ ಉಲ್ಲಾಸಕ್ಕಿಂತಲೂ ಸೆಳೆತಾದುದು. ಇವರು ಮೈಸೂರು ಸಂಸ್ಥಾನವನ್ನು ಭೂತಪುಂಡದ ಇತರ ರಾಜ್ಯಗಳ ಸಮಸ್ಥಿತಿಗೆ ತಂದಿರುತ್ತಾರೆ. ಇವರು ಪ್ರಾರಂಭಿಸಿರುವ ಕಾರ್ಯಗಳು ಪೂರ್ಣವಾಗಿರುವುದಿಲ್ಲ. ಆಲ್ಲದೆ ಇವರು ಮಂತ್ರಿಪದವಿಯಿಂದ ಏರಾಮಹೊಂದುವುದಾದರೆ ಮುಂದೆ ಬರುವ ಮಂತ್ರಿಗಳೆ ಆಭಿಪ್ರಾಯವು ಇದಕ್ಕಿಂತಿರಬೆ ಪೂರ್ಣವಾಗದೆ ಕಾರ್ಯಗಳು ಸಫಲವಾಗದೇ ಹೋಗಬಹುದಾದುದರಿಂದಲೂ, ಇಂಗ್ಲೆಂಡಾದೇಶದ ಮಂತ್ರಿಸಭೆ (Cabinet) ಯು ಬದಲಾವಣೆ ಹೊಂದಿದಾಗಲೂ, ಅಮೇರಿಕಾದೇಶದ ಅಧ್ಯಕ್ಷ (President) ನು ಬದಲಾಯಿಸಲ್ಪಟ್ಟಾಗಲೂ ಆದ ತೊಂದರೆಗಳಂತೆ ಇಲ್ಲಿಯೂ ಆಗಬಹುದಾಗಿದುದಿಂದಲೂ, ಸರಕಾರವು ಹಾಗೆ ಮಾಡದೆ ಸರ್. ಎಂ. ವಿಶ್ವೇಶ್ವರಯ್ಯನವರ ಮಂತ್ರಿತ್ವವನ್ನೇ ಇನ್ನಿ ಕೆಲವುಕಾಲ ಸ್ಥೀಕರಿಸುವುದುತ್ತಮವೆಂದು ತೋರುವುದು.

ಪತ್ರಿಕೆಯಾನೆ ಮುಚ್ಚಲು ಸರಕಾರಿನೋಚನೆ.!

ಮೈಸೂರಿಗೊಂದು ನ್ಯಾಯಶಾಸ್ತ್ರಾಲಯ :—

"ಕರ್ನಾಟಕ" ಪತ್ರಿಕೆಯಲ್ಲಿ ಮೈಸೂರು ವಿಶ್ವವಿದ್ಯಾಲಯದ ಸಭೆಯವರು ನ್ಯಾಯ ಶಾಸ್ತ್ರಾಲಯವನ್ನು ಬೇಗ್ಗದಲ್ಲಿಯೇ ಸ್ಥಾಪಿಸಬೇಕೆಂಬುದಾಗಿಯೂ, ಅದನ್ನು ಬೆಂಗಳೂರಿನಲ್ಲಿಯೇ ಇಡಬೇಕೆಂಬುದಾಗಿಯೂ ಕೆಲವು ಕಾರಣಗಳಿಂದ ಅಭಿಪ್ರಾಯಪಟ್ಟಿರುತ್ತಾರೆ. ಅದರೆ ನ್ಯಾಯಶಾಸ್ತ್ರಾಲಯವನ್ನು ಮೈಸೂರಿನಲ್ಲಿಯೇ ಸ್ಥಾಪಿಸುವುದು ಉತ್ತಮವೆಂದೂ ನುತ್ತು ಯುಕ್ತವಾಗಿರುವುದೆಂದೂ ತೋರುತ್ತದೆ. ಏಕೆಂದರೆ, ಮೈಸೂರು, ರಾಜಧಾನಿಯಾಗಿರುವುದರಿಂದಲೂ, ಮತ್ತು ಇಲ್ಲಿಯೇ ವಿಶ್ವವಿದ್ಯಾಲಯದ ಮಂತ್ರಿಲೋಚನ ಸಭೆ ಇರುವುದರಿಂದಲೂ, ನ್ಯಾಯಶಾಸ್ತ್ರವನ್ನು ಅಭ್ಯಸಿಸುವುದಕ್ಕೂ, ಅಭ್ಯಸಿಸುವ ರೀತಿಯನ್ನು ತಿಳಿಯುವುದಕ್ಕೂ, ಜಿಲ್ಲಾ ಕೋರ್ಟುಗಳಿಂತಲೂ ಕೆಳ ಕೋರ್ಟುಗಳಲ್ಲಿ ನಿಜಾರಗಳೆಲ್ಲವೂ ವಿಪದವಾಗಿಯೂ ಸಾವಧಾನವಾಗಿಯೂ ಜರ್ಜಿಸಲ್ಪಡುವುದರಿಂದಲೂ ಮೇಲ್ಕಂಡ ಶಾಸ್ತ್ರಾಲಯವನ್ನು ರಾಜಧಾನಿಯಲ್ಲಿಯೇ ಸ್ಥಾಪಿಸುವುದು ಉಚಿತವೆಂದು ತೋರುತ್ತದೆ.

ನೀನು ಸ್ವರಾಜ್ಯ ಸಂಬಂಧಿಯೋ ?:—

ಇಲ್ಲಿ ಬರೆದಿರುವ ಈ ಲೇಖನವು ಅನ್ಯಾಯದ ಪ್ರಕಾಶಮಾನವಾದ ನಿದರ್ಶನವನ್ನು ತೋರುವುದು. ಆದರೆ ಲೋಕುಗಳು ಇದನ್ನು ಸುಳ್ಳೆಂದೇ ನಂಬುವರು. ಮದನಪಲ್ಲಿಯ ನ್ಯಾಷನಲ್ ಕಾಲೇಜಿನ ವಿದ್ಯಾರ್ಥಿಯೊಬ್ಬನು ಮಡರಾಸಿನ ನೇತ್ರವೈದ್ಯಶಾಲೆಗೆ ತನ್ನ ಕಣ್ಣನ್ನು ತೋರಿಸಿ ಔಷಧಿಯನ್ನು ತಾಳಬೇಕೆಂದು ಹೋದನು. ಆಗ ವೈದ್ಯಶಾಲೆಯ ಅಧಿಕಾರಿಯು ಅವನನ್ನು "ನೀನು ಸ್ವರಾಜ್ಯಸಂಬಂಧಿಯೋ ?" ಎಂದು ಕೇಳಿದನು. ಆಪನ ದಸ್ತಾವೇಜನ್ನು ಓದಿದ್ದರಿಂದ ಅವನು ಪೊದೆಂದು ನಿರ್ಧರಿಸಿದ್ದಕ್ಕೆ ಸುಮಾರಾಗಿ ಅವನೂ ಕೂಡ ಹೌದೆಂದನು. ಆಗ ವೈದ್ಯನು "ಇಲ್ಲಿ ಸ್ವರಾಜ್ಯ ಸಂಬಂಧಿಗಳಿಗೆ ಜಾಗವಿಲ್ಲ" ಎಂದು ಹೇಳಿದನು. ವೈದ್ಯಶಾಲೆಗಳೂ ಕೂಡ ಈಗ ಪ್ರಬಲವಾಗಿರುವ ರಾಜಕೀಯ ಪಕ್ಷಪಾತವಿಂದಲೂ ಮುಕ್ತ ಕಂಠಗಳಿಂದಲೂ ಸೋಕಿಸಲ್ಪಟ್ಟಿರುವ ದೆಂಬುದನ್ನು ತಿಳಿಯುವುದು ಸುಲಭವೆಲ್ಲವು, ಆದರೆ ಮದರಾಸಿನಲ್ಲಿ ಸ್ವರಾಜ್ಯ ಸಿದ್ಧಾಂತಸಭೆಯ ಬೋಧನೆಯು ಜನರಿಂದ ಬಿಸರಿಗೋಸ್ಕರವಾಗಿ ಇಡಲ್ಪಟ್ಟಿರುವ ವಾರಕಾಲೆಗಳು ಅದರ ಮೇಲೆಬೀಳುವುದನ್ನು ತಡೆಯಲಾರದಸ್ಟು ಪಟ್ಟಿರುವುದೆಂದು ತೋರುತ್ತದೆ. ಈ ವಿಷಯವನ್ನು ಪ್ರಜೆಗಳು ಹೆಚ್ಚು ಗಮನಿಸಬೇಕು. ಈತೆರನ ಸಂಗತಿಗಳು ವಿಸ್ತರಗೊಂಡ ವಕ್ಷದಲ್ಲಿ ನಾವು ಇತರರ ಕಿರ್ದಾರಣವಿಷಯವಾಗಿ ಮಾತನಾಡುವುದನ್ನು ಶೀಘ್ರದಲ್ಲಿಯೇ ಬಿಟ್ಟು ಬಿಡುವುದು ಉತ್ತಮವಾಗಿ ತೋರುತ್ತದೆ. ನಾವು ಅಂತರ್ ಪೆಂಟ್ಲಾಂಡ್ ರವರ ಕೂಡ ಶಾಂತವಾಗಿ ಯೋಚಿಸಿದ್ದಲ್ಲಿ, "ನನ್ನನ್ನು ನನ್ನ ಸ್ನೇಹಿತರಿಂದ ಕಾಪಾಡಿ" ಎಂದು ಬೊಬೆಯಿಡುತಿದ್ದರೆಂದು ನಿಶ್ಚಯವಾಗಿ ತಿಳಿಯುತ್ತೇನೆ.

ಯುದ್ಧದ ಫಲಿತ್ಪತ್ತಿವಳಕೆ :—

ಯುದ್ಧವು ಬ್ರಿಟಿಷರಿಗೂ ಮಿತ್ರಮಂಡಲಿಯವರಿಗೂ ದಿನೇ ದಿನೇ ಸುಗಮವಾಗುವುದು. ನವೆಂಬರು ತಿಂಗಳು 12 ಮತ್ತು 30 ನೇ ತಾರೀಕುಗಳಲ್ಲಿ ಇವರು ಜರ್ಮನಿಯವರಿಗೆ ಬಲವಾದ ಪೆಟ್ಟನ್ನು ಕೊಡುವರು. ಡಿಸೆಂಬರು ತಿಂಗಳು 7 ನೇ ತಾರೀಕಿನಿಂದ ಬ್ರಿಟಿಷ್ ಸೈನ್ಯವು ಮುಂದೆ ನುಗ್ಗುವ ರಭಸಕ್ಕೆ ತಾಳಲಾರದೆ ಜರ್ಮನ್ ರಕ್ಷಣೆಯ ಸೈನ್ಯದ ಸಾಲು ಸಂಪೂರ್ಣವಾಗಿ ಹಾಳಾಗಿ ಬಿಟ್ಟುಬಿಡುವುದು. 13 ನೇ ಡಿಸೆಂಬರು ತಾರೀಕಿನಲ್ಲಿ ಬ್ರಿಟಿಷ್ ಸೈನ್ಯದ ಮುಂಭಾಗವು ಲಿಲಿಯನೇಲೂ ಫ್ರೆಂಚಿನ ಪರಮ ಮೂರ್ಬರ್ಗ್ ಬೇಲೂ ವ್ಯಾಪಿಸುವುದು. 1918 ನೇ ಇಸವಿ ಫೆಬ್ರವರಿ 12 ನೇ ತಾರೀಕಿನೊಳಗಾಗಿ ಜರ್ಮನರು ಫ್ರಾನ್ಸ್ ದೇಶದಿಂದ ಪೂರ್ತಿ ಹೊರಗೆ ಓಡಿಸಲ್ಪಡುವರು. ಸಪ್ಟೆಂಬರ್ 15 ಕ್ಕೆ ಮಾಸೆನಲ್ಲಿಯೂ, ಜುಲೈ 9 ಕ್ಕೆ ರಾಮೂರಾನಲ್ಲಿಯೂ, ಆಗಸ್ಟ್ 13 ಕ್ಕೆ ಬ್ರಸಲ್ಸ್‌ನಲ್ಲಿಯೂ ಬಲಸಾಲಿಯನ್ನು ಸಂಘಟಿಸಿ ಎಲ್ಲವುಗಳಲ್ಲಿಯೂ ಜರ್ಮನರೇ ಅಪಜಯಹೊಂದಿ. ತ್ತಾರೆ. 1917 ನೇ ಇಸವಿ ಡಿಸೆಂಬರು 2 ರ ಪೂರ್ವದಲ್ಲಿಯೇ ಬೆಲ್ಜಿಯಂ ದೇಶವು ಸಂಪೂರ್ಣವಾಗಿ ಶತ್ರುಗಳಿಂದ ವಿಮುಗಡೆಯಾಗುವುದು. 1919 ನೇ ಇಸವಿ ಏಪ್ರಿಲ್ 27 ಕ್ಕೆ ಮೊದಲೇ ಮಿತ್ರಮಂಡಲಿಯವರು ಪ್ರಷ್ಯವನ್ನು ಆಕ್ರಮಿಸಿಕೊಳ್ಳುವರು. 1919 ನೇ ಜುಲೈ 1 ನೇ ತಾರೀಕಿನಲ್ಲಿ ಬ್ರಿಟಿಷರು ಸಮಾಧಾನದ ಕರಾರುಗಳನ್ನು ಮೇಳ ಬರೆಯಿಸುವರು. ತತ್ಪಾತ್ಕಾಲಿಕ ಯುದ್ಧ ಸಮಾಧಾನವು 1919 ನೇ ಸೆಪ್ಟಂಬರ್ 6 ರಿಂದ ಪ್ರಾರಂಭವಾಗುವುದು ಎರಡು ವರ್ಷಗಳವರೆಗೆ ಅಂದರೆ ಶಸ್ತ್ರ ಸಂಬಂಧನಿಯಮನವರೆಗೂ ಯುದ್ಧ ಸಮಾಧಾನವು ಪೂರ್ಣವಾಸ್ತ್ರಯಾಗುವುದಿಲ್ಲ.

ಯುಂ ಭೂಸೈನ್ಯ ಕರ್ನಲ್ ವಿಲ್ಲಿವುಡ್‌ರವರ ಹೇಳಿಕೆ :—

"ಈ ಯುದ್ಧವು ಅಂತ್ಯವಾಗುವುದರೊಳಗೆ ನಾವು ಈ ಬ್ರಿಟಿಷ ಇಂಡಿಯಾದಲ್ಲಿ ನೀಚವಾದ ಜರ್ಮನ್ ಪ್ರಕಾರ್ಯಧಿಪತ್ಯದಲ್ಲಿರುವುದಕ್ಕಿಂತಲೂ ಹೆಚ್ಚು ಸ್ವಾತಂತ್ರ್ಯತೆಯನ್ನೂ, ಪರಿಣಾಮತಿಗೆ ತಕ್ಕ ಸರಕಾರವನ್ನೂ ಪೊಂದವೆವು. ಅದು ಜರ್ಮನಿಯೊಂದಿಗೆ ಅನುಕರಣವಾಗದ ಸ್ವರ್ಧೆಯಾಗಿರುತ್ತದೆ

ಧರಣಿಮಂಡಲಕ್ಕೆ ಸ್ವರಾಜ್ಯ ರಾಕ್ಷಸನನ್ನು ಕೊಡುವುದರಿಂದ ನಾವು ಆರಿಸಿಕಾಸಿ ವಿದ್ಯಾಶಾಲೆಗಳಾವ ಕಸ್ಬುಜನಾಂಗಕ್ಕೆ ಉಪಕಾರರಾಗಿ ಪ್ರಯೋಜನ ಮಾಡಿರಂತೆ ನಮ್ಮನ್ನು ದೋಚಂದಪಾಗಿ ಮಾಡಿ ನಾವು ತಿವನ್ನು ಜಕ್ಕಾಧಿಪಕ್ಕೆದ ಬೊಕೆಗೆ ಸ್ವತಂತ್ರಾವಾದ ಸರಕಾರಿಗಳಂತೆ ಸೇರಿ, ಅದರ ಕಷ್ಟ ಸುಖಗಳೆರಡನ್ನೂ ಅನುಭವಿಸಬೇಕೆಂದು ಕೇಳುತ್ತೇನೆ. ನಾವು ಅವರನ್ನು ಪೂರ್ವದ ನೋವನ್ನೂ, ಪೂರ್ವದ ಅಧರ್ಮವನ್ನೂ, ಮತ್ತು ಪೂರ್ವದ ಒಡಬಿತನಗಳನ್ನೂ ಮರೆತು ಈಗ ಗರ್ವಭೂಕರಾದ ಆಸ್ಟ್ರೇಲಿಯ ಮತ್ತು ಕನಡ ಬನೆರಡರಂತೆ ಸಕ್ಕದಲ್ಲಿ ಒತ್ತಾಸೆಗಾಗಿ ನಿಂತು ಸಹಾಯನೀಡಬೇಕೆಂದು ಕೋರುತ್ತೇವೆ ಜಕ್ಕಾಧಿಪತ್ಯದ ಸಭೆಯಲ್ಲಿ ಕೆಲ್ಯಜನಾಂಗದ ಮುಖ್ಯ ಮಂತ್ರಿಯೊಬ್ಬನು ಕುಳಿತುಕೊಂಡಾಗ ಅವನು ಇಂಗ್ಲಿಷ್ ಭಾಷಾಂತರ ಕಾರಿಗಳಂತೆ ನಮ್ಮೊಡನೆ ಸಂಭಾಷಣೆಮಾಡಬಹುದು; ಇಂಗ್ಲಿಷ್ ಸ್ವನಾಧಿಕಾರಿಗಳಂತೆಯೇ ಅವನೂ ಗೌರವಿಸಲ್ಪಡುವನು. ಸಿದ್ಧವು, ನಾವು ಸಮಾನರಲ್ಲಿ ನಿಧಾನವಾಗಿಯೂ ಮತ್ತು ಸ್ವಪ್ನವಾಗಿಯೂ ಮಾತನಾಡಬಹುದು. ಜಕ್ಕಾಧಿಪತ್ಯಕ್ಕೆ ಸೇರುವ ೩೫,೪೦,೦೧,೦೦೦ ಪ್ರಜೆಗಳ ವ್ಯಾಪಾರ, ಬುದ್ಧಿ, ಧನ, ಮತ್ತು ಪ್ರತಿಷ್ಠೆಯೇ ಆಧಿಕಾರಿಗಳಾಗಿರಬೇಕಾದ ಅವಶ್ಯವೇನಿಲ್ಲ. ಭೂತ ಎಂತವು ಸರಿಗೆ ಸಾಲುತ್ತಿಲ್ಲವೆನುವುದರಲ್ಲಿ ಪ್ರಯೋಜನಕಾರಿಯಾಗಿದೆ ''

ಈ ಲೇಖನವು ನೋಪ್ಯದೇವಿಯರ ಸಂಭಾವ ಮತ್ತು ಅವರ ಶಾಸಾತ್ರಿಕರು ಸೂಕ್ಷ್ಮವಾದ ಅಭಿಪ್ರಾಯಗಳನ್ನು ಕಂಸಿಸುವಂತೆ ಮಾಡುತ್ತದೆಂಬುವುದರಲ್ಲಿ ನಮಗೆ ಸಂಶಯವಿಲ್ಲವಿದ್ದಿಲ್ಲ ಆದರೂ ಕೂಡ ನಾವು ಅವರಿಗೆ ಅದನ್ನು ಸುಪ್ರಭಂಜೆ ಮಾಡಲು ಸಾಹಸಪಡಾಹ್ವೇನೆ, ಮತ್ತು ಅವರು ಅದ್ದರಿಂದ ಪ್ರಯೋಜನಯೊಂದಿ ಸ್ವಲ್ಪವಾದ ರಾಜಕೀತಿಯು ತಿಳಿವುಳ್ಳವರಾಗುವರೆಂದು ನಂಬುತ್ತೇನೆ.

ವೃತ್ತಾಂತ ಸಂಗ್ರಹ.

ನಮ್ಮ ಸರಕಾರದವರು ಮಾಳಿಕನೆಲೆ ಆಕಸ್ಮಿಕೆಗೆ ಇಂತೀನಿಧಾನ ವಾಗಲಿ ಎಂದು ಹೆಸರಿಟ್ಟಾರೆ.

ಮೈಸೂರಿನ ದಕ್ಷಿಣದಲ್ಲಿ "ಇಕ್ಸ್‌ಸಾಸ್ಟ್ರಿಯಲ್ ಸೆಕ್ರಟರಿ" ಗಳನ್ನಾಗಿ ಮಾಡಿ, ಮೈಸೂರಿನಲ್ಲಿಯೇ ನಿಲ್ಲಿಸುವಂತೆಂದು ತಿಳಿಯುವರಿತ್ತಿದೆ.

ಮೈಸೂರು ವಿಶ್ವವಿದ್ಯಾಲಯದ ಮುಂದಿನ ಸಭೆಯು ಸರಸಿಯಲ್ಲಿ ಮಾರ್ಚ್ ತಿಂಗಳು ಮಧ್ಯಾನದಲ್ಲಿ ನಡೆಯುವುದು.

ಬಿ. ಎಂ. ಕೆ. ಅವಸ್ಥಿ ಎಂಬ ಒಬ್ಬ ಪೇಶ್ವ ಬಾಲಕಿಯು ಸ್ವರಾಜ್ಯ ಸಂಘಕ್ಕೆ ಸೇರುವ ಸಲುವಾಗಿ ಸರ್. ಸುಬ್ರಹ್ಮಣ್ಯ ಐಯರ್ ಇವರಿಗೆ ವಿಜ್ಞಾಪನಾಪತ್ರಿಕೆಯನ್ನು ಬರೆದುಕೊಂಡಿದ್ದಳು. ಅದಕ್ಕೆ ಅವರು ದೇಶೋನ್ನತಿಗಾಗಿ ನಾನಿಮಿತ್ತಿಯಿಂದ ತಿನ್ನ ಕೈಲಾದುದನ್ನು ಮಾಡಬಹುದೆಂದು ಉತ್ತರ ಕೊಟ್ಟಿರುತ್ತಾರೆ ಇದರಿಂದ ಪೋರುವುದೇನೆಂದರೆ-ಪುರುಷರಲ್ಲದೆ ಸ್ತ್ರೀಯರೂ ಸಹ ಸ್ವದೇಶವಾತ್ಸಲ್ಯದಿಂದ ಕರ್ತವ್ಯನಿರತರಾಗುತ್ತಿರುವುದು ಶುಭಸೂಚನೆಯಾಗಿರುತ್ತದೆ

ಜೊಂಜಾಯಿನ ಅಂತೆಯ ಆಳುಗಳು ಧಾಕುರ್‌ದ್ವಾರದಲ್ಲಿ ಬುಧವಾರ ರಾತ್ರಿ ಸಭೆ ಸೇರಿದ್ದರು. ಆಗ ರಾಜಮಾನ್ಯರಾದ ಸರ್. ದಿನಾಶಾ ವಾಚಾರವರು ಇವರ ಕಷ್ಟಗಳನ್ನು ಅಧಿವಸ್ಯನ ಅಂತೆ ಇಲಾಖೆಯ ಮುಖ್ಯಾಧಿಕಾರಿಗಳಿಗೆ ತಿಳಿಸುವುದಾಗಿ ಹೇಳಿದರು. ಅದರ ಫಲಿತಾಂಶವನ್ನು ನೀರೀಕ್ಷಿಸುತ್ತಿರುವರು.

" ಇದೇ ೭ಂಗಳಸಂವತ್ಸರದ ಆಷಾಢ ಶುದ್ಧ ವಿಕಾದಶೀ ಗುರುವಾರ (೧೭-೭-೧೯) ರಲ್ಲಿ ವಿದ್ಯಾವಿಲಾಸ ಸಭಾ ಎನ್ನುವ ಸಂಘವೊಂದು ಬೆಂಗಳೂರಿನಲ್ಲಿ ಅಸ್ತಾನವಂಟಿತ, ಶ್ರೀ ಪದರೆ ಅರ್ಕತ್ತನಾರಾಯಣ ರಾಪ್ತಿಗಳಿಂದ ಸ್ಥಾಪಿತವಾಯಿತು. ಕರ್ನಾಟದೇಶಭಾಷೆಯ ವಿಳಿಗೆಗಾಗಿ ಉತ್ತಮೋತ್ತಮ ಗತಿಯ ಪತ್ರಿಕೆಗಳನ್ನೂ, ಮಂಜವಸ್ತುಕಗಳನ್ನೂ ಪ್ರಕಟಿಸುವುದಲ್ಲದೆ, ಪ್ರತ್ಯಕ್ಷೋಪ ಯೋಗಿಯಾಗಿರತಕ್ಕ ಸಮಸ್ತವಿಷಯಗಳನ್ನು ಆಧಿಕರಿಸಿದ ನಾನಾವಿಧ ಪುಸ್ತಕಗಳನ್ನೂ ರಚಿಸಿ ಪ್ರಚಾರಪಡಿಸುವುದೇ ಮೊದಲಾದುವು ಈ ಸಭೆಯ ಉದ್ದೇಶಗಳಾಗಿರುವುವು.

ಈ ಸಭೆಯ ಪ್ರಥಮ ಸಂಮೇಳನವು ಇದೇ ಸಂವತ್ಸರದ ನಿಜಭಾದ್ರಪದ ಪಂದ್ರ ವಿಕಾದಶೀ ಗುರುವಾಸರ (೨೭-೯-೧೯) ದಿವಸ ಬೆಂಗಳೂರು ನಲ್ಲಿ ನಡೆಯಿತು. ಆಗ ಸಭಾಸ್ಥಾಪಕರೇ ಅಗ್ರಾಸನವನ್ನಲಂಕರಿಸಿದ್ದರು. ಇದಕ್ಕೆ ಮೈಸೂರು ದೇಶದ ವಂಡಿಕರನೇಕರು ಬಂದು ಕರ್ನಾಟಕಭಾಷೆಯಲ್ಲಿ ಸಾರವತ್ತಾದ ಉಪನ್ಯಾಸಗಳನ್ನು ಮಾಡಿ ಭಾಷಾಭಿವೃದ್ಧಿಗೆ ಸಮಕಾರಿಗಳಾದ ಹಲವು ಸೂಚನೆಗಳನ್ನು ತಿಳಿಸಿದರು. ಸಭಾಸಂಬಂಧವಾದ ಕೆಲವು ನಿಯಮಗಳು ರಚಿಸಲ್ಪಟ್ಟ ಮೇಲೆ ರಾಜಾತೀರ್ಮಾದದೊಡನೆ ಸಭೆಯು ಪೂರ್ಣಗೊಂಡಿತು."

ರಷ್ಯಾವಾರ್ತೆ.

ಮತಿಯು ಅಧಿಕವಾಗಿದ್ದುದರಿಂದ ಪೆಲ್ರಿಯಂ ದೇಶದೊಳಗೆ ಇರುವ ಬ್ರಿಟಿಷರ ಜಯಸ್ಕಂದಕ್ಕೆ ತುಂಬ ಅಡಚಣೆಯುಂಟಾಗಿರುತ್ತದೆ. ಆದಾಗ್ಯೂ ಇವರು ಮುಂದೆ ನುಗ್ಗುತ್ತಾ ಪಾರಿಯಲ್ಲಿ ಸಿಕ್ಕಿದ ಶತ್ರುಸೈನಿಕರನ್ನೆಲ್ಲಾ ಸೆರೆಮಾಡಿಯುತ್ತಿರುವರು. ಕಳೆದವಾರದಿಂದೀಚೆಗೆ ನಡೆದಿರುವ ಯುದ್ಧದಲ್ಲಿ ಜರ್ಮನಿಯವರಲ್ಲಿ ಬ್ರಿಟಿಷರ ಬಂದಕ್ಕೆ ಮೂರರಷ್ಟು ಸೈನ್ಯವು ನಾಶವಾಗಿರುವುದು. ಅಂತರಿಕ್ಷ ಯುದ್ಧದಲ್ಲಿ ಅಮೆರಿಕಾದವರ ವಿಮಾನಗಳೂ ಬಂದು ಸೇರುತ್ತಿರುವುವು. ಇದರಿಂದ ಜರ್ಮನಿಯನರು ಬಹು ಭಯಪಡಹತ್ತಿರುವರು. ಜರ್ಮನ್ ಸೈನ್ಯಾಧಿಕಾರಿಗಳು ಹೊಂಕಾಂಗ್ ಮತ್ತು ನಾರ್ವಾ ಪಟ್ಟಣಗಳಮೇಲೆ ಸಿಡಿಮದ್ದಿನಗುಂಡುಗಳನ್ನೆಸೆದು ವಿಶೇಷವಾಗಿ ವ್ಯಾಪಾರಾಸಿಯನ್ನೂ, ಗಾಯವನ್ನೂ ಪಡಿಸಿರುವರು. ಮತಿಯಿಂದ ಎಚ್ಚೇ ಅಡಚಣೆಯುಂಟಾಗಿದ್ದರೂ ಜರ್ಮನಿಯವರು ತಮ್ಮ ನಾವೆ ಸಮೀಕರಾಗಿ ಬೇಗಾ ಕೂಲ್ಲಿಯಲ್ಲಿರುವ ಬಂದು ದೊಡ್ಡದ್ವೀಪಕ್ಕೆ ನುಗ್ಗಿ ಅದನ್ನು ಸಂಪೂರ್ಣವಾಗಿ ವಶಪಡಿಸಿಕೊಂಡರು. ಈ ದ್ವೀಪವು ರೂಸ್ಯಾ ರಾಜಧಾನಿಗೆ ಬಹು ಹತ್ತಿರದಲ್ಲಿರುವುದರಿಂದ ತಮ್ಮ ಸರಕಾರಿನ್ಯೆಲ್ಲಾ ಸೈನ್ಯೋಗ್ಯಾಧಿನಿಂದ ಬಳದೇಶವಾದ ಮಾಸ್ಕೋವಿಗೆ ಸಾಗಿಸಬೇಕೆಂಬ ಅಯೋದಲ್ಲಿರುವರು. ನೋವಸ್ತೋರ್ ಪಟ್ಟಣದಮೇಲೆ ಬುಲ್ಶೇವಿಯಾ ಸೈನ್ಯಾಧಿಕಾರಿಗಳು ಸಿಡಿಮದ್ದಿನ ಗುಂಡುಗಳನ್ನು ಹಾಕಿ ಅನೇಕ ವ್ಯಾಪಾರಾಶಾ ನಾಶಿರುವರು. ಗ್ರೀಸ್ ರಾಜ್ಯವು ಜರ್ಮನಿ, ಆಸ್ಟ್ರಿಯ, ಟರ್ಕಿ, ಬುಲ್ಗೇರಿಯಾ ಇವರೆಲ್ಲರನ್ನೂ ತಮ್ಮ ಶತ್ರುಗಳೆಂದು ಪ್ರಕಟಿಸಿರುವುದು, ಅಮೆರಿಕಾವು ಇನ್ನು ಮುಂದೆ ರಷ್ಯರಾಜ್ಯಗಳಿಗೆ ಯಾವ ಸರಕು ಸಹಾಯವನ್ನೂ ಮಾಡುವುದಿಲ್ಲವೆಂತೆ. ಮತ್ತು ಇವರು ಸಾಲ್ವಡಾರಿಯ ಮಂಗಳಿಗೆ ಇದುವರೆಗೆ ೨೫೦,೦೦,೦೦೦ ಪೌನುಗಳಷ್ಟು ಸಾಲ ಕೊಟ್ಟಿರುವರು.

ಕಳೆದವಾರದಿಂದೀಚೆಗೆ ೩ ಬ್ರಿಟಿಷರ ಯುದ್ಧದ ಹಡಗುಗಳೂ, ೨ ಅಮೆರಿಕಾದವರದೂ, ಮತ್ತೊಂದು ಗ್ರೀಸಿನವರದೂ ಶತ್ರುಗಳಿಂದ ಮುಳಿಗಿಸಲ್ಪಟ್ಟಿರುವುದೆಂದು ತಿಳಿದುಬಂದಿರುತ್ತದೆ. ಇದಲ್ಲದೆ ಒಟ್ಟು 13 ಮೊಷ್ವೋ, 11 ಸಣ್ಣವೂ, ಇನ್ನು ಕೆಲವು ದೋಣಿಗಳೂ ನಾಶವಾಗಿರುವುವು. ಜರ್ಮನ್ ನಾವಿಕರು ಓಸ್ಟೆಂಡ್ ಪಟ್ಟಣದ ಹತ್ತಿರ ತಮ್ಮ ಅಧಿಪತಿಯೊಬ್ಬನನ್ನು ಅವನ ಮಾತಿಗೆ ವಿರುದ್ಧ ನಡೆದು ಸಮುದ್ರಕ್ಕೆ ತಳ್ಳಿಬಿಟ್ಟರೆಂದು ಪದಂತ ಇದೆ. ಜರ್ಮನಿಯ ಜಪ್ಲೀಗಳು ಕೆಲವು ಲಂಡನ್ ಪಟ್ಟಣದಮೇಲೆ ಸಿಡಿಮದ್ದಿನ ಗುಂಡುಗಳನ್ನು ಎಸೆದು ಅನೇಕರ ವ್ಯಾಪಾರಾಸಿಯನ್ನು ಮಾಡಿರುತ್ತವೆ. ಅವೆ ಹಂತಿಕಿಗೆ ಬರುತ್ತಾ ನಾರಿ ತಪ್ಪಿ 4 ಸ್ಪೈಂಜರ ವರದಾದವು. ಜರ್ಮನಿಯಲ್ಲಿ ಆಹಾರವಪದಾರ್ಥಗಳಿಗೆ ಬಹಳಷ್ಟವಾಗಿರುವುದು. ಲಂಡನ್ ಪಟ್ಟಣದಲ್ಲಿ ದುಡ್ಡು ಕೊಟ್ಟರೂ ಟೀ, ಸಕ್ಕರೆ, ಅಕ್ಕಿ ಮುಂತಾದ ಕೆಲವು ಸಾಮಾನುಗಳು ಸಿಕ್ಕುವುದು ಅತಿಕಷ್ಟವಾಗಿರುವುದು.

ಜನಾಭಿಪ್ರಾಯ.

ಬೇರೆ ಯಾರು ಏನನ್ನು ಅಭಿಪ್ರಾಯ ಗಳಿಗೆ ನಾವು ಹೊಣೆಗಾರರಲ್ಲ.—ಎಡಿಟರ್.

ಎಂಟರ್‌ಟೈನ್‌ಮೆಂಟ್.

ಆರ್ಯಾ ಪತ್ರಕರ್ತರೇ,

ರಂಗೀಸಿಗೆ ಎಂಟರ್‌ಟೈನ್‌ಮೆಂಟುಗಳ ಅರ್ಥವು ಅತಿಪ್ರಬಲವಾಗಿರುವುದು. ಆಸ್ಟೆಂಟು ಪೂರ್ವಸ್ಥಿತಿಯಿಂದ ಪದ್ಮಾಸ್ಥರಾದರೂ ಎಂಟರ್‌ಟೈನ್‌ಮೆಂಟು! ಬೆಂಗಳೂರಿಂದ ಮೈಸೂರಿಗೆ ಬಂದರೂ ಎಂಟರ್‌ಟೈನ್‌ಮೆಂಟು! ನಾಟಕದವರು ಗಾನ ಮಾಡಿದರೂ ಎಂಟರ್‌ಟೈನ್‌ಮೆಂಟು! ಪತ್ರಿಕೆಯ ಬೀಜವು ಮೊಳೆತರೂ ಎಂಟರ್‌ಟೈನ್‌ಮೆಂಟು! ಕೊಳೆತುಕೊಡರೂ ಎಂಟರ್‌ಟೈನ್‌ಮೆಂಟು! ಮಣ ಸಂಪಾದಿಸ ತೊಡಗಿದರೂ ಎಂಟರ್‌ಟೈನ್‌ಮೆಂಟು! ಮಣವನ್ನು ವ್ಯಯಮಾಡಿದರೂ ಎಂಟರ್‌ಟೈನ್‌ಮೆಂಟು! ಕುಳಿತರೂ ಎಂಟರ್‌ಟೈನ್‌ಮೆಂಟು! ನಿಂತರೂ ಎಂಟರ್‌ಟೈನ್‌ಮೆಂಟು! ಓಗಿರುವಾಗ ಎಂಟರ್‌ಟೈನ್‌ಮೆಂಟಿನ ಅರ್ಥವೇ ತಿಳಿಯದಂತಾಗಿ ಮೋಗಿನೆ ಇದನ್ನು ಕೊಡವರು ಯಾರು? ಕೊಡುವುದು ಹೇಗೆ? ಯಾರಿಗೆ ಕೊಡಬೇಕು? ಯಾವಾಗ ಕೊಡಬೇಕು? ಈ ಸಂಶಯವನ್ನು ತಾವಾಗಲೀ ತಮ್ಮ ಪತ್ರಿಕಾ ವಾಹಕರಾಗಲೀ ದಯವಿಟ್ಟು ತಿಳಿಸಬೇಕಾಗಿ ಪ್ರಾರ್ಥನೆ.

"ಸತ್ಯವಾದಿಯ ಓದುಗ"

ಕಂಡೆರು ನುಡಿ.

[*All Rights Reserved*]

(ಹಿಂದಿನ ಸಂಚಿಕೆಯಿಂದ ಮುಂದಕ್ಕೆ ಸಾಗಿದುದು)

ಅಮಲ—ನೈನ್ಸನು ನಾನು ಜೊತೆಗೆ ಹೋಗಕೂಡದೆಂದು ಏಕೆ ಬಾತ್ತೀ. ಅದುದುಂದ ನಾನು ದಿನವೆಲ್ಲಾ ಬಿಸ್ಲಿ ಕುಳಿತಿರಬೇಕು.

ಗೌಗಿ—ಅಯ್ಯೋ ಮಗುವೇ! ನಿನಗೆ ಏನಾಗಿದೆ?

ಅಮಲ—ನಾನು ಹೇಳಲಾರೆ; ನಾನು ಹಿಂದ್ದಿವಂತೆನಲ್ಲ; ಅದುದರಿಂದ ನನಗೆ ಏನಾಗಿದೆಯೆಂಬುದನ್ನು ತಿಳಿಯಲಾರೆ. ಎಲ್ಲೆ ಗೌಗಿನೆ! ನೀನು ಎಲ್ಲಿಂದ ಬರುತ್ತೀಯೆ?

ಗೌಗಿ—ನಮ್ಮ ಹಳ್ಳಿಯಿಂದ.

ಅಮಲ—ನಿಮ್ಮ ಹಳ್ಳಿಯಿಂದಲೆ! ಅದು ಬಹಳ ದೂರವೂ?

ಗೌಗಿ—ನಮ್ಮ ಹಳ್ಳಿಯು ಸಂಜೆಮುರಾ ಬೆಟ್ಟಗಳಿಂದ ಸ್ವಲ್ಪ ದೂರ ಪಾಮಲ ಸಮುಯಸೋಲಿರುತ್ತದೆ.

ಅಮಲ—ಸಂಜೆಮುರಾ ಬೆಟ್ಟಗಳು! ಪಾಮಲಸಮು! ನನಗೆ ಅರ್ಥವಾಗುತ್ತಿದೆ. ನಾನು ನಿಮ್ಮ ಹಳ್ಳಿಯನ್ನು ನೋಡಿರಬಹುದು. ಆದರೆ ನಾನು ಯಾವಾಗ್ಗೆಂಬುದನ್ನು ಹೇಳಲಾರೆ!

ಗೌಗಿ—ನೀನು ಅವನ್ನು ನೋಡಿರುವಿಯೋ? ಆ ಬೆಟ್ಟದ ತಪ್ಪಲಿಗೆ ಹೋಗಿದ್ದೆಯೋ?

ಅಮಲ—ಏನಿಲ್ಲ. ಆದರೆ ನಾನು ಅದನ್ನು ನೋಡಿರುವಂತೆ ಭ್ರಾಮಪಡುತ್ತಿದೆ. ನಿಮ್ಮ ಊರುಬಾಗಿಲ್ಲಿ ಬಹಳ ಬುಬಿಯಾದ ಕೆಲವು ಮರಗಳಿವೆ. ಅವು ಕೆಂಪುಬಣ್ಣದ ರತ್ನೆಯ ದಕ್ಕದಲ್ಲಿನೇ ಇವೆ. ಹಾಗಿಲ್ಲವೆ?

ಗೌಗಿ—ಹೌದು. ಮಗು! ನೀನು ಸರಿ.

ಅಮಲ—ನುಕ್ಕು ಆ ಬೆಟ್ಟದ ಇಳಿಜಾರಿನಲ್ಲಿ ದನಕರುಗಳು ಮೇಯುತ್ತಾ ತಿರುತ್ತವೆ.

ಗೌಗಿ—ಎಂತಹ ಸೂಜಿಗ! ನಮ್ಮ ಹಳ್ಳಿಯಲ್ಲಿ ದನಕರುಗಳು ಮೇಯುತ್ತಿರುತ್ತವೆ! ನಿಜ, ಮೇಯುತ್ತಿರುತ್ತವೆ!

ಅಮಲ—ನಿನ್ನು ಹಂಗಸರು ಕೆಂಪುಸೀರೆಗಳನ್ನುಟ್ಟು ನದಿಗೆಹೋಗಿ ಗಡಿಗೆಯಲ್ಲಿ ನೀರು ತುಂಬಿಕೊಂಡು ತಮ್ಮ ತಲೆಯಮೇಲೆ ಹೊತ್ತುಕೊಂಡು ಹೋಗುತ್ತಾರೆ. [ಸಶೇಷ]

ಸಾದರ ಸ್ವೀಕಾರ.

ಬೆಂಗಳೂರಿನಲ್ಲಿ ಹೊಳೆಯುವ "ಆಲ್ ಇಂಡಿಯಾ ಅಪ್ಪರ್‌ಡ್ಯೂರರ್" ಎಂಬ ಪತ್ರಿಕೆಯ 1 ನೇ ಸಂಚಿಕೆಯು ನಮ್ಮ ಕೈ ಸೇರಿದೆ.

ಮೈಸೂರಿನಲ್ಲಿರುವ ಮೆಸರ್ಸ್.ಎಂ. ಎಸ್. ಸನ್ಸ್‌ರವರ ಅಂಡ್ ಬ್ರದರ್ಸ್‌ರವರ 1914 ನೇ ಇಸವಿಯ ಸಿಲ್ ಕ್ಯಾಲೆಂಡರ್ ನಮಗೆ ತಲಿರುತ್ತದೆ

ಚಂದ್ರಕಾಂತಿ ತೈಲ.

4-ನೆ ಪೀಡೆಗಳನ್ನು ನಿವಾರಿಸುವುದಲ್ಲದೇ ಧನಪ್ರಾಪ್ತಿಯು, ಪರಿಣಾಮಕಾರಿ, ಚೀಪ ಸಂಬಾದನೆಯ ಸಾಧ್ಯಗಳು, ಮಕ್ಕಳ ಪಲ್ಲಮುದ, ಪ್ಲೇಗ್, ನುಂತಾದುವುಗಳು ಗುಣವಾಗುತ್ತವೆ. ಕ್ರಯ ಸೀಸೆ 1ಕ್ಕೆ 1 ಆಣೆ

[3-1] ನಮ್ಮ ವಿಳಾಸ:—ಚಂದ್ರಕಾಂತ ಡಿಪೋ, ಮೈಸೂರು.

೧೦೦೦ ರೂಪಾಯಿಗಳು ಬಹುಮಾನ.

ಪ್ರೋಕಸ್ಸಾಸಿಸ್ಟ್ರವಾದ ಸಾಲಾಮಿಸಿಸ್ರ ಮುರಬ್ಬಾ.

ಗೌರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ.



ರಿಜಿಸ್ಟರ್ಡ್ ಟ್ರೇಡಮಾರ್ಕ್

ಈ "ಸಾಲಾಮಿಸಿಸ್ರ ಮುರಬ್ಬಾ" ವನ್ನು ಯಾರು ಉಪಯೋಗಿಸುತ್ತಾರೋ ಅವರಿಗೆ ಸ್ವಲ್ಪ ಕಾಲದಲ್ಲಿಯೇ ಅತ್ಯಧಿಕವಾದ ಬಲವು ಉಂಟಾಗುವುದು. ಇದು ಸಾಮಾನ್ಯವಾಗಿ ಎಲ್ಲರಿಗೂ ಪ್ರಿಯವಾಗಿರುವುದು. ಇದು ಸಾಮಾನ್ಯವಾಗಿ ಎಲ್ಲರಿಗೂ ಹಿಡಿಸುತ್ತದೆ. ಇದು ಸಾಮಾನ್ಯರೊಂದಿಗೆ ವಿರುದ್ಧ ಹೋಗುತ್ತದೆ. ಕೈಗಾಲು ಮತ್ತು ಸೊಂಟದಲ್ಲಿ ನೋವಿದ್ದವರಿಗೆ, ಹಸಿವು ಇಲ್ಲದಿದ್ದವರಿಗೆ, ಮಲಬದ್ಧತೆಯು ಸರಿಯಾಗಿ ಆಗದಿದ್ದವರಿಗೆ, ವೀರ್ಯದಲ್ಲಿ ದೌರ್ಬಲ್ಯ ಕೆಟ್ಟು ಹೋಗಿದ್ದವರು ಈ "ಸಾಲಾಮಿಸಿಸ್ರ ಮುರಬ್ಬಾ" ಸೇವನೆಯಿಂದ ಗುಣವಾಗಿ ವಿಶೇಷ ಬಲ್ಯಸ್ಥಿತಿಯಲ್ಲಿರುವುದು. ಈ ಮುರಬ್ಬಾವು ಸಾಲಾಮಿಸಿಸ್ರಿಯಿಂದ ತಯಾರಿಸಲ್ಪಟ್ಟಿಲ್ಲವೆಂದು ವ್ಯಕ್ತಪಡಿಸುವವರಿಗೆ—೧,೦೦೦ ರೂಪಾಯಿಗಳು ಬಹುಮಾನವಾಗಿ ಕೊಡಲ್ಪಡುವುದು. ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ಬಿಡಾಳಿಸುವುದಾದರೆ ನಮ ಕಂಪನಿ ಮೂಲಕ ಸ್ಟಂದ ಹಣೆಯಬಹುದು.

ಕ್ರಯ ಡಬ್ಬಿ ೧ ಕ್ಕೆ ರೂ. ೩-೦-೦. ವಿಪಾಲು ವಿಶೇಷ ೧ ಡಬ್ಬಿಯಿಂದ ೩ ಡಬ್ಬಿಗಳ ನೆರೆಗೆ ೦-೬-೦. ಉಪಯೋಗಿಸುವ ವಿಧವು ಡಬ್ಬಿಯ ಜೊತೆಯಲ್ಲಿರುವುದು.

ಓ. ಮುನ್ನಾಲಾಲ್, ಡಿಸ್ಟ್ರೀ ಸೈಕ್ಯರು,
೫, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

[3-1]

ಬೆಂಗಳೂರು ಚಂದಾದಾರರಿಗೆ ಸೂಚನೆ.

ಬೆಂಗಳೂರಿನಲ್ಲಿ ಚಂದಾದಾರರಾಗಿರಲು ಇಷ್ಟವುಳ್ಳವರೆಲ್ಲರೂ, ಅಲ್ಲಿ ನಮ್ಮ ಪ್ರತಿನಿಧಿಗಳಾದ ಶ್ರೀವರ್ಮಾ ಬಾಲಸರಸ್ವತಿಯವರಿಗೆ ಚಂದಾಹಣವನ್ನು ಕೊಟ್ಟು, ರಸೀತಿ ಪಡೆದು, ಪತ್ರಿಕೆಯನ್ನು ಅವರಿಂದಲೇ ಪಡೆಯಬಹುದು. ಇವರ ಮೂಲಕ ಚಂದಾದಾರರಾಗುವವರಿಗೆ ವಾರ್ಷಿಕಚಂದಾ 12 ಆಣೆ ಮಾತ್ರ. ಇತರರಿಗೆ ರೂ 1—6—0

ವಿಳಾಸ—ಶ್ರೀವರ್ಮಾ ಬಾಲಸರಸ್ವತಿ,
15, ಆರ್ಕಾಟು ಶ್ರೀನಿವಾಸಾಚಾರ್ ಸ್ಟ್ರೀಟ್,
ಬೆಂಗಳೂರು ಸಿಟಿ.

"ಸತ್ಯವಾದಿ"

ವಾರ್ಷಿಕ ಚಂದಾ:—ಸ್ಥಳದವರಿಗೆ ೪ ಆಣೆ. ಪರಸ್ಥಳದವರಿಗೆ ರೂ. 1 ಆಣೆ ೬. ಪಾತ್ರೀದಾರರಿಗೆ:—ದೇಶೋನ್ನತಿಗೆ ಸಂಬಂಧಪಟ್ಟ ಪಾತ್ರಿಗಳೆಲ್ಲವೂ ಪ್ರಕಟವಾಗುವವು. ಇತರ ವಿಷಯಗಳನ್ನು ಬರೆದು ತಿಳಿಯಬಹುದು.

ಮ್ಯಾನೇಜರ್, "ಸತ್ಯವಾದಿ," ಮೈಸೂರು.

Printed and Published by Mr. B. V. Narasimha Iyengar, at the Royal Press, Mysore; for the Editor & Proprietor.

Not to be removed from the office
SATYAVADI.

Regd. No. M. 1299. ಸಿಡಿ ಪ್ರತಿ 3 ಪೈ.

SATYAVADI

ರಾಜಕೀಯ, ಸಾಮಾಜಿಕ, ಮತವಿಚಾರ, ಭಾಷಾಭಿವೃದ್ಧಿ ಮುಂತಾದ ವಿಷಯಗಳನ್ನೊಳಗೊಂಡಿರುವ

"ಸತ್ಯವಾದಿ" ವಾರಪತ್ರಿಕೆ

ವಾರ್ಷಿಕ ಚಂದಾ 1—8—0] ಪ್ರತಿ ಮಂಗಳವಾರ ಪ್ರಕಟಿಸಲ್ಪಡುವುದು. [ಅಂಚೆಸ್ಟೆ ಸಹಿ 1—6—0

ಸಂಪುಟ I ಮಂಗಳವಾರ 6 ನೇ ನವಂಬರ್, 1917 ಸಂಚಿಕೆ 8

ಆತ್ಮಾರ್ಥಂ ಜೀವಲೋಕೇಸ್ಮಿನ್ ಕೋನಪೇಕ್ಷತಿ ಮಾನವಃ ।
ಪರಂ ಪರೋಪಕಾರಾರ್ಥಂ ಯೋ ಜೀವತಿ ಸ ಜೀವತಿ ॥
ಪರೋಪಕಾರ ರೂಪಸ್ಯ ಧರ್ಮಸ್ಯಾನುಷ್ಠಿತಂ ಹಿತಂ ।
ಜೀವಂತು ಪಶವೋಽಪ್ಯೇತೇ ಜವರ್ಜಾಪ್ಯುಪಕುರ್ವತೆ ॥

ಸ್ವರಾಜ್ಯ.

ಭರತವರ್ಷವು ಯಾವಾಗಲೂ ಅಭಿವೃದ್ಧಿಯನ್ನೈದುತ್ತಲೇ ಇರುವುದು. ಮತ್ತು ಅನಂಯಾದೊಂದು ಹಕ್ಕಾಧಿಪತ್ಯವನ್ನು ಸ್ಥಾಪಿಸಿರುವುದು. ಸ್ವರಾಜ್ಯರಾಸನವು, ಭಾರತೀಯರೊಳಗೆ ಒಂದು ನವೀನಸ್ಥಾನವನ್ನು ಪ್ರತಿಷ್ಠಿಸುವುದೆಂಬುದನ್ನು ಯಾರಾದರೂ ಸಂದೇಹಪಡುವರೆ? ಅದು ಎಂತಹ ಪ್ರಾಣವಿರಬಹುದು! ಅದು ಪ್ರತಿಯೊಬ್ಬ ಸ್ತ್ರೀಪುರುಷರನ್ನು ಶಕ್ತಿಯುತರನ್ನಾಗಿ ಮಾಡುವುದು—ಭರತವಾಸಿಯು ಎಂಬುದಿಲ್ಲದಷ್ಟು ಮುಂದುವರಿಯುವುದು—ಭಾರತಭೂಮಿಯು ಸಮೃದ್ಧಿಯಾದ ಸಂಪತ್ತಿನಿಂದಲೂ, ಏಳಿಗೆಯಿಂದಲೂ ತುಂಬಿತುಳುಕುವುದು—ಸ್ವರಾಜ್ಯವು ಸ್ಥಿರವಾಗುವುದು—ಇಂತಹ ವಸ್ತುವನ್ನು ಪಡೆಯಲು ಭೂಸ್ವರ್ಗಗಳನ್ನು ಕಂಪಿಸಿದಾರದಂತಹ ಪ್ರಕೃತಿಗೆ ಯಾವಾನಾದರೂ ಗುಲಾಮನಾಗಿರುವನೆ? ಇಲ್ಲವಾದರೆ ಜನ್ಮಿ, ದೇಶಮಾತೆಯನ್ನು ಸ್ವೀಕರಿಸಿಕ್ಕೆ ನವ ರೂ ಸಾಲವನ್ನಿರಿ. ನಮ್ಮ ಜನ್ಮಸ್ವಕ್ಷವಾದ, ಭಾಷೆಯಿಟ್ಟಿರುವ ದೇಶಮಾತೆಯನಲುಬಾಗಿ; ನಾವೆಲ್ಲರೂ ನಿರೀಕರಾಗಿ, ನಡುಗುವ ಮುಂದೆ ನಡೆಯುವ, ಬನ್ನಿರಿ

ಬಿ॥ ಸಿ. ರಾಮಲಿಂಗರೆಡ್ಡಿ, ಎಂ. ಎ. ಯವರು.

ಮ॥ ಸಿ. ರಾಮಲಿಂಗರೆಡ್ಡಿ, ಎಂ. ಎ., ಯವರಿಗೆ ವಿದ್ಯಾಭ್ಯಾಸದ ಖರ್ಚಾವೆಯ ಮುಖ್ಯಾಧಿಕಾರಿಗಳ ಜೊತೆಯಲ್ಲಿ ಕೆಲಸಮಾಡುವ ಉನ್ನತ ಪದವಿಯು ದೊರೆತುದಕ್ಕಾಗಿ ರಾಜಧಾನಿಯ ಪ್ರಮುಖರು ತಮ್ಮ ಸಂತೋಷವನ್ನು ಪ್ರದರ್ಶಿಸುವುದಕ್ಕೊಸಗ, ಬ್ಯೂಹಾಳ ಬಂಗಲೆಯಲ್ಲಿ ನಿನ್ನೆ ನವೆಂಬರ್ 1ನೇ ಗುರುವಾರ ಸಾಯಂಕಾಲ ಸರ್ವಾರ್ ಎಂ. ಕಾಂತರಾಜೇ ಅರಸ್, ಬಿ. ಎ., ಸಿ. ಐ. ಇ, ಯವರ ಅಧ್ಯಕ್ಷತೆಯಲ್ಲಿ ಒಂದು ಅಭಿನಂದನ ಕೂಟವನ್ನು ನಡೆಯಿಸಿದರು. ಇದಕ್ಕೆ ಬಹುಮಂದಿ ಅಧಿಕಾರಿಗಳೂ, ಅನಧಿಕಾರಿಗಳೂ, ವರ್ತಕರೇ ಮುಂತಾದವರೆಲ್ಲರೂ ದಯೆಮಾಡಿಸಿದ್ದರು. ವೀಗೆ, ಸಿತಾರ್, ಮುಂತಾದ ಕರ್ಣಾನಂದ, ನೇತ್ರಾನಂದ, ಹೃದಯಾನಂದಗಳಾದ ಪಾಶ್ಚಾತ್ಯಪ್ರದರ್ಶನಗಳಾದ ಬಳಿಕ, ರಾವ್ ಬಹದ್ದೂರ್ ಕೆ. ಚೆನ್ನಯ್ಯನವರೂ, ಮ॥ರಾ॥ ಬಸವಯ್ಯ, ಪಿ. ಎ., ಪಿ. ಎಲ್., ರವರೂ ಮುಂತಾದ ಕೆಲ ಮಹಾಶಯರು ಇಂಗ್ಲೀಷ್, ಹಿಂದುಸ್ತಾನಿ, ಕನ್ನಡ ಭಾಷೆಗಳಲ್ಲಿ ಮಾನಪತ್ರವನ್ನು ಓದಿದರು. ಈ ಭಾಷಣದಲ್ಲೆಲ್ಲ ಮುಂದುಮುವರನ್ನು ತುಳಿದು, ಹಿಂದುಳಿದವರನ್ನು ಮುಂದಕ್ಕೆ ತರಬೇಕೆಂಬ ಮನೋಗತವೇ ಹೊರಗೆಡಹಲ್ಪಟ್ಟಿತು. ಮ॥ ರಾ॥ ರೆಡ್ಡಿಯವರು ಇವರಿಗೆ ಪ್ರತ್ಯುತ್ತರವಾಗಿ ಮುಂದುವರಿದವರನ್ನು ತುಳಿಯದೆ, ಹಿಂದುಳಿದವರನ್ನು ಮುಂದಕ್ಕೆ ತರಬೇಕೆಂಬ ತಮ್ಮ ಸವಿಾಚೀನವಾದ—ಸವ್ಯಾಧಿಕರಿಗೆ ಯೋಗ್ಯವಾದ—ನಮ್ಮ ಸಂಸ್ಥಾನಕ್ಕೆ ಪ್ರತಿಸ್ಥಾಪ್ರದವಾದ ಶ್ರೀಮನ್ಮಹಾರಾಜರವರಿಗೆ ಶ್ರೀಯುಸ್ಕರವಾದ, ಪ್ರತ್ಯುತ್ತರವನ್ನು ದಯವಾಲಿಸಿದರು. ಈ ಸ್ವಾಗತ ಕಮಿಟಿಯ ಸಂಘದವರು ತಮ್ಮ ಭಾಷಣದಲ್ಲಿ ತಿಳಿಸಿದಂತೆ ಮ॥ ರಾ॥ ರೆಡ್ಡಿಯವರ ಎಂಬರ್ಟೇಮೆಂಟ್ ಕಮಿಟಿಗೆ ಚ್ಯಾಪ್ಮನರನ್ನು ಸಾಮಾಜಿಕರನ್ನಾಗಿ ಆಯ್ದುಕೊಂಡೇ ಇರಲಿಲ್ಲ. ಆಹ್ವಾನ ಪತ್ರಿಕೆಯಲ್ಲಿ ಚ್ಯಾಪ್ಮನ್‌ರವರ ಹೆಸರೇ ಇಲ್ಲಿತ್ತು. ಈ ಲೋಪವು ಮ॥ ರಾ॥ ರೆಡ್ಡಿಯವರ ಅವಗಾಹನಕ್ಕೆ ಬಂದಿರಬಹುದು. ಇದರಿಂದ ಬಾಧಕವೇನೂ ಇಲ್ಲ. ಮೆ॥ ರೆಡ್ಡಿಯವರು ಈ ಮನೋನ್ನತ ಪದವಿಯನ್ನ ಅಂಕರಿಸಿರುದು ಹಲವರಿಗೆ ಇಷ್ಟವಿಲ್ಲವೆಂದು ಈ ಅಭಿನಂದನ ಕೂಟದವರು ಎಣಿಸಿರಬಹುದು. ಲೋಕದಲ್ಲಿ ಸಮಸ್ತರಿಗೂ ಹಿತವಾದ ವಸ್ತು ದೊರೆಯುವುದೇ ಇಲ್ಲ! ಅದಮಾತ್ರವೇ ವಸ್ತುವು ನಿರ್ಗುಣವೆಂದಾಗಲೀ, ಅದನ್ನ ಸೇವಿಸಿದವರು ನಿರ್ಗುಣಿಗಳೆಂದಾಗಲೀ ಅಭಿಪ್ರಾಯಪಡುವವರು ಉಚಿತಜ್ಞರೇ? ಸಕಲರನ್ನು ಒಂದೇಸಮವಾಗಿ ಭಾವಿಸಬೇಕೆಂದು ಜಾಯಲ್ಲಿ ಹೇಳುವುದೇನು? ಉತ್ತರಕ್ಷಣದಲ್ಲಿಯೇ ಮುಂದುವರಿದವರಿಗೆ ಮುಖಮುದ್ರೆ ಮಾಡಲುಯತ್ನಿಸುವ ವೃತ್ತಾಪವರಿದುದ್ದಾಹರಣೆಯೇನು? ಮ॥ರಾ॥ ರೆಡ್ಡಿಯವರಂತಹ ದೇಶಹಿತೈಷಿಗಳಾದ ವಿಚಕ್ಷಣರಿಗೆ ಎಂಬರ್ಟೇಮೆಂಟ್ ಕೊಡುವ ಸಂರಂಭದಲ್ಲಿಯೇ ಇಂತಹ ಆಯುಕ್ತ ವರ್ತನವು ತಲೆದೋರುದುದು ನಮಗೆ ತುಂಬಾ ವ್ಯಾಕುಲವನ್ನು ಉಟುಮಾಡಿರುವುದು. ಇದಂತಿರಲಿ. ಮೆ॥ ರೆಡ್ಡಿಯವರು ಶ್ರೀಸ್ಥವದವಿಯನ್ನು ಹೊಂದಿದರೆ ಅವರಿಗೆ ಅಭಿನಂದನವನ್ನು ಒಪ್ಪಿಸುವುದು ದೇಗೆ?—ಇತೋಪ್ಯತಿಶಯವಾದ ಪದವಿಯು ತಮಗೆ ದೊರೆಯಲಿ ಎಂಬದಾಗಿಯೂ, ತಯುರಾರೋಗ್ಯೈಶ್ವರ್ಯವಿದಿಗಳು ವೃದ್ಧಿಗೊಳ್ಳಲಿ ಎಂಬದಾಗಿಯೂ, ತಮ್ಮ ಕಾರ್ಯಕ್ರಮಗಳಿಗೆ ಜಗದೀಶ್ವರನು ಸಹಾಯನೀಡಲಿ ಎಂಬದಾಗಿಯೂ—ಪರಸ್ಪರ ತಮ್ಮ ಸಂತೋಷವನ್ನು ಸೂಚಿಸುವುದಲ್ಲವೆ? ಅಭಿನಂದನಕೂಟದ ನಾಮಾಜಿಕರ ಲಕ್ಷಣ? ಇದೇ ಮುಖ್ಯ ಕರ್ತವ್ಯವಲ್ಲವೆ? ನೀವು ಹಿಂದುಳಿದವರನ್ನು ಮುಂದೆ ತನ್ನಿರಿ! ನಾವು ಎಂಬರ್ಟೇಮೆಂಟ್ ಕೊಟ್ಟೆವು! ನೀವು ಮುಂದಿದವರನ್ನು ತುಳಿಯಿರಿ!!! ನಾವು ಎಂಟರ್‌ಟೇಮೆಂಟ್ ಕೊಟ್ಟೆವು! ನೀವು ನಮ್ಮಿಷ್ಟದಂತೆ ಮಾಡಿರಿ! ಮುಂದೆ ಇನ್ನು ಸಹಸ್ರಾಧಿಕ ಎಂಟರ್‌ಟೇಮೆಂಟ್ ಕೊಡಿಸುವೆವು!!! ಎಂದು ಘಂಟಾಘೋಷವಾಗಿ ಕೂಗಿಕೊಳ್ಳುವುದು ಅಸೂಯಾಧ್ಯೋತವಲ್ಲವೆ? ಈ ಎಂಟರ್‌ಟೇಮೆಂಟನ್ನು ಮ॥ ರಾ॥ ರೆಡ್ಡಿಯವರಿಗೆ ಮುಂದುವರಿದವರನ್ನು ತುಳಿಸುವ ಕಾರ್ಯಕ್ಕೆ ಪ್ರೇರೇಪಣೆ

"ಫರಕಮುಂಡೆಪ್ಪ, ಇಂಗ್ಲೆಂಡು ಸೇರದ ರಾಜಕೀಯ ಪ್ರಶ್ನೆಕ್ಕಾಗಿ ಕೂಡುವ ಪಾರ್ಲಿಕಮೆಂಟ್ಸಭೆಯ ೨೦ ಕೋಟಿ ರೂಪಾಯಿಗಳೆಂದು ಹೇಳಿದರೆ ಅದು ಅಳತೆಗೆಟ್ಟ ಅಂದಾಜಾಗಿರುವುದಿಲ್ಲವೆಂದು ನಾನು ದೃಢವಾಗಿ ಹೇಳುವವನಾಗಿದ್ದೇನೆ. ಉಳಿದ ಹತ್ತುಕೋಟಿ ರೂಪಾಯಿಗಳು ಇಂಗ್ಲೆಂಡಿನಿಂದ ಸಂಪೂರ್ಣವಾಗಿ ಹೊರಗಿನ ಕೆಲಸಕ್ಕಾಗಿ ಹೋಗುತ್ತದೆ. ಯಾವ ಬೇರೆಯೇ ಆಗಿದ್ದರೂ ಸಂಪದ್ಭಲ್ಲಾ ಎಸ್ಟೆಜು-ವಲ್ಲಾ ಎಂದಾದರೂ ಕೂಡ ಇಂತಹ ಕೆಲಸಗಳಿಂದ ಜೇಕುಸಿಕೊಳ್ಳುವುದು ಇವುಗಳಿಂದ ಸುಲಭವಾಗುವ ಫಲಿತಾಂಶಕ್ಕೆ ಸಂದೆಸೆ, ನಮ್ಮ ಕೈಗಾರಿಕೆಗಳನ್ನು ಪುನರ್ಜೀವನಗೊಳಿಸುವ ಮುಖಾಂತರ ನಮಗೆ ಉಳಿತಾಯವನ್ನು ಮೂಲಧನವನ್ನು ಕೂಡ ಬಹಳ ಸುಲಭವು ಒಳ್ಳೆ ಪ್ರಯೋಜನವಾಗಿದೆ."

ಇದು, ನನ್ನ ಪ್ರಿಯ ಓದುಗರೆ, ಬಹುಮಂದಿ ಇದರು ಇತ್ತೀಚಿನ ಮುಂದೆ ಬ್ಯಕ್ತರಾಗುವುದಕ್ಕೆ ಇಂಡಿಯಾ ಮಂತ್ರಿಯವರಿಗಿರುವ ಕರ್ತವ್ಯವಿದೆಯೆಂದು ಮತ್ತು ಎಷ್ಟರಿಗೆ ಜಕ್ಕಾಧಿಪತ್ಯಕ್ಕೆ ಇವನ್ನು ಬಹಳ ಏಂಟಿಗವಾಗಿ ಪೂರೈಸಬಹುದೆಂದು ದನಿಯ ಚಿಹ್ನಾಗಿ ಬೆಳಸಿಯುತ್ತಿದೆ.

ಜಕ್ಕಾಧಿಪತ್ಯದ ದಿರಾಜಕೀಯತಜ್ಞರಿಲಾದ ಸಂಸ್ಟ್ರಿಮ್ಯ (Statesman) ನ್ನು ಕೇಳಬಹುದಾದುದಿದೊಂದು ಸ್ಪಷ್ಟ--ಮಂದೂಸೇನೆಯರ ಕ್ಷೇಮವಂತಿನೆಯು ಯಾವಾಗಲಾದರು ಇಂಗ್ಲೆಂಡಿನ ಭದ್ರತೆಯ ಬಗ್ಗೆಯ ಕಾಂಕ್ಷೆಯ ಅಭ್ಯುದಯಗಳಿಗಿಂತ ಹೆಚ್ಚಿನ ಪ್ರಾಮುಖ್ಯವನ್ನು ಪಡೆಯಬೇಕೆ? ಇನ್ನು ಮುಂದಕ್ಕೆ ಜಕ್ಕಾಧಿಪತ್ಯಕ್ಕೆ ಏನು ಸಲಹೆಯನ್ನು ಕೊಡಬೇಕು ಇರುವ ಸೊಂಟಿಯೆಯು ಈ ಪ್ರಶ್ನೆಯು ಉತ್ತರದಲ್ಲಿ ಆಶ್ರಯಿಸಿರುವುದು. ತದುಮುಂದ ಜಕ್ಕಾಧಿಪತ್ಯದ ಕ್ಷೇಮವಂತಿಕೆಯೆಲ್ಲರೂ ಇವಕ್ಕೆ ಸೂದಲು ಗಮನಕೊಡಬೇಕು.

"ಪ್ಲೈಮ್ಸ್" ಎಂಬ ಪತ್ರಿಕೆಯು, ಸಮ್ಮಿಂಧಕ್ಷನೆಯ ಜನ್ಮಿಸಿತ ಪತ್ರಿಕೆಯ ಎಂದು ಘೋಷಿಸಿದ್ದು, ಹಿಂದೂಸ್ಥಾನವು ಯುದ್ಧದ ನೆಕ್ಕಾಕ್ಕಾಗಿ ಹಿಂದು ರೂಪಾಯಿಯನ್ನು ಸಹಾಯಮಾಡಿಲ್ಲವೆಂದು ಅಲ್ಲಿ ಯಲ್ಲಿದೆ ಎಬಿಬ್ಬಿಸಿತು. ಆದೇ "ಪ್ಲೈಮ್ಸ್" ಪತ್ರಿಕೆಯು; ಎರಡೇ ಎರಡು ದಿವಸಗಳ ಹಿಂದೆ ಹಿಂದೂದೇಶವು 1907 ರಲ್ಲಿ ಜಕ್ಕಾಧಿಪತ್ಯದ ಸಹಾಯಕ್ಕಾಗಿ 1,50,00,000 ರೂಪಾಯಿಗಳನ್ನು ಕೊಟ್ಟಿರುವುದೆಂದು ಬರೆದಿರುವುದು. ಎಲ್ಲಾ ಪ್ರತಿಂತ್ರರಾಜ್ಯಗಳು ಕೂಡಿದರೂ ಸಹ ಇಷ್ಟು ಹಣವನ್ನು ಕೊಡಲಾರವೆಂದು ಅಭಿಪ್ರಾಯಪಟ್ಟಿದೆ. ಇಂತಿದ್ದರೂ ಜಕ್ಕಾಧಿಪತ್ಯದ ಸಹಾಯದ ನ್ಯಾಷನಲ್ ಪತ್ರಿಕೆಯು, ಫರಕಮುಂಡ ಪೆಪರುಕೂಡ ಇನ್ನಾವಲ್ಲಿಯೂ ಇಲ್ಲ!

[ಸಲಿಸ]

ಜಂಟಿಯರು ಮನೆ.

[*All Rights Reserved.*]

(ಮುಂದೆ ಸಂಚಿಕೆಯಿಂದ ಮುಂದಕ್ಕೆ ಸಾಗಿದುದು)

ಗೌಳಗ—ಒಳ್ಳೆಯ, ಅದು ಸುಬಗುದು. ನಮ್ಮ ಗೌಳಗ ಪಲ್ಲಿಯಿಂದ ಹೆಂಗಸರು ನದಿಗೆ ಬಂದು ನೀರು ತೆಗೆದುಕೊಂಡು ಹೋಗುತ್ತಾರೆ; ಆದರೆ ಆಗ ಪ್ರತಿಯೊಬ್ಬನೂ ಕೆಂಪು ಸೀರೆಯನ್ನುಟ್ಟಿರುವುದಿಲ್ಲ. ಅಲ್ಲದೆ, ಮಗುವೆ ನೀನು ನಿಜವಾಗಿಯೂ ಈ ಕೆಲವನ್ನೇ ಕಾಲಾಯಿಕ್ಕಾಗಿ ಅಲ್ಲಿಗೆ ಹೋಗಬೇಕೆಂದು ನಿನಗೆ ಅನುಜ್ಞೆ—ನಿಜವಾಗಿಯೂ, ಗೌಳಗನೇ! ಎಂದಿಗೂ ಅಲ್ಲಿ ಹೋಗಿ ಬರೇ ನಿಲ್ಲ. ಆದರೆ ಜೊದಲಿನಿಂದ ಪೈಪ್ಗನು ನನ್ನನ್ನು ಹೊರಗೆ ಕಳುಹಿಸಿದನು ನೀನು ಹೋಗುತ್ತಾ ನನ್ನನ್ನು ನಿಮ್ಮ ಹಳ್ಳಿಗೆ ಕರೆದುಕೊಂಡುಹೋಗು.

ಗೌಳಗ—ಸಾಕು ತಲೆಹೊಯ್ದರು ನೀಗುವೆ, ಸಂತೋಷದಿಂದ.

[ಸಲಿಸ]

ಚಂದ್ರಕಾಂತ ಪ್ರೈಲ.

1 ನೆ ಎಡುಗಡೆ ಪೂರ್ಣಚಂದ್ರನು ಭರಿಸಾಗುವುದು, ಪಟಾಪಟಿಯಿಂದ ಮೇಘ ಕಂಬಂದಾದ ಪಾತ್ರಗಳು, ಮತ್ತಿಳ ಸಮೀಪದ ಪ್ರದೇ, ಮುಂತಾದುವುಗಳು ಗುಣವು

ಕ್ರ ಕ್ರಯ ಸೀಸೆ 1ಕ್ಕೆ 1 ಆ

ನದು ಲಕ್ಷಸು-ಇಂದ್ರಕಾಂತ ಪಿಪ್ಪೂ, ಸೈಸೂರು.

ಸ್ತ್ರೀಯರಿಗ ಕೇಳಬೇಡಿರಣಮೇ ಬೇಡೇ!!

ಕಾವಿಸಿಂಯ ಪ್ರೈಲ. (ರಿಜಿಸ್ಟರ್ಡ್.)

ಈ ಪ್ರೈಲಿನ ಕಾವಿಸಿಂಯ ಪ್ರಾಣವು ಸುತ್ತಾ ಅಮೂಲ್ಯವಾದ ಪದಾರ್ಥಗಳಿಂದವಾದ ಸಿದ್ಧರಿಸುತ್ತದೆ. ಕೂಡಲೆ ಉಪಯೋಗಿಸುವವರಿಗೆ ಆದನ್ನುಂಟುಮಾಡುತ್ತದೆ ಶರೀರದಲ್ಲಿ ಹುಣ್ಣು, ಬಂದಂತೆ ಕಾಣುವ ಸಣ್ಣ ಕೆಂಪಾಂಶವು ಸ್ವಲ್ಪ ಕೂಡಾ ಉಳಿಯದಂತೆ ಮಾಡಿಬಿಡುತ್ತದೆ ಮತ್ತು ಎಲೆಕೂದಲುಗಳನ್ನೂ ಕೂಡ ಸಮಾಪ್ತಿ ಕಳ್ಳಿಸುತ್ತದೆ.

ಈ ತೈಲವು ಮುಖದ ಉತ್ತಮ ಬಣ್ಣವನ್ನುಂಟುಮಾಡುವ ಬಗ್ಗೆ ಹೇಳುವುದು ಬೇಕಾಗಿಲ್ಲ. ಬಿಳಿಯ ಬಣ್ಣವನ್ನು ಉಳಿಸಿಕೊಳ್ಳಲು ಬಯಸುವವರಿಗೆ ಇದು ಅತ್ಯುತ್ತಮವಾದ ಸಾಧನವಾಗಿದೆಯೆಂದು ಹೇಳಬಹುದು. ಬಿಸಿಲಿನ ಝಳದಿಂದ ಕಪ್ಪಾಗಿರುವ ಮುಖವನ್ನು ಇದು ಬಹಳ ಬೇಗನೆ ಬಿಳಿಯಾಗಿಸುತ್ತದೆ. ಇದಲ್ಲದೆ ಇದು ಮಚ್ಚೆಗಳಿಗೂ, ಎಲ್ಲರಿಗೂ ಬರುವ ಕ್ರಿಮಿಂಜಾತಕಾರಿಗಳಿಗೂ ಸಹ ಇದು ಮಹೌಷಧವಾಗಿದೆ. ಇದಲ್ಲದೆ ಇದು ಮಹೌಲ್ಬಣವನ್ನುಂಟುಮಾಡುವ ಶಾಂತಿಯ ಸುವಾಸನೆಯನ್ನು ಹೊಂದಿರುತ್ತದೆ. ಇದು ಶೀತ್ಕಾಲಕ್ಕೆ ಸಲ್ಲದಾಗಿ ಬೆಳಿಗ್ಗೆ ಮತ್ತು ಮಧ್ಯಾಹ್ನದಲ್ಲಿ ಬಿಡುವು ದಯವಿಟ್ಟಾಗಿದೆ. ಸಮುದಾಯವನ್ನು ಪಡೆಕ್ಕೆ ಕಳುಹಿಸಿಕೊಳ್ಳಬಹುದು. ಇದನ್ನು ಒಮ್ಮಾನದ ಕೆಲಸಕ್ಕೆ ಉಪಯೋಗಿಸಿಕೊಳ್ಳಬಹುದು.

ಎಲ್ಲೆಲ್ಲಿಯೂ ಮಾರಲ್ಪಡುತ್ತದೆ

ಕ್ರಯ 1 ಸೀಸೆಗೆ 1-0-0; ೫ ಕ್ಕೆ ೫-10-0. ಅ. ಪಿ. ಎಂಗಾರ್ ಬೇರೆ.

ಅತ್ಯಂತ ಆಧುನಿಕ ಶೈಲಿಯ ಸುವಾಸನೆಯನ್ನು ಹೊಂದಿರುತ್ತದೆ!

ಲೆಬೆರೊ ದಿಲ್ಲೆ ಬಡಾರಾ. (ರಿಜಿಸ್ಟರ್ಡ್)

ಸುವಾಸನೆ ಪೌಡರ್ಗಳಲ್ಲಿ ಅತ್ಯುತ್ತಮವಾದುದು. ಇದು ಅನೇಕ ವಿಧವಾದ ಸುಗಂಧಗಳನ್ನು ಮಿಶ್ರಣಮಾಡಿರುವುದು. ಇದು ಎಲ್ಲಾ ವಿಧವಾದ ಮಾದಕ ಪದಾರ್ಥಗಳಿಂದಲೂ ಮೀರಿದ ಗಾಢಿಯನ್ನುಂಟುಮಾಡುತ್ತದೆ. ಎಲ್ಲರೂ ಸುಲಭವಾಗಿ ಉಪಯೋಗಿಸಬಹುದು ಬಾಯಿ ಮಲ್ಲಿಗೆಯಂತೆ ಮೊದಲಾದವುಗಳಂತೆ ತೀವ್ರವಾದ ಪರಿಮಳ ಇಲ್ಲದೆ ಆರಾಧ್ಯವಾದ ಸುವಾಸನೆಯನ್ನು ಸೂಚಿಸುತ್ತದೆ. ಇದರ ಸುವಾಸನೆಯು ಸಂಜೆಯ ಸಮಯದಲ್ಲಿ ಇದು ಕೈಯಾರೆಯೂ ಸಮಾನವಲ್ಲ.

ಕ್ರಯ 1 ಡ್ರಾಮಿನ ಸೀಸೆ 1ಕ್ಕೆ 12 ಆಣೆ; ೫ ಡ್ರಾಮಿನ ೫ ಸೀಸೆ 1ಕ್ಕೆ 1-4-0; 1 ಡ್ರಾಮಿನ ಶಿಂಶೆ 1ಕ್ಕೆ ೫ ರೂಪಾಯಿ.

ವಿ. ಪಿ. ಮೂಲಕ 0—4—0 ಹೆಚ್ಚು

ಪ್ರತಿಷ್ಟೆಗಳಲ್ಲಿಯೂ ಪ್ರಸಿದ್ಧವಾದ ಪ್ರತಿ ಅಂಗಡಿಗಳಲ್ಲಿಯೂ ಸಿಕ್ಕುತ್ತದೆ. ಹೊದಲು ಕೊಳ್ಳುವಾಗ ಕೀರ್ತಿಯೇಲಾ ಮತ್ತು ವಾಸನೆ ಕಾರ್ಖಾನೆಯೇ ಲೆಬೆರೊ ದಿಲ್ಲೆ ಬಡಾರಾ-ಎಂದು ಬರೆಯುವುದಕ್ಕೆ ನೋಟ ಕೊಳ್ಳಿರಿ

[1—1]

ಸೋಲ್ ಏಜೆಂಟರು:—

ಆಂಗ್ಲೊ ಇಂಡಿಯನ್ ಡ್ರಗ್ ಮತ್ತು ಕೆಮಿಕಲ್ ಕಂಪೆನಿ,

No 186, ಬ್ರಾಡ್ವೇ, ಬೆಂಗಳೂರು.

Printed and Published by Mr. B. V. Narasimha Iyengar, at the Royal Press, Mysore, for the Editor & Proprietor.

Regd. No. M. 1299.

ಬಿಡಿ ಪ್ರತಿ 3 ಪೈ.

SATYAVADI

ರಾಜಕೀಯ, ಸಾಮಾಜಿಕ, ಮತವಿಚಾರ, ಭಾಷಾಭಿವೃದ್ಧಿ ಮುಂತಾದ ವಿಷಯಗಳನ್ನೊಳಗೊಂಡಿರುವ

"ಸತ್ಯವಾದಿ" ವಾರಪತ್ರಿಕೆ

ವಾರ್ಷಿಕ ಚಂದಾ 0—8—0] ಪ್ರತಿ ಮಂಗಳವಾರ ಪ್ರಕಟಿಸಲ್ಪಡುವುದು. [ಅಂಚೆಸಹ ಸೇರು 1—6—0

ಸಂಪುಟ I ಮಂಗಳವಾರ 13 ನೇ ನವಂಬರ್, 1917 ಸಂಚಿಕೆ 9

ರಕ್ಷಿತೃಸಾಹಾಯ್ಯಸ್ತುಕುರ್ನ್ನದೇವಾ |
ಸಧೇಜಿಜೇಷೇಮವಿಸೇಣಧೀತಂ ||
ಸುಧಾಂವಿನಾನಪ್ರಯುಯುಷ್ಮದಾಮಂ |
ನಸ್ತಿಕ್ತಿತಾಧ್ವಾದ್ವಿರಮಂತಿಯೋಕಾಃ ||

ಸ್ವರಾಜ್ಯ.

ಸ್ವರಾಜ್ಯವೆಂದರೆ —ತಮ್ಮ ಸರಕಾರದ ಕಾರ್ಯಗಳನ್ನು ನಡೆಯಿಸುವ ಅಧಿಕಾರ ರಕ್ತ ಎಂದಲ್ಲದೆ ಮತ್ತಾವ ಅರ್ಥವೂ ಅಲ್ಲ. ಕೆಲವು ಅತುರಸ್ವಭಾವದ ಜನರು, ಭೈಸಿಯಿಂದಲೋ ಅಥವ ದುಷ್ಪ್ರಕಟನದಿಂದಲೋ ನಿಷೇಧಿಸುವಂತೆ ಬ್ರಿಟೀಷರನ್ನು ಈ ನೇರದಿಂದಲೇ ಹೊರಗೆಡಹಬೇಕೆಂಬ ಅರ್ಥವಲ್ಲ. ಬ್ರಿಟೀಷ ಅಧಿಕಾರಿಗಳನ್ನು ತೆಗೆದು, ಅವರ ಕಾರ್ಯಕ್ಕೆ ಹಿಂದೂದೇಶೀಯರನ್ನು ನೇಮಿಸಬೇಕೆಂದೂ ಅರ್ಥವಲ್ಲ. ಆಂಗ್ಲೇಯರು ಇಲ್ಲಿರಲಿ ಇಲ್ಲದಿರಲಿ; ಮತ್ತು ಸಾಂಕೇತಪ್ರಭುತ್ವವು ಭಾರತೀಯರದೋ ಅಥವ ಆಂಗ್ಲೇಯರದೋ ಅದು ಹೇಗಾದರೂ ಆಗಲಿ; ಅದು, ಇನ್ನು ಮುಂದೆ ರಾಜ್ಯಭಾರ ಕ್ರಮವೂ ಮತ್ತು ಅಧಿಕಾರವೂ ದೇಶೀಯರ ಅನುಕೂಲದಂತೆಯೂ, ಅಭಿಪ್ರಾಯದಾತೆಯೂ ಸ್ಥಿರಪಡಿಸಲ್ಪಡಬೇಕೆಂದು ಅರ್ಥವಾಗುತ್ತದೆ.

ದೀಪಾವಳಿ.

ಕರದೊಳ್ಪಾಟಿಪಕಾರ್ತಿಕಂ ಒಮಿರಿಲ್ಲಂ ಪೋಪದುಂ ಪೊಂದುಂ |
ವರಜಾಮಾತೃಗಳೊಳ್ಸು ಬಂದು ಬಿಸಿಲಲ್ಕಾವಂವಿರಂ ನೇರುತುಂ ||
ಪ್ರರದೊಳ್ಕಂಜಿವಿಗೇಯಮುಂ ಬಿಳಗುತಂರಾರಾಜಿಸಲ್ಕೀವಗ |
ಳ್ಕಿಕೆಗುಂ ಸಂಜೆಸೌಖ್ಯನುಂ ಕೊಡುತಿತಾಂ ದೀಪಾವಳೀವಾನ್ಯದೇ ||
ಪಿಂಗಲಬಿಸದೆ ಕಾರ್ತಿಕ |
ಮಂಗಳಕರವಪ ಗುರುಜಿಂತ ವಾಡ್ಯಮಿದಿನದೊಳ್ ||
ಅಂಗಜನರೆ ತಿಸೆಸಲಿದುಶು |
ಭಂಗಳಕೊಸಗುತಲಿ ಪೊರಿಗೀಜಗಮಂ ನಿರಕಂ ||

ವಿಲಕ್ಷಣ ವಾಗ್ಧುರಿಯ ವಿಡಂಬನೆ.

ಕಳೆದ ತಾ|| ೧೦ನೆಯ ಭಾನುವಾರದ "ಮೈಸೂರ್ ಸ್ಟಾರ್" ಪತ್ರಿಕೆಯಲ್ಲಿ, "ಮ|| ಸಿ. ರಾಮಲಿಂಗಂಚೆಟ್ಟಿ, ಎಂ.ಎ., ಯವರಿಗೆ ರಾಜಧಾನಿಯ ಮಹಾಜನರ ಸತ್ಕಾರ" ಎಂಬ ಶಿರೋಲೇಖನದಲ್ಲಿನ ವಿಷಯಗಳನ್ನು ಓದಿ ನೋಡಿದೆವು. ಅವುಗಳಲ್ಲಿ ಹಲವು ಸಮಾಲೋಚನಾರ್ಹಗಳಾಗಿವೆ. ಇವುಗಳ ವಿಷಯದಲ್ಲಿ ಸ್ವಲ್ಪ ಸಮಾಲೋಚಿಸೋಣ.

ಮ|| ರಾಮಲಿಂಗಂಚೆಟ್ಟಿಯವರ ಭಾಷಣದಲ್ಲಿ—"ಬೇಕೆಂತಲೇ ತೊಡಕುಗಳನ್ನೆಬ್ಬಿಸುತ್ತಲೂ, ಹಿಂದಕ್ಕೆ ಜಗ್ಗುತ್ತಲೂ ಬರುವರು." ಇದರ ಅಭಿಪ್ರಾಯವೇನು? ತೊಡಕುಗಳನ್ನೆಬ್ಬಿಸುವವರೂ, ಜಗ್ಗುವವರೂ ಯಾರು? ಯಾವುದರಲ್ಲಿ ತೊಡಕುಗಳನ್ನೆಬ್ಬಿಸುವರೂ, ಜಗ್ಗುವರೂ ಸೂಚಿಸುವರು? ಮೈಸೂರು ಶಾಸನಸಭೆಯ ನಿರ್ವಾಹಕ್ರಮದಲ್ಲಿಯೋ? ಅಥವ ಪ್ರಜಾಸಮುದ್ಧಾರಕ ಕಾರ್ಯನಿರ್ವಾಹಕರಲ್ಲಿಯೋ? ಹಾಗೆ ಮಾಡತಕ್ಕವರು, ಹಿಂದುಳಿದ ಜನವರ್ಗದವರೇ? ಮುಂದುವರಿದವರೇ? ಮುಂದುವರಿದವರೆನ್ನುವುದಾದರೆ, ಹೇಗೆ? ಅದು ಸಂಭವನೆ? ಮುಂದುವರಿದವರು, ಸ್ವಜಾತಿಸಮುದ್ಧಾರಕ ಕಾರ್ಯನಿರ್ವಾಹಕರಲ್ಲಿ ತೊಡಕುಗಳನ್ನೆಬ್ಬಿಸುತ್ತಲೂ; ಹಿಂದಕ್ಕೆ ಜಗ್ಗುತ್ತಲೂ ಬರುವರು; ಎಂದು ಹೇಳಬಹುದೆ? ಅಥವ ಹಿಂದುಳಿದವರಿಗೆ ವಿರೋಧಿಸುವುದೆಂದರೆ ಒಪ್ಪಬಹುದೆ? ಇದೇನು ವಿಲಕ್ಷಣವಾಗ್ವರಿಯಲ್ಲವೆ!

"ಸಾಫ್ಟ್.....ಮಹಾಜನರ ಪೈಸರಿನಲ್ಲಿ ಕೆಲವರು ಅಕ್ರೈಸ್ಸು ಕೊಡುವುದಾದರೆ ಯಾರ ಸಮ್ಮತಿಯು ಕೊಡಲ್ಪಟ್ಟಿಲ್ಲವೋ ಅವರೆಲ್ಲರೂ ಸದರಿ ಅಕ್ರೈಸ್ ಸಭೆಯಲ್ಲಿ ಈ ಅಕ್ರೈಸ್ಸಿಗೆ ನಾವು ಸಮ್ಮತಿಸಲಿಲ್ಲ ನೆಂದು ತೋರಬೇಕೆಂದಿರುವರು ಎಂಬುದಾಗಿಯೂ, ಎಲ್ಲಾ ಪ್ರಜಾನಿವಾಸಿಗಳ ಹೆಸರಿನಲ್ಲಿಯೂ ಈ ಎಂಟರ್‌ಟೈನ್‌ಮೆಂಟು ಕೊಡಲ್ಪಟ್ಟಿರೆ ಅದು ನಿಜವಾಗುವುದಿಲ್ಲ ಎಂಬುದಾಗಿಯೂ, ಬರೆದುಕೊಂಡಿರುವ ಬೇಕಾದು ಮುಖ್ಯವಾಗಿ ಈ ಸಭೆಗೆ ಬಂದಿದ್ದರೆ, ಅವನ ಬರುವುದಕ್ಕೆ ಮುಖವಿಲ್ಲದಿದ್ದರೆ ಬೇರಾಂತರವನ್ನಾದರೂ ಧರಿಸಿ ಬಂದು ನೋಡಿದ್ದರೆ ಬಹಳ ಚೆನ್ನಾಗಿದ್ದಿತು. ಏಕೆಂದರೆ ಅನ್ನು ಮೇಲಾದರೂ ಇಂತಹ ಕುಪಕಪ್ರಯತ್ನಗಳಿಗೆ ಕೈವಾಕಬಾರದೆಂಬ ಬುದ್ಧಿಯು ಅವರಿಗೆ ಹುಟ್ಟುತ್ತಿದ್ದಿತು." ಇದನ್ನು ಒರೆದ ಲೇಖಕರು ಬಂದಿದ್ದರೆ ವಿನಾಗುತ್ತಿದ್ದಿತು? ಅವರು ಕುಪಕಪ್ರಯತ್ನಗಳಿಗೆ ಕೈವಾಕಿದಂತಾದುದು ಹೇಗೆ? ಅಸಂಖ್ಯಾಕರಾದ ಮಹಾಜನರ ಪೈಸರಿನಲ್ಲಿ ಕೆಲವರು ಮಾತ್ರ ಅಕ್ರೈಸ್ಸು ಕೊಡುವುದಾದರೆ ಸರ್ವರೂ ಒಪ್ಪಿದರೆಂದೇ ಅರ್ಥವಾಗುವುದು ಹೇಗೆ? ಮಹಾಜನರ ಪೈಸರಿನಲ್ಲಿ ಕೆಲವರು ಮಾತ್ರ ಅಕ್ರೈಸ್ಸು ಕೊಡುವುದರಿಂದ ಸಮ್ಮತವಿಲ್ಲದವರು ಸದರಿ ಸಭೆಯಲ್ಲಿ ಅಸಮ್ಮತಿಯನ್ನು ಸೂಚಿಸುವುದು ಕುಹಕವೆ? ಎಲ್ಲಾ ಪ್ರಜಾನಿವಾಸಿಗಳ ಹೆಸರಿನಲ್ಲಿಯೂ ಕೆಲವರು ಮಾತ್ರ ಎಂಟರ್‌ಟೈನ್‌ಮೆಂಟ್ ಕೊಟ್ಟರೆ ಎಲ್ಲರೂ ಕೊಟ್ಟಂತಾಯಿತೆ? ಎಲ್ಲಾ ಪ್ರಜಾನಿವಾಸಿಗಳಿಗೂ ಅಪ್ಪಾನಪತ್ರಿಕೆಗಳು ಹೋಗುವುದೇ? ಸತ್ಕಾರ ಸಾಂಘಿಕರು, ಅವರಲ್ಲಿ ಪ್ರಮುಖರನ್ನು ಕಮಿಟಿಯ ನೇಮಕರಾಗಿ ಆಯ್ದುಕೊಂಡಿದ್ದರೆ? ಕರೆಸಿಕೊಳ್ಳದೆ, ಒಯ್ಯದಕ್ಕೆ ಮುಸುಬ್ಬಿಲ್ಲದೆ ಹೆಸ್ಸಿಯಾದೆ? ವೇಸಾಂತರ ಧರಿಸಿ ಬರಬೇಕಾದುದು ಕಸ್ಯಚೇನು? ಅಲ್ಲ ಭೋಕ, ನಿಶಾಚಾರಿಗಳಂತಹ ಸ್ವಭಾವದವರಿರಲಿಲ್ಲವಲ್ಲ! "ಅಸೂಯಾಕ್ರಾಂತನಿಂದ ಇದುವರೆಗೆ ಕೆಲವು ಮಾಡುತ್ತಿದ್ದ ಕ್ಷುಲ್ಲಕಪ್ರಯತ್ನಗಳಿಗೂ ಕುಹಕಲೇಖನಗಳಿಗೂ

ಅನುಮಂಜನ ಪ್ರಲಂಪಗಳಿಗೂ ಇಲ್ಲಿಂದಾಜಿಗೆ ಉತ್ತರಕ್ರಿಯೆಯಾಗಬಹುದೆಂದು ನೀಕ್ಷಿಸುತ್ತೇನೆ" ಮೇಲೆ ಕಂಡ ವಿಷಯಗಳನ್ನು ಪರಿಶೀಲಿಸಿದರೆ ಈ ವಾಕ್ಯವು ಈ ಲೇಖಕರ ಗುಣಗಣಗಳನ್ನು ಪ್ರದರ್ಶಿಸುವುದಲ್ಲದೆ, ತಮ್ಮ ಸ್ವಭಾವವನ್ನು ಹೊರಗೆಡಹುವುದೆಂದೂ; ಇನ್ನೂ ಹಲವು ವಿಷಯಗಳು ವಿಮರ್ಶೆಗೆ ಸಿಕ್ಕಬಹುದಾದರೂ ಇಷ್ಟಕ್ಕೇ ನಿಲ್ಲಿಸಿ; ಮುಂದೆಯಾದರೂ ತಮ್ಮ ವಿಲಕ್ಷಣಾಭಿಪ್ರಾಯವನ್ನು ತೋರಿಸದೆ ಸರ್ವಸಮದರ್ಶಿಗಳಾಗಿ ಸತ್ಯ ಮಾರ್ಗದಲ್ಲಿ ನಡೆವೆನೆಂದು ಹಾರೈಸುತ್ತಾ ಲೇಖನವನ್ನು ಅಷ್ಟಕ್ಕೇ ವಿರಮಿಸುವೆವು.

ವೃತ್ತಾಂತ ಸಂಗ್ರಹ.

ಬೆಸ್ಸೂರು ಮತ್ತು ಜಿಂಗಳಾದಿನಲ್ಲಿ 7 ನರ್ಸರಿಯಿಂದ 11 ವರ್ಷದೊಳಗಿನ ಇರುವ ಜಾಲಕಿಯರೆಲ್ಲರಿಗೂ ಬಲಾತ್ಕಾರ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪಡಾಯಿಸಬೇಕೆಂಬ ಕಾನೂನು 1-11-13 ನೇ ಇವರಿ ಜುಲೈ ತಿಂಗಳಿಂದ ಜಾರಿಗೆ ತರಲ್ಪಡುವುದ.

ಕ್ರೈಸ್ತು ಸಂಡಾಲಿಂದರು ಜಿಲ್ಲೆಯಲ್ಲಿ ನಡೆಯುವ ಸಂಸ್ಥಾನಿಕರ ವಹಾ ನಷ್ಟಗೆ ನ್ಯೂಸರಾ, ಪ್ರತಿನಿಧಿಗಳಾಗಿ ದಯಮಾಡಿಸುತ್ತಾರೆ.

ರಾವ್ ಬಹದ್ದೂರ್ ಎಂ. ಎ. ರಾಮರಾಯರವರು ಜನವರಿ ತಿಂಗಳಿಂದ 3 ತಿಂಗಳು ರಜೆ ತೊಂದಿರುತ್ತಾರೆ.

ಮುಂದಲ ತಿಂಗಳು ಒಂದನೇ ತಾರೀಖಿನಿಂದ ಬಂದೂ ಸ್ಪೆಷಲ್ ಸಬ್ ರಿಜಿಸ್ಟ್ರಾರ್ ಆಫೀಸ್ ಮುಖರದಲ್ಲಿ ತೆಗೆಯಲ್ಪಡುವುದು.

ನಮ್ಮ ಸಂಸ್ಥಾನದ ಜೀಫ್ ಇಂಜನೀಯರಾದ ಮ|| ಕಪೂರ್ ಎಕ್ಸಿಕ್ಯೂಟಿವ್ ಎಂಜನೀಯರರು ವಿಶೇಷಕಾರಣವಿಂದಲೊ ರಜ್ಜೆ ದೊಜ್ಜೆದಯಿಗೆ ರಾಜೆನಾಮೆ ಕೊಟ್ಟಿರುವರೆಂಬುವಾಗಿಯೂ, ಸರಕಾರದ ಆಶ್ರಯಕ್ಕೆ ಮೀರಿದ್ದೆ ಸುತ್ತಿರ ನಡೆಂದೂ ತಿಳಿದು ಬಂದಿದೆ.

ಭವಿಷ್ಯಾನಂದ ಸ್ವೀಟ್ಸ್ ಸೆಕ್ರೆಟರಿಗಳಾದ ಮ್ಯಾ ಇ ಎಸ್. ಪಾಟೆಗ್ ರವರು ೧ ನೇ ತಾರೀಖು ಲಂಚಸ್ಸಿನಿಂದ ಜೊಂಬಯಿಗೆ ದಯಮಾಡಿಸಿ, ಅಲ್ಲಿಂದ ನೆಲ್ಲಿಗೆ ಹೋದರು. ಅಲ್ಲ ವೈದರಾಯಿಯವರೊಡನೆ ಕೆಲವು ದಿನಗಳು ಇದ್ದು, ಸುತರ ಮುಂಬಯಿಗೆ ಬರುವರೆಂದು ತಿಳಿದು ಬರುತ್ತದೆ.

ಬರ್ಮಾದೇಶದ ವಿಷಯದಲ್ಲಿ ಒಂದು ಹೊಸ ಸಮಾಚಾರವು ತಿಳಿದು ಬಂದಿದೆ. ಅದೇನೆಂದರೆ—ಮುಂಬೆ ಬರುವ ಮ|| ಮಾಂಟೆಗೊರವರಿಗೆ ನಿಶ್ಚಿತವಾಗಿ ಯನ್ನು ಹಾಜರುಮಾಡಬೇಕೆಂದು ಇಷ್ಟವುಳ್ಳವರಾಗಿ ಸಹಿಸೋಸಗ "ಪ್ರೋನ್ಸ" ಗೆ ಕಳುಹಿಸಿದ್ದರು. ಒಬ್ಬ ಪೋಲೀಸ್ ಇನಾಸ್ಪೆಕ್ಟರು ಆ ಖೈದಿಯನ್ನು ಪತ್ರಗಳನ್ನು ಕಟ್ಟುಕೊಂಡು, ರಂಜನನ್ನು ತೆಗೆದುಕೊಳ್ಳು ವುದಕ್ಕೆಮ್ಮಿನುಗ ಕಛೇರಿಯವರಿಗಿದ್ದ ಜಾಗವನ್ನು ಮುಂದಿನ ಆಜ್ಞೆ ಯಾಗುವ ತನಕ ಬೇರೆ ಮಾಡಿಕೊಡಬೇಕೆಂದು ಬಿನ್ನವಿಸಿರುತ್ತಾರೆ.

ನಾವು ನಿಂತಿನ ಬಂದು ಸಂಗತಿಯಲ್ಲಿ "ನೀನು ಸ್ವರಾಜ್ಯಸಂಬಂಧಿ ಜೋ" ಎಂಬ ಲೇಖನದಲ್ಲಿ ವೈದ್ಯರಾಲೆಯ ಸಂಬಂಧದ ಪೇಲೆ ಸಮಾ ತೋಷಿಸಿದ್ದೆವು. ಅದರ ವಿಷಯವಾಗಿ ಈಗ ತಿಳಿದುಬಂದಿರುವುದರಲ್ಲಿ ಆ ರೋಗಿಯಾದ ಜಾಲಕನು ತಪ್ಪುತಿಳಿದುಕೊಂಡು ಹೇಳಿದುದೆಂದು ಗೊತ್ತಾ ಯಿತು. ವಿಷಯವೇನೂ ತಪ್ಪಿಲ್ಲ ದೊಡ್ಡದಲ್ಲ. ವೈದ್ಯರಾಲೆಯ ಅಧಿಕಾರ ವಿಷಯ ಅವನನ್ನು ನೋಡುವುದಿಲ್ಲವೆಂದು ಹೇಳಿಲ್ಲ." ನಿನ್ನನ್ನು ಸರಕಾರು ತ್ತಿರುವ ರೋಗವು ತುಸ್ಪೇನೂ ಏಕೇಷಣಾದುದಲ್ಲವಾದುದರಿಂದ ನೀನೇನೂ ವೈದ್ಯರಾಲೆಯಲ್ಲಿಸೋ ಉಳಿಯಬೇಕಾದುದಿಲ್ಲ." ಎಂದನು. ನಾವು, ಸ್ವರಾಜ್ಯಸಂಬಂಧಿಗಳಿಗೆ ಪ್ರಜೆಗಳ ವಿಚಾರದಿಂದ ನಡೆಯಿಸಲ್ಪಟ್ಟ ವೈದ್ಯರಾಲೆ ಯಲ್ಲಿ ಸ್ಥಳವಿಲ್ಲವೆಂಬ ಅಂಶವು ಅಸ್ಪತವಾದುದಕ್ಕೆ ಅತಿ ಆನಂದಪಡುವೆವು

ಮಹಮ್ಮದೀಯ ಜನಾಂಗಕ್ಕೆ ಪ್ರತಿನಿಧಿಗಳಾಗಿಯೂ ದೇವದಾಯ ಸ್ವರಾಜ್ಯ ರಾಜಸಭೆಯಲ್ಲಿ ನಿರ್ವಾಚಿತರಾದ ಮಹಮ್ಮದ್ ಅಲಿ ಮತ್ತು ಶೌಕತ್ ಅಲಿ ಎಂಬ ಸಹೋದರರನ್ನಿಬ್ಬರನ್ನು ಮಹಮ್ಮದೀಯರೂ, ಹಿಂದೂಗಳೂ ಜೇಲಿಗೆ ಹೋಗಿಯೂ ಮತ್ತು ಒಬ್ಬನ್ನೇಯು ಮಹಾಸಭೆಗಳನ್ನು ನಡೆಸಿ ನಿರ್ಬಂಧದಿಂದ ಮುಕ್ತರನ್ನಾಗಿಮಾಡಬೇಕೆಂದು ಎಷ್ಟು ಸಾಹಸಗಳನ್ನು ಮಾಡಿ ಸರಕಾರದವರನ್ನು ಕೇಳಿದರೂ ಇಂಥಾ ಸರಕಾರದವರು ಇನ್ನೂ ಯಾವ ಉತ್ತರವನ್ನೂ ಕೊಡದಿರುವುದು ತುಂಬಾ ವಿಷಾದಕರವಾಗಿದೆ. ಸಹೋದರರನ್ನು ಮುಂದೆ ನಡೆಯುವ ಆಲ್ ಇಂಡಿಯ ಮಾಸ್ಲಿಂಲೀಗ್ ಮತ್ತು ಆಲ್ ಇಂಡಿಯ ಮುಹಮ್ಮದೀಯ ವಿದ್ಯಾಸಭೆಗಳಿಗೆಅಧ್ಯಕ್ಷರನ್ನಾಗಿ ಮಾಡಿರುತ್ತಾರೆ. ಇದರಿಂದಲೇ ಇಂಡಿಯಾ ಸರಕಾರವು ಆ ಸಹೋದರ ದ್ವಯರು ಯಾವ ತಪ್ಪನ್ನು ಮಾಡಿಲ್ಲವೆಂದು ತಿಳಿಯಬಹುದಾಗಿದ್ದರೂ, ಇಂಡಿಯಾ ಸರಕಾರದವರು, ಇವರನ್ನು ಏಸ್ಪದಲ್ಲಿಯೇ ಬಿಟ್ಟುಬಿಡುವರೆಂದು ನಂಬುತ್ತೇವೆ.

ಬರ್ಮಾದೇಶದ "ಬ್ಲಾಕ್ಡರ್ ಎಂಗ್ಲಾಮೆನ್ಸ್ ಆಸೋಸಿಯೇಷನ್" ರವರು ಮುಂದೆ ಬರುವ ಮೈ ಮ್ಯಾಂಚೆಗೊರವರಿಗೆ ಬರ್ಮಾದೇಶವು ಇಂಡಿಯಾದಿಂದ ಬೇರೆಮಾಡಲ್ಪಟ್ಟ ಪ್ರಟಿಷ್ ಜಕ್ರಾಧಿಪತ್ಯದಲ್ಲಿರುವ ಸ್ವರಾಜ್ಯರಾಜಸನವಳ್ಳ ರಾಜ್ಯವೆಂದರಂತೆ ನಮಗೂ ಬೇರೆ ಸರಕಾರ ಬಂದನ್ನು ಕೊಡಬೇಕೆಂದು ವಿನ್ನವೆಪತ್ರೆಯನ್ನು ಒದಿದುಕೊಳ್ಳಬೇಕೆಂದು ನಿಶ್ಚಯಿಸಿಕೊಂಡಿರುತ್ತಾರೆ.

ಯುದ್ಧ ವಾರ್ತೆ.

ಪ್ರಟಿಷರೂ, ಫ್ರೆಂಚರೂ ವಿಕತ್ರವಾಗಿ ಬೆಲ್ಜಿಯಂನೊಳಗೆ ಮುಂದೆ ಮುಂದೆ ನುಗ್ಗಿಹೋಗುತ್ತಲಿರುವರು. ರಾತ್ರಿಯಲ್ಲಿ ಸಿಕ್ಕಿದ ಕೋಟೆಗಳನ್ನೂ ಕೈವಶಮಾಡಿಕೊಳ್ಳುತಲೂ ಶತ್ರುಸೈನಿಕರನ್ನು ಸೆರೆಹಿಡಿಯುತ್ತಲೂ ಪುಕ್ಕೆ ಅವರ ಮೇಲೆ ಬಂದೂಕಗಳೇ ಮೊದಲಾದ ಯುದ್ಧಸಾಮಗ್ರಿಗಳನ್ನು ವಶಪಡಿಸಿಕೊಳ್ಳುತಲೂ ಇರುವರು. ಒಂದು ಜರ್ಮನಿಯೆನೆ ಗುಂಪು ಸೋತು ಇಬ್ಬರು ಮಾತ್ರ ಉಳಿದರಂತೆ. ಜರ್ಮನಿಯವರು ಸ್ಥಾನಸ್ಥಳ್ಳಿ ಕಲವು ಪ್ರಾಣ್ಯಗಳ ವೇಲೆ ಮುತ್ತಿಗೆ ಹಾಕಲು ಕಷ್ಟವಟ್ಟಿರು. ಆದರೆ ಸಾಧ್ಯವಾಗದೆ ಹಿಂದ್ಕೆ ಬಿಡಿಸಲ್ಪಟ್ಟರು. ಮಿತ್ರಮಂಡಲಿಯವರ ವೈನಾಸಿಕರು ಶತ್ರು ರಾಜರ ವೈಲುರಸ್ತೆಗಳ ಮೇಲೂ, ಉಗ್ರಾಣಗಳ ಮೇಲೂ ಸಿಡಿಮದ್ದಿನ ಗುಂಡುಸ್ಸು ಸುರಿಸಿ ವಿಶೇಷವಾಗಿ ನಷ್ಟಪಡಿಸುತ್ತಲಿರುವರು. ಜರ್ಮನಿಯವರು ೧೪ ಮೈಲಿ ಅಗಲಕ್ಕೂ 1 ಮೈಲಿ ಹಿಂದಕ್ಕೂ ಹೋಗಿರುತ್ತಾರೆ. ಆದರೆ ಇಬಲಯಮ್ಲಿ ಜರ್ಮನಿಯವರು ವಿಶೇಷವಾದ ಜಯವನ್ನು ಪೊಂದಿರುತ್ತಾರೆ ಹೆಚ್ಚು ಕತಸೆ ಇಟಲಿಯು ಸೂರುವಾಲು ಭಾಗವೆಲ್ಲವನ್ನೂ ವಶಮಾಡಿ ಕೊಂಡಿರುತ್ತಾರೆ. ಮತ್ತು ಅವರನ್ನು ಅಲ್ಲಿಂದಲೇ ಓಡಿಸಿಬಿಡಬೇಕೆಂದೂ ಯೋಚಿಸಿರುತ್ತಾರೆ. ಆದರೆ ಅದು ಎಂದಿಗೂ ಆಗದು. ಮಿತ್ರಮಂಡಲಿ ಯವರು ಸಹಾಯ ಕೊಡುವವರಲ್ಲಿದ್ದಾರೆ. ಅನೂ ಕೂಡ ಕಕ್ಕಸುಟ್ಟಿಗೆ ಸೈನ್ಯದಿಂದ ಎಮುಸಿರುತ್ತಾರೆ. ರಷ್ಯಾದಲ್ಲಿ ಯಾವ ಪರಿವರ್ತನವೂ ನೆಲೆ ಗೊಂಡಿಲ್ಲ. ಎಲ್ಲವೂ ಹೋರಾಟದಲ್ಲಿಯೇ ಇರುತ್ತವೆ. ಟರ್ಕಿಯವರು ಪಾಲಸ್ತೀನ್ ಸೀಮೆಯಲ್ಲಿದ್ದ ಅಲ್ಪ ಪ್ರಟಿಷ್ ಸೈನ್ಯದಮೇಲೆ ಗುಂಪ್ರಗುಂಡಿ ಅತರ್ಕಾತ್ಕಾಗಿ ಬಿದ್ದರು. ಆದರೂ ಅವರಿಗೆ ಸಧ್ಯಕ್ಕೆ ಹೋರಾಡುತ್ತಿರುವಷ್ಟು ಇನ್ನು ಕೆಲವು ಪ್ರಟಿಷ್ ಸೈನ್ಯವು ಬಂದು ಮುತ್ತಿಗೆಯಿಂದ ಬಿಡುಗಡೆ ಮಾಡಲ್ಪಟ್ಟತು. ಪಾಲಸ್ತೀನ್‌ಗೆ ದಕ್ಷಿಣದಲ್ಲಿರುವ ಬೀಯರ್‌ಷೇಬಾ ಎಂಬ ಟರ್ಕಿರಾಣ್ಯವನ್ನು ಪ್ರಟಿಷರು ಗೆದ್ದುಕೊಂಡಿರುತ್ತಾರೆ. ಇದರಿಂದ ಮುಂದೆ ಸೀಮೆಯೊಳಕ್ಕೆ ನುಗ್ಗಿಹೋಗಲು ಸಾಧ್ಯವಾಯಿತು.

ಪ್ರಟಿಷ್ ಮತ್ತು ಫ್ರೆಂಚರ 6 ಡಿವ್ಯಾಸ್ಸುರ ಜಾತಿಯ ಮಡಗುಗಳು ಸಮುದ್ರತಳವನ್ನು ನೋಡಿದವು ಫ್ರೆಂಚರ ಜಲಜೊಂದು ಬ್ರಿಟಿಷ್ ಒಂದು ಸುಮಾರು ಮೇಲೆ ಒಳಗೆ ಹೊಕ್ಕು ಕದನಮಾಡಿ ಕೊನೆಗೆ ಹಿಡಿಸಿಬಿಟ್ಟಿತು.

ಮಿತ್ರಮಂಡಲಿಯವರ ಸೈನಿಕರು ಕಳೆದವಾರದಿಂದೀಚೆಗೆ ತೀರವಟ್ಟಣಗಳಿಗೆ ಪ್ರಯಾಣ

ಮಾಡುತಲಿದ್ದ ಪಡಗುಗಳಲ್ಲಿ 16 ಯೊಕ್ಕನ್ನೂ, 6 ಸಣ್ಣವೂ ಮುಳುಗಿಸ್ಪಟ್ಟಿರುವುವು.

ಮೆ|| ಲಾಯಿಡ್ ಜಾರ್ಜ್ ಸಚಿವಶ್ರೇಷ್ಠರು ಹಿಂದೂ ಸೈನಿಕ ಪರಾಕ್ರಮವನ್ನು ಕೊಂಡಾಡಿರುತ್ತಾರೆ. ಮುಕ್ತ ಹಿಂದು ಫಾಲಿಗಳಲ್ಲಿ " ಯ ದ್ದಾನಂತರ ನಾವು ಹಿಂದೂಸ್ಥಾನವನ್ನು ಮರೆಯುವುದಿಲ್ಲ " ಎಂದು ಹೇಳಿರುತ್ತಾರೆ.

ಚಕ್ರಾಧಿಪತ್ಯಕ್ಕೆ ಭರತಖಂಡವು ಉಪಯೋಗ.

(ಹಿಂದಿನ ಸಂಚಿಕೆಯಿಂದ ಮುಂದಕ್ಕೆ ನಾಗಿದುದು)

ಈ ಸಂದರ್ಭದಲ್ಲಿ, ಭರತವರ್ಷದ ದಂತಿನ ಬಾಬ್ತಿನ ಜೆಟ್ಟವನ್ನು ಗಮನಿಸಬೇಕಾಗಿರುವುದು. ಸರ್ ಪಿ. ಎ ವಾಟರ್‌ಯವರ ಅಭಿಪ್ರಾಯದ ಪ್ರಕಾರ ಯುದ್ಧಕಾಲದಲ್ಲಾಗಬಹುದಾದ ದುಂದು ವೆಚ್ಚವನ್ನು ಪೂರೈಸುತ್ತಿರಬೇಕು. ಈ ವಿಚಾರದಲ್ಲಿ ಕೆಳಗೆ ಕೊಟ್ಟಿರುವ, ಇತರ ಸ್ವತಂತ್ರರಾಷ್ಟ್ರಗಳ ಮನ್ನು ಹಿಂದಿನ ಸ್ಥಾನದ, ಯುದ್ಧಾರಂಭಕ್ಕೆ ಹಿಂದೆ ಆಗುತ್ತಿದ್ದ ದಂತಿನ ಸೆಟ್ಟಿದ ಪಟ್ಟಿಯೇ ನಿದರ್ಶನವಾಗಿರುವುದು.

ಹಿಂದುಸ್ಥಾನ	...	...	1,05,00,000 ಪೌಂಡುಗಳು
ದಕ್ಷಿಣ ಆಫ್ರಿಕ	...	...	11,50,000 ,,
ಕೆನಡಾ	...	...	13,00,000 ,,

ಬಹಳ ಉಪೇಕ್ಷಿತಸ್ಥಿತಿಯಲ್ಲಿರುವ ಕೆನಡ ರಾಜ್ಯದೇ ದಂತಿನ ರಕ್ಷಣಾರ್ಥವಾಗಿ ತನ್ನ ಒಟ್ಟು ಹುಟ್ಟುವಳಿಯಲ್ಲಿ ಸೇಕಡ 6 ರಂತೆ ಪಾತ್ರವೇ ಕೊಟ್ಟಿರುವುದು! ಸನ್ನೆ ಹಿಂದುಸ್ಥಾನವು ಸೇಕಡ ೨೮ ರಂತೆ ತೆತ್ತಿರುವುದು!! ಕೆನಡಾದೇಶದ ಸೆಟ್ಟವನ್ನೇ ಆಧಾರವಾಗಿಟ್ಟುಕೊಂಡರೆ, ನ್ಯಾಯವಾಗಿ ಹಿಂದೂದೇಶವು ಸುಮಾರು 10 00,000 ಪೌಂಡುಗಳನ್ನು ಕೊಡಬೇಕು. ಈ ಪ್ರಕಾರ ಹಿಂದೂದೇಶವು ಯಾವ ನಿಮಿಷದಲ್ಲಿ ಈಗಿನಂತೆ ಚಕ್ರಾಧಿಪತ್ಯದ ಸಖ್ಯವನ್ನು ತೊಂದರೆಗೆ ಸಿಕ್ಕಿದೆಯೂ; ತನ್ನ ಸೈನ್ಯವನ್ನು ಅವನ್ನು ಕಾಪಾಡಲು ಶಕ್ತಿಯುಳ್ಳವಾಗಿರಬೇಕೆಂದು ಪ್ರತಿವರ್ಷದಲ್ಲಿಯೂ 150,00,000 ಪೌಂಡುಗಳನ್ನು ಹೆಚ್ಚಾಗಿ ಕೊಟ್ಟಿರುವುದು! ಖಾರ್ಡಾಪಾರ್ಡಾಜ ರವರು ಪೌಸ್ ಆಫ್ ಲಾರ್ಡ್ಸ್ ಸಭೆಯಲ್ಲಿ ಸ್ಮರಣೀಯವಾದ ಜಯ್ಯ ರಕ್ಷಣೆಯ ಸಭೆಯಲ್ಲಿ, ಭರತಖಂಡವು ಈ ಯುದ್ಧದ ಸ್ಯಾರಂಭದ ಕೆಲವು ತಿಂಗಳುಗಳಲ್ಲಿ ಸಹಾಯ ಮಾಡಿ ದಣಿದು ಹೋಗಿದೆಯೆಂದು ಹೇಳಿದರು. ಇಂಗ್ಲೆಂಡು ದೇಶವು ಈ ಘೋರವಾದ ಯುದ್ಧರಂಗವನ್ನು ಪೆಟ್ಟುಪಡಿಕ್ಕೆ ಸಿದ್ಧವಾಗಿಲ್ಲದಿದ್ದಾಗ ಸೈತಿಕ್ಷೀಕವಾದ ನಮ್ಮ ಭರತಖಂಡದ ಸೈನ್ಯವು ನುಂಗೆ ಹಾಯ್ದು ಸಿಂಧುಜಲ ಪರಾಕ್ರಮದಿಂದ ಪ್ಯಾಲಿಸ್ ಪಟ್ಟಣದ ದ್ವಾರದಲ್ಲೇ ನಿಲ್ಲಿಸಿ, ಈ ಯೋರೋಪಿಯ ಆಕ್ರಮಣವನ್ನು ಎಂಟಿಮಾಡುವ ಶಕ್ತಿ ಅನ್ನು ಕೂಡ ಜಿನ್ಮಿಟ್ಟಿಸಿತು ಹಿಂದೂ ದೇಶದ ಅಂಧಾ ಸಮಯದಲ್ಲಿ ಸ್ನೇಚ್ಛೆಯಿಂದಲೇ ಹೋಗಿ ಭುಜಬಲವಾದ ಪ್ರಾಣಾರ್ಪಣೆಯನ್ನು ಮಾಡಿದ್ದಿರಲೆ, ಈಗಿನ ಏನಾಗುತ್ತಿತ್ತೆಂಬುದನ್ನು ಹೇಳಲಾಗುವುದಿಲ್ಲ. ಭರತಖಂಡವು ಮಾಡಿರುವ ಸಹಾಯಗಳಲ್ಲಿ-ಈ ಪ್ರಾಣಾಹುತಿಯು ತೃಣಪ್ರಾಯವಾದುದು.

ಈ ಯುದ್ಧವು ಪ್ರಾರಂಭವಾಗುವುದಕ್ಕೆ 15 ವರ್ಷಗಳಲ್ಲಿ ಹಿಂದೂ ದೇಶವು ಇಲ್ಲಿ (ಹಿಂದೂದೇಶದಲ್ಲಿ) ರುವ ಬ್ರಿಟಿಷ್ ಮತ್ತು ಹಿಂದೂ ಸೈನ್ಯದ ರಕ್ಷಣಾರ್ಥವಾಗಿ 61,00,00,000 ರೂಪಾಯಿಗಳನ್ನು ವೆಚ್ಚಮಾಡಿರುತ್ತದೆ. ಅಕ್ಕ ಕೆನಡಾ ದೇಶವೆಂದರೆ, 2,00,00,000 ಪೌಂಡನ್ನು ವಾರ್ಷಿಕವಾಗಿ ಕೊಡುತ್ತಾ ಬರುತ್ತಿದೆ. ಪ್ರತಿಯೊಂದು ವರ್ಷವೂ ಭರತಖಂಡದ ದ್ರವ್ಯದಿಂದ ತರಬೇತುಮಾಡಿಸಲ್ಪಟ್ಟ 5,000 ಇಂಗ್ಲಿಸ್ ಸಿಪಾಯಿಗಳು ಇಲ್ಲಿಗೆ ಬರುತ್ತಾರೆ; ಯುದ್ಧಾರಂಭದ ಮುಂದಿಂದಲೇ ಹಿಂದೂಸ್ಥಾನದಲ್ಲಿಯೇ ಯುದ್ಧವಾಹನದನ್ನು 5 ವರ್ಷಗಳು ಉಪಯೋಗಿಸಿದ ಸುಮಾರು 15,000 ಬ್ರಿಟಿಷ್ ಸಿಪಾಯಿಗಳು ಈ ದೇಶವನ್ನು ಬಿಟ್ಟು ಹೋಗುತ್ತಾರೆ ಇಂಗ್ಲೆಂಡಿನಲ್ಲಿ ಇಂಗ್ಲಿಸ್ ಸಿಪಾಯಿಗಳನ್ನು ತರಬೇತು ಮಾಡುವುದಕ್ಕಾಗಿಯೂ ಮತ್ತು ಇಲ್ಲಿಯೇ ಇರುವ ಇಂಗ್ಲಿಷ್ ಸಿಪಾಯಿಗಳ ರಕ್ಷಣಾರ್ಥವಾಗಿಯೂ ಹಿಂದೂಸ್ಥಾನವು ವರ್ಷಂಪ್ರತಿಯಲ್ಲಿದುಡಿ ಸ್ಥಿರ ಹೆಚ್ಚುಕಡಿಮೆಯಾಗಿ ೮೫,೦೦,೦೦೦ ರೂಪಾಯಿಗಳನ್ನು ಖರ್ಚುಮಾಡುತ್ತದೆ. ಆದುದರಿಂದ 15 ವರ್ಷಗಳ ಬ್ರಿಟಿಷ್ ಸೈನ್ಯಕ್ಕಾಗಿ ಹಿಂದೂಸ್ಥಾನವು ಸುಮಾರು ೨,೦೦,೦೦,೦೦೦ ರೂಪಾಯಿಗಳನ್ನು ನೆಚ್ಚಮಾಡಿದೆ. ಈ ದೇಶದ ದ್ರವ್ಯದಿಂದ ತರಬೇತಾದ ೪ ಮಾರು ೫೦,೦೦೦ ಬ್ರಿಟಿಷ್ ಸಿಪಾಯಿಗಳು ಮತ್ತು ಇನ್ನಾ ಕರಬೇತಾದ ಅಧಿಕಾರಿಗಳು ಯುದ್ಧವು ಸ್ಯಾರಂಭವಾದಾಗ ಸಿದ್ಧರಾಗಿದ್ದರು.

[ಸಂಪಾ]

ಜನಾಭಿಪ್ರಾಯವು.

ಬ್ಯಾಂಬರು ಪಡೆಯುವ ಅಭ್ಯರ್ಥಿಗಳಿಗೆ ಸಾಧ್ಯ ಹೆಚ್ಚಿಗಾರರು—ಎಚ್ಚರ!

ಮೆ|| ಬಸವಲಿಂಗಪ್ಪನವರು.

ಈ ಒಡವಮ್ಮನವರು ಬ್ಯಾಪ್ತಗೇಶ್ವರರಲ್ಲಿ ಪ್ರತಿನಿಧಿಗೆ ಒಂದಮರಾಗಿದ್ದು ಮೆ|| ಸಿ. ಆರ್. ರೆಡ್ಡಿಯವರ ಸತ್ಕಾರದ ಸಂಗಡವರ ಸಮ್ಮುಖದಲ್ಲಿ ಕೆಲವು ಮಾತುಗಳನ್ನಾಡಿದರು. ಇದು ಕೇವಲ ಪೋಷಣೀಯವಾದ ವಿಚಾರವಾಗಿಸಿ —, ಇದರಲ್ಲಿಗೂ ಬಂದಿರುವ ಅಭಿಪ್ರಾಯಗಳು ದೂರದೊಬ್ಬರೂ ಈ ಸಂಘದಲ್ಲಿ ಸಕ್ರಿಯರಾದ ಮೆ|| ರೆಡ್ಡಿಯವರಂತೆ ಸರ್ವಸಮ್ಮತವಾದ ಜನಾನುಕೂಲವನ್ನು ಕಲ್ಪಿಸಿಕೊಟ್ಟಿಲ್ಲ. ಇಂಥವರು ಇದ್ದರೂ ಒಂದೆ, ಇಲ್ಲದಿದ್ದರೂ ಒಂದೆ. ಇದ್ದರೂ ಪೋದಂತೆಯೇ." ಎಂದು ಘಂಟಾಘೋಷವಾಗಿ ಹೇಳಿದರು. ಇದುವರೆಗೂ ಇಂಥ ಜನಾನುಕೂಲವನ್ನು ಸರ್ವರಲ್ಲಿಯೂ ಒಂದೇ ಸಮನಾಗಿ ಕಲ್ಪಿಸಿಕೊಡದ ಅಧಿಕಾರಿಗಳಿಗೆ ಅಧಿಕಾರವನ್ನು ಕೊಟ್ಟು ವೆರ ರೋಷವಲ್ಲಿಡಿ ಅಧಿಕಾರಿಗಳ ತಲ್ಲೆಂದು ಹೇಳಲಾಗುವುದಿಲ್ಲ. ಇಲ್ಲವೇ ರಜ್ಯರಾದ ಮತ್ತು ಈಗಿರುವ ಆಸನಗಳಲ್ಲಿ ಕೆಲವ ನೂಡುತ್ತಿರುವ ಅಧಿಕಾರಿಗಳೇ ಈ ಬಾರಣವನ್ನು ಒಬ್ಬಿಕೊಳ್ಳುವ ಪಕ್ಷಕ್ಕೆ ಈ ರೀತಿಯಾದ ಭಾಷಣವು ಸತ್ಯವೇ ಆಗುವುದರಲ್ಲಿ ಸಂದೇಹವೇ ಇಲ್ಲ. ಏಕಾಗಾದರೆ ಇವರನ್ನು ಸತಕ್ಕೆ ಆಕ್ಷೇಪಿಸಬೇಕು? ಈ ಊರುಮೊಕ್ಕೆಟ್ಟು ಬಳಿ ಆಗಾಗ್ಗೆ ಬಜ್ಯಾಕಾರು ಬಂದು, " ಈ ಊರಲ್ಲಿ ಮೂವ ಯಾವ ದಾಕ್ಟರುಗಳಿದ್ದಾರೆಯೋ ಎಲ್ಲರೂ ಇಲ್ಲಿಗೆ ಬರಕಿ. ನಮ್ಮ ನವಾಗ ದಿಪ ಧಗಳನ್ನು ಸರ್ವರೋಗಗಳಿಗೂ ವಿಕಮೂಲಿಕಾಪ್ರಯೋಗದಿಂದ ಕೊಟ್ಟು ಗುಣಪಡಿಸುವವರು ಯಾರಿದ್ದಾರೆಯೋ ನೋಡುತ್ತೇನೆ. ಎಲ್ಲರೂ ಕಳ್ಳ ದಾಕ್ಟರುಗಳು" ಎಂದು ದೂಷಿಸಿ ಒಡ ಜನರಿಂದ ಮೂರು ಕಾಸು, ಆರು ಕಾಸು ಕಿತ್ತುಕೊಳ್ಳುವುದನ್ನು ಕಂಡರೂ ಅಲಕ್ಷ್ಯದಿಂದ ದಣಿಗೂ ತಾವಿದೆ ಇರುವ ನಾಕ್ಟರುಗಳಂತೆ, ಈಗಿನ ಅಧಿಕಾರಿಗಳೂ ಕೂಡ ಮೇಲ್ಕಂಡಂತೆ ಟವರ್ತಿಸಲಿಲ್ಲವೆ ಅಧಿಕಾರಿಗಳನ್ನು ದೂಷಿಸಿದವರನ್ನು ನಿರ್ಲಕ್ಷ್ಯದಿಂದ ಕಾಣುವರಾದರೆ ಇವರು ಮಾತ್ರ ಸ್ಥಾನಿತವಾಗುವುದಿಲ್ಲವೆ?

ಈ ಒಡವಮ್ಮನವರೇ ಬ್ಯಾಪ್ತಗೇಶ್ವರರ ಅಭ್ಯರ್ಥನೆಯಲ್ಲಿ ಮೆ|| ಬಸ ಪ್ಪೆಯ್ಯನವರ ಹಾಲಿನಲ್ಲಿ ಬ್ಯಾಪ್ತಗೇಶ್ವರಾಭಿವೃದ್ಧಿಯ ವಿಚಾರದಲ್ಲಿ ಮಾತ ನಾಡಿದಂತೆ ಪೇರ್ಮಾನವಿದೆ ಈ ಸಂಘಕ್ಕೆ ಒಬ್ಬ ಬ್ರಾಹ್ಮಣರನ್ನಾ ಬಿಡ ಕೂಡದೆಂದು ಕಟ್ಟು ಮಾಡಿಕ್ಕೆಂದೂ ಹಾಗೂ ಒಬ್ಬಿಬ್ಬರು ಬ್ರಾಹ್ಮಣರು ಯೋಗಿಬುದೆಂದೂ ವದಂತಿ ಇದೆ. ಈ ಸಂಘದಲ್ಲಿ ಒಬ್ಬ ಬ್ರಾಹ್ಮಣ ನಿದ್ದರೂ ಇವರು ಮಾಡುವ ಭಾಷಣದಲ್ಲಿ ದೋಷಗಳೇನಾದರೂ ಇದ್ದರೆ ಹೊರಪಡ್ಡು ಅಕ್ಷೇಪಣೆಗೆ ಕಾರಣವಾಗಿಯುವುದೆಂದು ಅಂಜಿ ಈ ರೀತಿ ಒಟ್ಟು ಮಾಡಿದರೆಂದು ತೋರುವುದಿಲ್ಲವೆ! ಟವರ್‌ಹಾಲಿನಲ್ಲಿ ಇವರು ಮಾಡಿರುವ ಭಾಷಣದ ಅಭಿಪ್ರಾಯವು ಸಮಿಯಾದುದೇ ಅಥವಾ ಕಲ್ಪಿತವೇ ಎಂದು ಸಂದೇಹವಾದ್ದರಿಂದ ಕೇಳಬೇಕಾಯಿತು.

ಪ್ರತಿಕ್ಷಿಪ್ತ—

ಛಿ! ನಾಯಿ!

ಉಚ್ಚಾಸನಾಬಿಲಲಬ್ಧಸ್ಯ ಮಿಷ್ಟಾನ್ನಾಗ್ನಾಶನಸ್ಯ ಕಃ।
ದೈವಾದಾಪ್ತಬಭಕ್ಷಸ್ಯ ಗುಹ್ಯಾಂಗೋಚ್ಛಾಸ್ಯ ಗೋಚರಃ॥

ಒಂದಾನೊಂದು ಅರಣ್ಯವಂತೆ. ಅಲ್ಲಿ ಒಬ್ಬ ಮೃಗವು ತಪಸ್ಸು ಮಾಡುತ್ತಿದ್ದನಂತೆ. ಅವನ ಸಮಾಧಿಯಲ್ಲಿ, ಜೊತೆಯಲ್ಲಿ ಓಡಿಯಾಡುತ್ತ ಒಂದು ನಾಯಿಯು ಇದ್ದಿತಂತೆ. ಒಂದು ದಿನ ಒಂದು ಹುಲಿಯು ಆರ್ಭಟಿಸಿಕೊಂಡು ಬರುವಲ್ಲಿ, ನಾಯಿಯು ಹೆದರಿ ಓಡಿಹೋಗುತ್ತಿದ್ದುದನ್ನು ನೋಡಿ ಮೃಗವು ಕನಿಕರದಿಂದ ನಾಯಿಯನ್ನು ಕಾಲಿಯಾಗಿ ಮಾಡಿ ನಿಜವಾದ ಹುಲಿಯನ್ನು ಕೊಲ್ಲಿಸಿದನಂತೆ. ಇನ್ನೊಂದು ದಿನ, ಈ ಹುಲಿಯನ್ನು ಅಟ್ಟಿಕೊಂಡು ಬರಲಾಗಿ ಮೃಗವು ಹುಲಿಯನ್ನು ಆನೆಯನ್ನಾಗಿ ಮಾಡಿ ನಿಜವಾದ ಆನೆಯನ್ನು ಕಾಣಿಸಿದನಂತೆ. ಮತ್ತೊಂದು ದಿನ ಬಂದ ಸಿಂಹವು ಆ ಆನೆಯನ್ನು ಕೆಡಿಸಲು; ಮೃಗವು ಆನೆಯನ್ನು ಸಿಂಹವನ್ನಾಗಿ ಮಾಡಿ ಹೊಡೆಸಲು ಸಿಂಹವನ್ನು ಮೃತಿಗೊಳಿಸಿದನಂತೆ. ಅಂತೂ ನಾಯಿಯು ಕ್ರಮವಾಗಿ ಸಿಂಹವಾಯಿತು. ಒಂದು ದಿನ ಈ ಸಿಂಹವು, "ನಾನು ಸೃಗೇಂದ್ರನಾಗಿ; ಇನ್ನು ಈ ಮೃಗಿಯು ಸಂಗವಿಲ್ಲದ್ದು ತೊಂದರೆಪಡಲೇಕೆ? ಇವನನ್ನು ಕೊಂದು ಸ್ವತಂತ್ರವಾಗಿರುತ್ತೇನೆ." ಎಂದು ಯೋಚಿಸಿ ಮೃಗಿಯೇಲೆ ಬೀಳಲು ಸಿದ್ಧವಾಗಿತಲು, ಮೃಗಿಯು ನೋಡಿ, "ಛೀ. ಜಾತಿಯನ್ನು ಉತ್ಪಮಸ್ಥಿತಿಗೆ ತಂದರೆ ಯಜಮಾನನಿಗೆ ಪಾಪಿಕವಪ್ಪದು" ಎಂದು ತಲೆದು "ಛೀ! ನಾಯಿ! ನಾಯಿಯಾಗಿ ಹೋಗು" ಎಂದು ಬೆದಿಸಲು ನಾಯಿಯು, ನಾಯಿಯೇ ಆಯಿತಂತೆ. ಏನೋ ನೋಡಿ ಜ್ಞಾಪಕ ಬಂತು. ಇದುದಿಂದ ಆರಂಭವಾಗಲಾಯಿತು. ಇದೇನು? ಇದೆಂತಹ ಕಥೆ? ಇದು ಅಧುನಿಕರ ಆಚಾರವಿಚಾರಗಳನ್ನು ತೋರಿಸುವ ಸಾಮಾಜಿಕವಾಕ್ಯವಲ್ಲ. ಸೈನ್ಯವಿವ್ಯಾಸಗಳನ್ನೂ, ರಾಜಾಂಪಹರಣಗಳನ್ನೂ, ಜಯಾಪಜಯಗಳನ್ನೂ ವಿವರಿಸುವ ಇತಿಹಾಸವೂ ಅಲ್ಲ. ಶೃಂಗಾರಾದಿರಸಗಳು, ನಾಯಕ ನಾಯಕಿಯರ ಸ್ವೇಷಾಲಂಕಾರಗಳು, ವಸ್ತು ವರ್ಣನೆಗಳು ಇವೇ ಮೊದಲಾದ ಸಂವಿಧಾನಗಳಿಂದ ಸಮೃದ್ಧವಾವ ಕಾವ್ಯವಿಯಂತು ಅಲ್ಲವೇ ಅಲ್ಲ. ಏನಾಗಿರಬೇಕು ಇದೇನು? ಇದೊಂದು ನೀತಿಬೋಧಕವಾದ ಸಣ್ಣಕಥೆ. ಇದರ ನೀತಿಯನ್ನು ಸಕಲಶಿಷ್ಟಶಾಸ್ತ್ರಕರ್ತೃವಾದ ವಿಷ್ಣುಶರ್ಮನೆಂಬ ಮಹಾನುಭಾವನು, 'ನೀಚಜನ್ಮಾಸ್ಯಾದಂಪ್ರಾಪ್ಯ ಪ್ರಾಮಿನಂಯಂತಮುಚ್ಚತಿ' ಎಂಬ ನಾಕ್ಯದಿಂದ ಬಹಿರಂಗಪಡಿಸಿರುವನೆಂದು ತಿಳಿದು ಬೇರೆಯೆನ್ನು ಕೆಲಗಿಡುವೆವು.

ಸ್ವೀಕಾರ.

ಕೆಳಗೆ ನಮೂದಿಸಿರುವುಗಳನ್ನು ಸಾದರವುಂದ ಸ್ವೀಕರಿಸಿದೆನೆ—ಎಡಿಟರ್.

"ಕಥಾಮಾಲಿಸಿ," ಮಲ್ಲೇಶ್ವರ, ಬೆಂಗಳೂರು (ಸಾರ್ವಿಕಹಂದಿ ೨ ರೂ; ಮಿಪ್ರತಿಗೆ ೬ ಸೈ) ಕಥಗಳೆಂಬೊಡಗೂಡಿ ಮಕ್ಕಳಿಗಾಗಿ ಹೊರಡಿಸುತ್ತಿರುವ ಇದೊಂದು ವಾರಪತ್ರಿಕೆ.

ಉಮಾಕೋರಪ್ರಕಾಶ—(ತರ. ವಾಸುದೇವಮೂರ್ತಿ ಶಾಸ್ತ್ರಿಗಳವರಿಂದ ಮೈಸೂರು; ೧ ಆಣೆ.) "ನಾಮಲಿಂಗನುಶಾಸನವನ್ನು" ಕನ್ನಡಿಗರ ಉಪಯೋಗಕ್ಕಾಗಿ ಅರ್ಥವಿವರಣೆಯೊಡನೆ ಬರೆಯಲ್ಪಟ್ಟಿದೆ.

ಚಂದ್ರಕಾಂತ ತೈಲ.

ಕಣ್ಣು ಎಂದುಗಳನ್ನು ಸೌಂದರ್ಯವುಂದಿಸಿ ಧನುರ್ಭಾಗು, ಬಿಗಿಹಾಮರಹಿತ, ಮೇಣದ ಬಿಂಬಗಳಾ ವಾಸ್ಯಗಳು, ಮಕ್ಕಳ ಹುಬ್ಬಂದ, ಚ್ಯುತ, ಮುಂತಾದುವುಗಳು ಗುಣವಾಗುವುದು. ಕ್ರಯ ಸೀಸೆ ಇಕ್ಕೆ 1 ಆಣೆ

[೭—೮] ಸಮ್ಮ ವೀರಾನರಸಿಂಹೇಂದ್ರಕಾಂತ ಡಿಪೊ, ಮೈಸೂರು.

ಸ್ತ್ರೀಯರಿಗೆ ಕೇಶಭೂಷಣವೇ ಭೂಷಣ!!

ಕಾವಿನಿಯ ತೈಲ. (ರಿಜಿಸ್ಟರ್ಡ್.)

ಈ ತೈಲವು ಸರಿಯಾದ ಮತ್ತು ಅಮೂಲ್ಯವಾದ ಔಷಧಗಳಿಂದಮಾಡಲ್ಪಟ್ಟಿರುತ್ತದೆ ಕೂದಲು ಉದುರುವುದನ್ನು ತಡೆದು ಅವನ್ನು ಬಲಪಡಿಸುತ್ತದೆ ಕಪ್ಪಾಗಿ ಹುಬ್ಬು ಬರುವಂತೆ ಮಾಡುತ್ತದೆ ಕೇದರಾಜಿಯನ್ನು ಕೊಡುವುದಾಗಿ ಮೈನುತ್ತದೆ ಮತ್ತು ನರೋಗವೇ ಗುಣವಾಗುವ ಕೂದಲಿಗೆ ತಮ್ಮ ಸ್ವಭಾವಕ್ಕೆ ತಮ್ಮ ಸ್ವಭಾವಕ್ಕೆ

ಈ ತೈಲವು ಮೆದುಳನ್ನು ಉತ್ತಮ ಸ್ಥಿತಿಯಲ್ಲಿಡುವುದರಿಂದ, ಅತ್ಯುತ್ತಮ ಶಕ್ತಿಯನ್ನು ಊರ್ಜಿತಪಡಿಸಿದವರಿಗೆ ಕಣ್ಣಿಗೆ ಬಹುಮಾನವಾಗಿ ಕೊಡುವ ಕಾರ್ಯಕರ್ತರಿಗೆ. ಆರೋಗ್ಯಕಾರಕತ್ವದಿಂದ ಕೆಲಸ ಮಾಡಲಕ್ಕವರಿಗೆ, ವಿದ್ಯಾರ್ಥಿಗಳಿಗೂ, ಎಲ್ಲರಿಗೂ ಒಮ್ಮೆ ಶ್ರೇಷ್ಠವಾಗಿರುತ್ತದೆ ಇದಲ್ಲದೆ ಇದು ಮನಸ್ಸಿಲ್ಲಾಸವನ್ನುಂಟುಮಾಡುವಂತಹ ಇಷ್ಟವಾದ ಸುವಾಸನೆಯನ್ನು ಹೊಂದಿರುತ್ತದೆ. ಇದರ ಶ್ರೇಷ್ಠತೆಗೆ ಸಲ್ಲಾಗಿ ಮೈಸೂರು ವಸ್ತುಪ್ರದರ್ಶನದಲ್ಲಿ ಬಹು ಬೆಲ್ಲದ ಪದಕವನ್ನು ಬಹುಮಾನವಾಗಿ ಕೊಟ್ಟಿರ್ಕಾರ ಸಮರ್ಥನೆಯನ್ನಾಗಿ ಕರೆದಿಕೊಳ್ಳಬೇಕಾಗಿ.

ಎಲ್ಲೆಲ್ಲಿಯೂ ವಿಚಾರಿಸುತ್ತಿರಿ.

ಕ್ರಯ 1 ಸೀಸೆಗೆ 1-0-0; 3 ಕ್ಕೆ 2-10-0. ವಿ. ಪಿ. ಸಹಿತ ಬೇರೆ.

ಆಕರ್ಷಕ ಆಭರಣಮಯವಾದ ಸುವಾಸನೆಯನ್ನು ಹೊಂದಿರುತ್ತದೆ!

ಓಟೋ ದಿಲ್ ಬಹಾರ್. (ರಿಜಿಸ್ಟರ್ಡ್.)

ಸುವಾಸನೆ ಸ್ನೇಹಗಳಲ್ಲಿ ಅತ್ಯಂತಶ್ರೇಷ್ಠವಾಗಿರುವುದು. ಇದು ಆಸಕ್ತ ಬರುವುದುಗಳನ್ನು ಮನ್ನು ಹೊಗ್ಗಿಸಿ ಪ್ರೀತಿಗಳನ್ನು ಹೊಂದಿರುತ್ತದೆ.

ಇದು ಎಲ್ಲಾ ವಿಧವಾದ ಮಾದಕ ಪದಾರ್ಥಗಳಿಂದಲೂ ದೋಷರಹಿತವಾಗಿರುತ್ತದೆ. ಎಲ್ಲರೂ ಸುಲಭವಾಗಿ ಉಪಯೋಗಿಸಬಹುದು. ಬಟ್ಟೆ, ಮಲ್ಲಿಗೆಯಂತೆ ಹೊಸಬಗೆಯಾಗಿರುವಂತೆ ಕಾಣುತ್ತದೆ ಆದರೆ ಕೆಲವುಪ್ರಯೋಗಗಳಿಂತಹ ಇದರ ಸುವಾಸನೆಯನ್ನು ಸೂಸಿ ಸಂತೋಷಗೊಳಿಸಿ. ಇದರ ಕೃತ್ಯವಾದ ಗುಣಗಳಲ್ಲಿ ಇದರ ಕೃತ್ಯವಾವುದೂ ಸಮಾನವಲ್ಲ.

ಕ್ರಯ 1 ಡ್ರಾಮಿನ ಸೀಸೆ 1ಕ್ಕೆ 12 ಆಣೆ, 2 ಡ್ರಾಮಿನ ಸೀಸೆ 1ಕ್ಕೆ 1-1-0; 1 ಡ್ರಾಮಿನ ಸೀಸೆ 1ಕ್ಕೆ 2 ರೂಪಾಯಿ.

ವಿ. ಪಿ ಸಹಿತ 0—1—0 ಬೇರೆ.

ಪ್ರಪಟ್ಟಣದಲ್ಲಿಯೂ ಪ್ರಸಿದ್ಧವಾದ ಪ್ರತಿ ಅಂಗಡಿಗಳಲ್ಲಿಯೂ ಸಿಕ್ಕುತ್ತದೆ. ಕೊಂಡು ಕೊಳ್ಳುವಾಗ ಕೇಳಿಮಿಮೋಲಂ ಮೊತ್ತ ಪಾಸಲೆ ಕಾರ್ಡಿನಮೇಲಾ "ಓಟೋ ದಿಲ್ ಬಹಾರ್" ಎಂದು ಬರೆದಿರುವುದನ್ನೇ ನೋಡಿ ಕೊಳ್ಳಿರಿ.

ನೋಟು ವಿಳಾಸ:— [೧—೨]

ಆಂಗ್ಲೊ ಇಂಡಿಯನ್ ಡ್ರಗ್ ಮತ್ತು ಕೆಮಿಕಲ್ ಕಂಪನಿ,
No. 115, ಬಾಮ್ಮಾವಸೀತಿ, ಬೊಂಬಾಯಿ.

Printed and Published by Mr. B. V. Narasimha Iyengar, at the Royal Press, Mysore; for the Editor & Proprietor.

Regd. No. M 1299. ಬೆಲೆಪ್ರತಿ 3 ಸೈ.

SATYAVADI

ರಾಜಕೀಯ, ಸಾಮಾಜಿಕ, ಮತವಿಚಾರ, ಭಾಷಾಭಿವೃದ್ಧಿ ಮುಂತಾದ ವಿಷಯಗಳನ್ನೊಳಗೊಂಡಿರುವ

"ಸತ್ಯವಾದಿ" ವಾರಪತ್ರಿಕೆ

ವಾರ್ಷಿಕ ಚಂದಾ 0—8—0] ಪ್ರತಿ ಮಂಗಳವಾರ ಪ್ರಕಟಿಸಲ್ಪಡುವುದು. [ಅಂಚೆಸಹಿತ ಸೇರಿ 1—6—0

ಸಂಪುಟ I ಮಂಗಳವಾರ 20 ನೇ ನವಂಬರ್, 1917 ಸಂಚಿಕೆ 10

ಕೃಚದ್ಭೂಮೌಶಾಖಾಮಾಕೃಚದಮಿಹಪರ್ಯಂಕಮೇಕಂ ತಥೈಕಾ |
ಕೃಚಿನ್ಮಾತಾಪೀತ್ಯೇಕೃಚಿದಮಿಹಶಯ್ಯೋದರಗರುಚಿ ||
ಕೃಚಿಚ್ಚಂಧಾರೀತ್ಯೇಕೃಚಿದಮಿಹವಿನ್ಯಂಬರಧರೋ |
ಮನಸ್ವೀಕಾರ್ಯಾರ್ಥೀನಗಣಯತಿದುಃಖಂನಮಹತಾಂ ||

ಸ್ವರಾಜ್ಯ.

ನಮ್ಮ ದೇಶದಾದ್ಯಂತ ನಮಗೆ ಅನುಕೂಲವಿಲ್ಲವಾದರೆ, ನಮ್ಮ ಉದ್ಯೋಗಿಗಳ ವಿಧವು ನಮಗೆ ವಿಕಾರವಾಗಿ ತೋರಿದರೆ, ನಮ್ಮ ತಲೆಯ ಮೇಲಿನ ಕೇಶರಾಶಿಯು ನಮ್ಮನ್ನು ನಾಚಿಸುವುದಾದರೆ, ನಮ್ಮ ಊಟ ಉಪಚಾರಗಳಲ್ಲಿ ನಮಗೆ ಅಭಿರುಚಿಯಿಲ್ಲವಾದರೆ; ನಮ್ಮ ದೇಶದ ವಾಯು ಗುಣವು ನಮಗೆ ಅನುಗುಣವಿಲ್ಲವಾದರೆ, ನಮ್ಮ ದೇಶಭಾಂಧವರನ್ನು ನಮ್ಮ ಸಭೆಯಲ್ಲಿರಲು ಅಯೋಗ್ಯರಾದ ಕಾಡುಜನರೆನ್ನುವುದಾದರೆ, ಸ್ವಸ್ತ್ರೀಯು ಸೀಜನೆಂಬ ಶೃಡಿಸಿ ವಿದೇಶದವುಗಳನ್ನು ಮುಕ್ತಿಯಾಯಕನೆಂದು ಅಪ್ಪಿಕೊಳ್ಳುವುದಾದರೆ, ಹೆಚ್ಚೇಕೆ-ಸ್ವದೇಶದವುಗಳೆಲ್ಲವೂ ಕೆಟ್ಟುದೆಂದು ತಿಳಿಯುವುದಾದರೆ ಮತ್ತು ವಿದೇಶದವುಗಳು ನಮಗೆ ಉತ್ತಮವೆಂದು ಕೊರುವುದಾದರೆ, ಸ್ವರಾಜ್ಯಶಾಸನವನ್ನು ಹೊಂದಿದೇಕೆಂಬ ಅಧಿಕಾರಿಗೆ ಅರ್ಹವಾದ ಅರ್ಥವಾವುದನ್ನೂ ಕೊಡುವುದದಲ್ಲವು.

ಮುಂದಿನವರಿಗಿಂತಲೂ ಹಿಂದಿನವರೂ!

ಮುಂದುವರಿದವರು ಯಾರು? ಹಿಂದುಳಿದವರು ಯಾರು? ಈ ಪ್ರಶ್ನೆಗೆ ಸುಲಭವಾಗಿ ಲಿಪ್ತಪಕ್ಷಸಾತುರ್ಯದಿಂದ ಉತ್ತರವನ್ನು ಕೊಡಲೇಕಾದರೆ ಕೆಲವಂಶಗಳನ್ನು ವಿಮರ್ಶನಮಾಡಲಾಗಿದುವುದು. ಕೆಲವರ ವಾಗಾಡಂಬರದಿಂದಲೂ ಕೆಲವರ ನಿವರ್ಗಗಳಿಗಾದ ಲೇಖನಾಜೀವರಿಂದಲೂ ಮತ್ತೆ ಕೆಲವು ಕಾರ್ಯಕ್ರಮಗಳಿಂದಲೂ ಈಗ ಬ್ರಾಹ್ಮಣರು ಮುಂದುವರಿದವರೆಂದೂ ತಿಳಿದರು ಹಿಂದುಳಿದವರೆಂದೂ ನಿರ್ಧಾರಿಸಲ್ಪಟ್ಟಿರುವುದು ಅಭಿಪ್ರಾಯವನ್ನೇ ಅನುಮೋದಿಸುವವಕ್ಷದಲ್ಲಿ ಬ್ರಾಹ್ಮಣರು ಮುಂದುವರಿದಿರುವುದಾದರೆಲ್ಲಿ?—ಸ್ವಪ್ನದಲ್ಲಿನೇ? ಹಾಗಿಲ್ಲವಲ್ಲ! ಮುಕ್ಕಾಲು ಭಾಲು ಬ್ರಾಹ್ಮಣರೆನ್ನಲ್ಲಾ ಅಪೇಕ್ಷಿಸುವಕಾಲಕ್ಕೆ ಸಮಾಜವಿತ್ತಿರುವುದನ್ನು ಕೀತ್ರನಾಟವಳ್ಳವೆಲ್ಲರೂ ನೋಡಬಹುದಲ್ಲಾ! ಮತ್ತಾವುದರಲ್ಲಿ ಮುಂದುವರಿದಿರುವರು?—ವಿದ್ಯೆಯಲ್ಲಿಯೇ? ಅದರಲ್ಲಿ ಮುಂದುವರಿದಿರುವುದೇನೋ ನಿಜ, ಯಾವ ಸಮಾಜದಿಂದ ಮುಂದುವರಿದರು? ಯಾವ ವಿದ್ಯೆಯಲ್ಲಿ ಮುಂದುವರಿದರು? ಯಾವ ಭಿಕ್ಷೆಯನ್ನು ಮುಂತಾದುವುಗಳನ್ನು ಮಾಡಿಕೊಂಡು; ಕಂಡಕಂಡವರಲ್ಲೆಲ್ಲ ಹಲ್ಲಿರಿದು ವಿಧಾನಮೆತ್ತಿಯೋ, ಮನೆಯಲ್ಲಿದ್ದ ಪಾತ್ರೆ ಪದಾರ್ಥಗಳನ್ನು ಮಾರಿಯೋ, ತಿಂಗಳುಗಟ್ಟಿಯು ಸ್ಕೂಲ್ ಫೀಯನ್ನು ಸ್ಕೂಲಿಗೆ ಸಲ್ಲಿಸಿ, ಇಂಗ್ಲಿಷ್ ವಿದ್ಯಾಭ್ಯಾಸಮಾಡಿ ಅದರಲ್ಲಿ ಮುಂದುವರಿದರು. ಇತರ ಜನಾಂಗವನ್ನು "ಹಾಗೆಮಾತಬಾಗದೆಂದು" ಕೈಬಿಡಿದು ತಡೆದವರಾರು? ಬ್ರಾಹ್ಮಣರಿಗೆಮಾತ್ರ "ಸ್ಕಾಲರ್‌ಷಿಪ್" ಕೊಡಬೇಕೆಂದೂ, ತಮಿತರುಗಳಿಗೆ ಕೊಡುವುದಿಲ್ಲವೆಂದೂ ಯಾರಾದರೂ ಶಾಸನವನ್ನೆಲ್ಲಿ ಪ್ರಕಟಿಸಿದ್ದರೆಯೇ? ಇತರರು ವಿದ್ಯಾಭ್ಯಾಸವನ್ನು ಬಿಟ್ಟಿತೆ ಬ್ರಾಹ್ಮಣರು ವಿದ್ಯೆಕಲಿತುದೇ ಅವರ ಅಪರಾಧವೇನು? ಅಯಿತು. ನಮ್ಮವರು ಬ್ರಾಹ್ಮಣರು ವಿದ್ಯೆಕಲಿತು, ಮುಂದುವರಿದರು! ಹೇಗೆ? ಅವರಿಗೆ ಮೊಕ್ಷೆಯಲ್ಲಿ ತೀರ್ಥವಿಯಾಗಿ, "ಸ್ಕೂಲ್‌ಮಾಸ್ಟರ್" ಕೆಲಸದಲ್ಲಿ ಹತ್ತುರೂಪಾಯಿಯು ವೇತನವನ್ನು ಪಡೆದು ಹೊಟ್ಟೆಗಾದರೆ ಬಟ್ಟೆಗಿಲ್ಲದೆ; ಬಟ್ಟೆಗಾದರೆ ಹೊಟ್ಟೆಗಿಲ್ಲದೆ ನರಳುತ್ತಿರುವರು. ಅವರೆಲ್ಲ ವಿದ್ಯೆಯಲ್ಲಿಯೂ, ಅಧಿಕಾರದಲ್ಲಿಯೂ, ವ್ಯವಸ್ಥೆಯಲ್ಲಿಯೂ ಮುಂದುವರಿದಂತೆಯೇ ಆಯಿತು!! ಮತ್ತೆ ಕೆಲವರು "ಫೋರ್ಟ್‌ಫಾಲಿಯೋ" ಸಲ್ಲಿಸಿದ ತೀರ್ಥವಿಯಾಗಿ, ಮೈಸೂರಿನಾಕಚೆರಿ; ತಾಲ್ಲೂಕುಕಚೇರಿ; ಸುಂಕದಕಟ್ಟೆ ಮುಂತಾದುವುಗಳಲ್ಲಿ ಹತ್ತುರೂಪಾಯಿನ ವೇತನವನ್ನು ಪಡೆದು, ಹೆಂಡತಿಮಕ್ಕಳಿಗೆ ಒಪ್ಪತ್ತಿನ ಊಟಕ್ಕೂ ಸಾಲದೆ ಪಾಡುಪಡುತ್ತಿದ್ದರೂ, ಶುಭ್ರವಾದ ಬಟ್ಟೆಯನ್ನು ಧರಿಸಿ ನೋಟಕರ ಕಣ್ಣಿಗೆ ಮಣ್ಣೆರಚುವಂತೆ ಆಲೆದು; ಬಳಲಿ, ಬೆಂಡಾಗಿರುವರು. ಇವರೂ ಮುಂದುವರಿದಂತೆಯೇ ಆಯಿತು!! ಇನ್ನು ಕೆಲವರು "ಪೆಟ್ರೀಕ್ಯುಲೇಷನ್" ಮುಕ್ತಿಯಲ್ಲಿ ತೀರ್ಥವಿಯಾಗಿ ಇಪ್ಪತ್ತೈದು ರೂಪಾಯಿನ ವೇತನವನ್ನು ಕಂದು, ಬೈಸಿಕಲ್ಲು, ಫೌಂಟನ್‌ಪೆನ್, ಗಡಿಯಾರ, ಇವುಗಳ ಬಡ್ಡಿಯಿಂದ ತಮಗೆ ತಾವೇ ಕಾರಕನಿಗೂ ಮುಂಚಿಕೊಟ್ಟು ಅಧಿಕಾರಮಾಡುತ್ತಿರುವರು. ಇವರೂ ಮುಂದುವರಿದಂತೆಯೇ ಆಯಿತು!! ಮತ್ತೆ ಕೆಲವರು "ಬಿ.ಎ." ತರಗತಿಯಲ್ಲಿ ತೀರ್ಥವಿಯಾಗಿ ಐವತ್ತೈದುರೂಪಾಯಿ ವೇತನವನ್ನೆ ತೆದು, "ಸನ್ ಫ್ಲವರ್ ಸೂಟಿಗಳು," "ಧರ್ಮಾವರಪ ಸೀರೆಗಳು" ಪ್ರತಿತಿಂಗಳಲ್ಲಿಯೂ ಕಂತುಕಟ್ಟುತ್ತಿರುವರು. ಇವರೂ ಮುಂದುವರಿದಂತೆಯೇ ಆಯಿತು!! ಇನ್ನು ಕೆಲವರು "ಬಿ.ಎಲ್., ಎಲ್. ಎಲ್. ಬಿ" ಮುಂತಾದ ಪರೀಕ್ಷೆಗಳಲ್ಲಿ ಕೃತಾರ್ಥರಾಗಿ, "ನ್ಯಾಯವಾದಿ" ಗಳೆಂಬ ಹೆಸರನ್ನು ಹೊಂದಿ, ತಿಂಗಳಿಗೆ ನೂರುರೂಪಾಯಿನವರೆಗೂ ಸುಖಾಸನ, ಸುಪಾಸ್ಯೆಗೂ, ಆಕಡೆಗೂ, ಆಟೋಸಿನ ಬಾಡಿಗೆಗೂ, ಸಾಲಿತ್ವಾರ ಪಿಟೀಗಡ ಪ್ರತಿತಿಂಗಳ ಪ್ಲೀಯೂ ನಾಲ್ಕತ್ತುರೂಪಾಯಿ ಕೆತ್ತು, ಕುದುರೆಬಂಡಿಯನ್ನು ಬಾಡಿಗೆಗೆ ತಂದುಕೊಂಡು ಜಪ್ಪಯ್ಯನಿರುವರು. ಇವರೂ ಮುಂದುವರಿದಂತೆಯೇ ಆಯಿತು. !! ಇದಲ್ಲವೆ ಕೆಲವರು, "ಎಪ್ಪಾ," "ಸೋ" ಎಂಬೆರಡು ಮಾತಿನಲ್ಲಿಯೇ ಪ್ರಪಂಚವಾಕಾಶಿಯೂ, ಮತ್ತೆ ಕೆಲವರು, ದರ್ಪಾಯಿ ಕೆಲಸ, ಪಬ್ಲಿಕು ಕೆಲಸ, ಪ್ರೈವೇಟ್‌ಕೆಲಸ, ಮುನ್ಸೀಪಾಲಿಯ, ಪೋಲೀಸ್‌ಕೆಲಸ, ಸ್ಟೇಬಲ್ ಕೆಲಸ, ಸೇನೆಯ ಕೆಲಸ, ದಫ್ತಾನಿನ ಕೆಲಸ, ಮಿಷನರಿಯ ಕೆಲಸ ಇವುಗಳಿಂದ ಹೊಟ್ಟೆಹೊರೆದುಕೊಳ್ಳುತ್ತಿರುವರು ಇವರೂ ಮುಂದುವರಿದಂತೆಯೇ ಆಯಿತು!!

ಇನ್ನು ಉಳಿದವರುಯಾರು? ಒಬ್ಬೊಬ್ಬರು ಮಾತಾಪಿತೃಗಳ ಪೂಜಾ ಫಲವಿಂದೆಯೋ, ಪೂರ್ವಾರ್ಜಿತ ಸುಕೃತವಿಶೇಷದಿಂದಲೋ ಸಾವಿರಾರು ರೂಪಾಯಿ ವ್ಯಯವಾಗಿ, ದೇಹ ಪ್ರಮಾಣಟ್ಟು ಓದಿ, ಆಫ್ರಿಯವನ್ನು ಮಾಡಿ, ಅಮಲ್ದಾರ್, ಸೆಕ್ಯೂಟಿಕಮಿಷನರ್ ಮುಂತಾದ ಗಣ್ಯವಾದ ಹುದ್ದೆಗಳಿಗೆ ನುರುಪರು ಇಪ್ಪರನ್ನು ಪ್ರೊತ್ಸಾಹಿಸಿದವರು ಯಾರು? ಇತರರನ್ನು ಹಿಂದಕ್ಕೆಳೆದವರು ಯಾರು? ಇಂತಹ ಗಣ್ಯಾಧಿಕಾರಗಳು, ಬ್ರಾಹ್ಮಣರಲ್ಲಿ ಎಷ್ಟುಮಂದಿ ಇರುವರು? ಇತರರಂತೆಯೇ "ಇತರರೂ" ವ್ಯಾಸಂಗಗಳನ್ನು ನೆಡಿ ಅವನ ಅಧಿಕಾರಗಳಿಗೆ ಬಂದಿಲ್ಲವೆ? ಅವರನ್ನು ಕೆಂದು "ಬ್ರಾಹ್ಮಣರು" ಸ್ಪರ್ಧಿಸಿದವೇ? ಭಗೀರಥನುತ್ಪನ್ನದಿಂದ ಅಧಿಕಾರ ಪದವಿಯನ್ನೆಲ್ಲವ "ಕೆಲವ" ಬ್ರಾಹ್ಮಣರನ್ನು ನೋಡಿಸೀ, ಬ್ರಾಹ್ಮಣರು ಮುಂದುಮಿಸವರಾದರೊ? ಹಿಂದುಳಿದವನೆಂದೆನಿಸಿಕೊಂಡವರ ವಿಷಯವನ್ನು ಸಮಾತೋಷಿಸೋಣ.

ಪಾಠಕಮಹಾಶಯರಲ್ಲಿ ನಮ್ಮದೊಂದು ಮಾತು:—ಧನಸಂಗ್ರಹಕ್ಕೋಸ್ಕರವಾಗಿ ಯಾಗಲೀ, ಪ್ರತಿಷ್ಠೆಯನ್ನು ಪಡೆಯುವಲುವಾಗಿ ಯಾಗಲೀ "ಸತ್ಯವಾದಿ"ಯನ್ನು ನಾವು ಪ್ರಕಾರಪಡಿಸುತ್ತಿಲ್ಲ. ವಿಜ್ಞಾಂಶವನ್ನು—ನಾವು ಧನಸಂಗ್ರಹ ಶಕ್ತರಾಗಿಲ್ಲವೆಂಬುದನ್ನೂ, ದೇಶಸೇವಾನ್ವೇಷರಲ್ಲಿ ಬದ್ಧಕಂಕಣರಾಗಿರುವೆವೆಂಬುದನ್ನೂ—ನಾವು ನಿಯಮಿಸಿರುವ ಅತ್ಯಲ್ಪವಾದ ವರ್ಗಣೆಯ ವಸೂಲಿಯಿಂದಲೂ, ಪತ್ರಿಕೆಯಲ್ಲಿ ಪ್ರಕಟವಾಗಿರವ ಲೇಖನಾಂಶಗಳಿಂದಲೂ ಅತಿ ಸುಲಭವಾಗಿ ಮನಗಾಣಬಹುದು. ವರ್ತಮಾನಕಾಲವಾದರೋ ಹೇಗಿರುವುದು? ಪತ್ರಿಕಾಕರ್ತರಿಗೆ ಅನ್ಯಾಂತ ಪ್ರತಿಕೂಲ ವಕ್ಕಾಗಿ! ಈಗ ಆಹ್ವಾಹಕುವುದಾ ಬೆಲೆಯು ಹೆಚ್ಚಾಗಿರುವುದು; ಪತ್ರಕರ್ತರ ಕಷ್ಟಗಳು ಉದ್ರೇಕವಾಗಿರುವುವು

"ಸತ್ಯವಾದಿ" ಯು ಇಷ್ಟು ಸ್ವಲ್ಪಕಾಲದಲ್ಲಿಯೇ ತನ್ನ ಅತ್ಯಲ್ಪವಾದ ವರ್ಗಣೆಯಿಂದ ಸರ್ವರಿಂದಲೂ ಸಾದರವಿಂದ ಸ್ವೀಕರಿಸಲ್ಪಟ್ಟು ಕರ್ನಾಟಕ ವೃತ್ತಪತ್ರಿಕೆಗಳಲ್ಲಿ ಶ್ರೇಷ್ಠತರವಾದ ಸ್ಥಾನವನ್ನೊಂದನ್ನು ಪಡೆದಿರುವುದೊಂದೇ ನಮ್ಮ ಸಂತೋಷ ಅದರಿಂದಲೇ, ಅನರ್ಘವಾದ, ಗಣ್ಯಲೇಖಕುಂದ, ಅನ್ಯಾರ್ಥಿತವಾಗಿ, ಕುತೂಹಲಾವಹವಾದ ಚಿತ್ತಾಕರ್ಷಕ ಲೇಖನಗಳು ಬರುತ್ತಿರುವುವು. ಇದು, ಈಗ ಕನ್ನಡನಾಡುಗಳಲ್ಲೆಲ್ಲಾ ವಿಶೇಷವಾಗಿ ಕನ್ನಡಿಗರ ಕರಕಮಲಗಳನ್ನಲಂಕರಿಸುತ್ತಿರುವುದು.

ನಮಗೆ ಸಾಧಾರಣವಾಗಿ ಕಂಡುಬಂದ ಜಾಹಿರಾತುಗಳನ್ನಲ್ಲವನ್ನೂ ಪ್ರಕಟಿಸುವ ಸಲುವಾಗಿ ವ್ಯಾಪ್ತಿಸಿದರೂ ವರಾಬ್ಜಿಯಾಗಿರುವೆವು ಅದರಿಂದ ಜಾಹಿರಾತುಗಳನ್ನು ಪ್ರಕಟಿಸಬೇಕ್ಷೆಯುಳ್ಳವರೂ ಮತ್ತು ಸಾಂಕ

ಮುಖಾಂತರವೂ ಹಾಗೆ ಪ್ರಕಟಿಸಲು ಈ ಪತ್ರಿಕೆಯಲ್ಲಿ ಹೆಚ್ಚು ಸ್ಥಳವು ದೊರೆಯಲಾರದೆಂದೂ, ಈ ಪತ್ರಿಕೆಯು ಕೇವಲ ವಾಣಿಜ್ಯಾತಿಸಧೇ ಅಲ್ಲ ವೆಂದೂ, ಆದರೆ ಲೋಕಮತವನ್ನು ಜನರಿಗೆ ತಿಳಿಸಲು ಆತ್ಯತ್ತಮವಾದು ದೆಂದೂ ತಿಳಿಯತಕ್ಕದ್ದು.

ಉದಾರಹೃದಯರಾದ ವಾಚಕ ಮಹಾಶಯರೇ! ಕಾಗದದ ಬೆಲೆಯು ಒಂದಕ್ಕೆ ನಾಲ್ಕಾರಷ್ಟು ಏರಿಹೋಗಿರುವುದು. ಇನ್ನು ಮುಂದೆ "ಸತ್ಯವಾದಿ" ಯ ವಾರ್ಷಿಕವರ್ಗಣಿಯನ್ನು (೪ ಆಣೆ) ಮಾತ್ರ ಹೆಚ್ಚಿಸಿರುವೆವು. ಎಂದರೆ-ಇಲ್ಲಿಂದ ಮುಂದೆ ವರ್ಗಣಿದಾರರಾಗಲುಬೇಕ್ಷೆಯುಳ್ಳವರು ವಾರ್ಷಿಕ ವರ್ಗಣಿ (10 ಆಣೆ) ಯನ್ನು ಕೊಡಬೇಕು. ಪರದೇಶದವರಿಗಾದರೆ ಅಂಚೆ ಸೆಜ್ಜೆ ಸೇರಿ (ರೂ. 1-8-0) ಆಗುವುದು.

ಕಾರ್ಯಗೌರವದ ಕಳಸುಬುಗಳನ್ನರಿತವರಾದ ಮಾತೆಮಹಾಶಯರು "ಸತ್ಯವಾದಿ" ಯನ್ನು ನಲಿದು, ಚಿರಜೀವಿಯಾಗಿರಲು ಸಹಾಯಮಾಡಿ ದೇವರೆಪ್ಪೆ, ಭೂಪಾಲರೆಪ್ಪೆಗಳ ಮೂಲಕ ಸುವಿಚಾರಾಭ್ಯುದಯವನ್ನು ಪಡೆಯು ತೆಂದು ಪರಮಾತ್ಮನನ್ನು ವ್ಯಾರ್ಥಿಸುತ್ತಿರುವ,

ಸಂಪಾದಕ.

ಸ್ವದೇಶೀ ವ್ರತ.

ಲಾರ್ಡ್ ಕರ್ಜನ್‌ರವರು ಹಿಂದೂಸ್ಥಾನದ ವೈಸರಾಯಿ ಪದವಿಯಲ್ಲಿ ದ್ದಾಗ ಮಾಡಿದ ಉಪಕಾರದ ಹಂಗಿನಲ್ಲಿ ಸಿಕ್ಕಿದವರೆಲ್ಲರೂ ಅವರನ್ನು ಎಷ್ಟು ಕೊಂಡಾಡಿದರೂ ತೀರದು. ಇವರು ಬಂಗಾಳವನ್ನು ವಿಭಾಗಮಾಡ ಬೇಕೆಂದು ಯತ್ನಿಸಿದ ಸ್ವಾಧಿಲಾಷೆಗೆ ಪ್ರತಿಯಾಗಿ ಹೊಸಪ್ಲೆರ್ಯಾಪ್ಲೂ, ಹೊಸಸ್ಕ್ವೆರ್ಯಾವ್ಲೂ, ಮತ್ತು ಹೊಸವಿಜಯವೂ ಬಂಗಾಳದಲ್ಲಿ ನೆಲೆಸುವು ದೆಂದು ಸ್ವಪ್ನದಲ್ಲಿಯೂ ತಿಳಿದಿರಲಿಲ್ಲ, ಬಂಗಾಳಿಯವರನ್ನು ಪ್ರತ್ಯೇಕಿಸಬೇ ಕೆಂದು ಮಾಡಿದ ಬುದ್ಧಾತ್ಕಾರಕ್ಕೆ ಬದಲಾಗಿ ಬಂಗಾಳಿಯವರಲ್ಲಿ ಐಕಮ ತ್ಯವೂ, ಹೆಚ್ಚಾಗಿ ಸ್ವದೇಶೀ ಪದಾರ್ಥಗಳನ್ನು ಮಾತ್ರ ಉಪಯೋಗಿಸುವು ದಕ್ಕೂ, ವಿದೇಶೀ ಪದಾರ್ಥಗಳನ್ನು ಬಹಿಷ್ಕರಿಸುವುದಕ್ಕೂ ಸ್ವಾರಂಭವಾಗಿ, ಸ್ವದೇಶೀ ಉದ್ಯೋಗಗಳು ಅಭಿವೃದ್ಧಿಯಾಗಿ, ಸ್ವದೇಶೀ ಪದಾರ್ಥಗಳು ಹೇರ ಳವಾಗಿ ದೊರೆತು ಜನರಿಗೆ ಅನುಕೂಲವಾಗಲು ಕಾರಣವಾಯಿತು. ಸ್ವದೇಶೀ ಆಭಿರುಚಿಯು ನೂತನವಾಗಿ ನಿರ್ಮಿತನಾಮದಲ್ಲ, ಅದು ಮೊದಲಿನಿಂ ದಲೂ ಇದ್ದಿತು. ಅದು ಪ್ರಕಟಗೊಂಡಿರಲಿಲ್ಲ ! ಆದರೆ ಲಾರ್ಡ್ ಕರ್ಜನ್ ರವರು, ಇಟ್ಟ ಹೆಜ್ಜೆಯನ್ನು ಹಿಮ್ಮೆಟ್ಟುವಂತೆ ಮಾಡಬೇಕೆಂಬ ಶಪಥವನ್ನಿಲ್ಲಿ ಉಚ್ಚೈಸಿದಂತೆ ಆಯಿತು. ಬಹುಕಾಲದಿಂದಲೂ ಪ್ರಸಿದ್ಧವಾಗಿದ್ದ ಕೈಗಾ ರಿಕೆಯು, ಪ್ರೋತ್ಸಾಹವಿಲ್ಲದೆ ಮಲಿನವಾಗಿ ಹೊಸ ಕೈಗಾರಿಕೆಯನ್ನು ಕಲಿಯಲು ಅವಕಾಶವಿಲ್ಲದಂತಾದ ಒಳಕ ಜನರಿಗೆ ಜ್ಞಾನೋದಯವಾಗಿ ಸ್ವದೇಶೀ ಪದಾರ್ಥಗಳನ್ನು ಉಪಯೋಗಿಸಬೇಕೆಂಬ ಅಗತ್ಯವುಂಟಾಯಿತು. ಇಷ್ಟರಲ್ಲಿಯೇ ಹಿಂದೂಸ್ಥಾನದ ಚಕ್ರವರ್ತಿ ಸಾರ್ವಭೌಮರವರು ದೂರದ್ವೀ ಪದಿಂದ ಬಂಗಾಳ ವಿಭಾಗವನ್ನು ಧಂಗಿಸಿ ಶಾಶ್ವತವಾದ ಕೀರ್ತಿಯನ್ನು ಪಡೆದರು. ಹೀಗೆ ಬಂಗಾಳಕ್ಕೆ ಬಂದಿದ್ದ ಮಹಾಸಂಕಟವು ಪುನಾರವಾ ಗಲು ತಾತ್ಕಾಲಕ್ಕೆ ಸಮಾಧಾನವುಂಟಾಗಿ ಸ್ವದೇಶೀ ವ್ರತಂಕವು ತೆರೆಯ ಹಿಂದೆ ಮರೆಯಾಯಿತು.

ಮರೆತುಹೋಗಿದ್ದ ನಿಚಾರದಲ್ಲಿ ಮದರಾಸ್ ಗೌರ್ನರಾದ ಲಾರ್ಡ್ ಪೆಂಟ್‌ಲೆಂಡ್‌ರವರು ಮಾಡಿದ ಕರಣನುತ್ಕಾರದ ಪರಾಕ್ರಮವು ಸ್ವದೇಶೀ ಸಂಕಲ್ಪವನ್ನು ಪುನಃ ನಿದ್ರೆಯಿಂದ ಎಬ್ಬಿಸಿಟ್ಟು ಎಚ್ಚರಮಾಡಿ ದೃಢವಾಗಿ ನಿಲ್ಲುವಂತೆ ಮಾಡಿದುದಕ್ಕೆ ಇವರನ್ನು ಒಮ್ಮತವಾಗಿ ಮಂಡಿಸಬೇಕು! ಹಿಂದೂಸ್ಥಾನದ ನಿರಾಸಿಗಳನ್ನು ಕುರಿತು ಸ್ವರಾಜ್ಯ ಮಿತ್ರಾಂಪನ್ನು ನಮೋ ರ್ಣವಾಗಿ ಮರೆತುಬಿಡಬೇಕೆಂಬ ಕಮಲಾಪವು ಇವರ ಬಂಡಾಸೊಂದು ಸರಾಕ್ಕೆನು. ಆಃ! ಎಂತಹ ಬುದ್ಧಿವಾದ! ಹಿಂದೂದೇಶವು ಮಾತ್ರ ಇದನ್ನು ಪೈಶಾಚ್ಯತೆಯಿಂದ ಬಾಲಿಸುವುದಿಲ್ಲವಲ್ಲ !

ಈಗ ನಡೆಯುವ ಮಹಾಯುದ್ಧವು, ಅನೇಕ ಪ್ರಶ್ನೆಗಳನ್ನು ಜಜ್ಜೇ ಮುಂದುಮುಂದಕ್ಕೆ ತಂಬಿಟ್ಟಿರುತ್ತಿದೆ ಪ್ರಪಂಚದಲ್ಲೆಲ್ಲಾ ಪ್ರಜಾಪ್ರಭುತ್ವ ವನ್ನು ಪಡೆಯುವುದೇ ಅನೇಕರಲ್ಲಿ ವ್ಯಾಮುಖ್ಯವಾದುದು. ಮನುಷ್ಯತ್ವಕ್ಕೆ ಸಾಮಾನ್ಯವಾಗಿ ಹೊಸ ಆಶೆಯೂ, ಹೊಸ ಊಹೆಯೂ ಉಂಟಾಗಿ ಭರ ಪೂರಿತವಾಗಿದೆ. ಜಕ್ಕಾಧಿಪತ್ಯದ ನಲುವಾಗಿ ಭರ ಪೂರಿತವು, ತನ್ನ ತನುಮನಧನವನ್ನರ್ಪಿಸಿ, ರಕ್ತವನ್ನು ಸುರಿಸು, ಭಂಡಾರ ವನ್ನು ಏರಿದುಸೂಡಿ ಬಲಾಢ್ಯವಾದ ಆಂಗ್ಲೇಯ ರಾಜನೀತಿವಿಶಾರ ದರಿಂದ ನಿಷ್ಕೃಷ್ಟವಾದ ಮಕ್ತ ಆಹ್ಲಾದಕರವಾದ ಆಶ್ಚರ್ಯವನ್ನು ಗೆದ್ದುಕೊಂಡಿದೆ! ಇದೇ ಸಮಯದಲ್ಲಿಯೇ ಭರತವರ್ಷದ ನಿವಾಸಿಗಳು, ರಾಜಕೀಯ ಆಕಳಿಕೆಗಳಲ್ಲಿ ತಮಗಿರುವ ಹಕ್ಕುಬಾಧ್ಯತೆಗಳನ್ನು ಮುಂದೆ ಸಾಗಿರುವುದಕ್ಕೆ ಸರ್ವಪ್ರಯತ್ನವನ್ನೂ ಮಾಡಿದ್ದಾರೆ. ಈ ಜಗತ್ ಚಕ್ರಾಧಿ ಪತ್ಯಗಳೇ, ಕಲ್ಮಷರಹಿತವಾಗಿ ಶುದ್ಧವಾಗುವಕಾಲದಲ್ಲಿ ಭರತಖಂಡವು ಬಹಿಸಲಾತದಂತೆ ಪರಾಭೂತವಿಂದ ತಪ್ಪಿಸಿಕೊಂಡು ಇತರ ಜನಾಂಗಗಳ ಮಧ್ಯದಲ್ಲಿ ತನಗೆ ತಕ್ಕ ಯೋಗ್ಯತೆಯನ್ನೂ, ಗೌರವವನ್ನೂ ಉಂಟುಮಾ ಡುವಷ್ಟಾಸದ ಸಲುವಾಗಿ ಅಧಿಕಾರವಿಡುವುದು ಬಹುಹೆಚ್ಚೆ ? ಸ್ವಾತಂತ್ರ್ಯ ಕ್ಕೋಸುಗ ನಡೆಯುತ್ತಿರುವ ಈ ಘೋರಯುದ್ಧದಲ್ಲಿ, ಸರ್ವರ ಸೌಖ್ಯ ಕ್ಕೂ ಸರ್ವರ ಆತ್ಮಸ್ವಾತಂತ್ರ್ಯಕ್ಕೂ ಕಾರಣವಾದ ಮಾನವಸ್ವಾತಂತ್ರ್ಯವೇಟಾಗ ಲೆಂದು ಭರತವರ್ಷವು ಸಾರಿಸಾರಿ ಹೇಳುವುದು ಯೋಗ್ಯತೆಗೆ ತಕ್ಕು ದಾಗಿಲ್ಲವೆ ?

ಯುದ್ಧವಾರ್ತೆ.

ಬ್ರಿಟಿಷರು ಕಳೆದವಾರ ತಾವು ಶತ್ರುಗಳಿಂದ ಗೆದ್ದುಕೊಂಡಿದ್ದ ಸ್ಥಳ ಪೆಲ್ಲವನ್ನೂ ಭದ್ರಪಡಿಸಿಕೊಳ್ಳುತ್ತಿರುವರು. ಈ ಪ್ರದೇಶಗಳಲ್ಲಿ ಬ್ರಿಟಿಷರಿಗೆ ವಿಶೇಷ ಯುದ್ಧಸಾಮಗ್ರಿಗಳೂ, ಆಹಾರಪದಾರ್ಥಗಳೂ ಮತ್ತು ಶತ್ರುಸೈನಿ ಕರೂ ಸೆರೆ ಸಿಕ್ಕಿದರು. ಜರ್ಮನಿಯವರನ್ನು ಸೋತ ಪ್ರದೇಶಗಳನ್ನು ಮತ್ತೆ ಗೆದ್ದುಕೊಳ್ಳಬೇಕೆಂದು ಅಪಾರವಾದ ಸೈನ್ಯವನ್ನೂ ಮತ್ತು ಸಿದ್ಧಾಂಗಿಗಳನ್ನೂ ಸೇರಿಸಿಕೊಂಡು ನುಗ್ಗಿದರು. ಆದರೆ ಕೊನೆಗೆ ಓಡಿಹೋಗಬೇಕಾಯಿತು. ಶತ್ರುಸೈನಿಕರು ಪೆಟ್ಟಿಯಂ ಸೈನಿಕರಿಂದಲೂ ಹಿಂದಕ್ಕೆ ಓಡಿಸಲ್ಪಡುತ್ತಿರು ವರು ಫ್ರೆಂಚರು ಸಾಲಿಲ್ಲ ನರ್ಡೋನ್‌ಬಳಿ ಜರ್ಮನರು ಬಹಳ ಹೋರಾಡು ತ್ತಿರುವರು. ರಷ್ಯಾದಲ್ಲಿ ಗಲೆಷ್ಯೆಯು ದಿನದಿನ ಅಭಿವೃದ್ಧಿಯನ್ನು ಹೊಂದು ತ್ತಲೇ ಇರುವುದು. ಇವರು ಶೀಘ್ರದಲ್ಲಿಯೇ ಜರ್ಮನಿಯವರೊಂದಿಗೆ ಕರಾರು ಮಾಡಿಕೊಳ್ಳುವುದರಲ್ಲಿರುವರು. ಸೈಬೀರಿಯವು ಸ್ವತಂತ್ರ ಸೀಮೆಯಾಗು ವಂತೆ, ರಷ್ಯಾದವರು ಮಾಡಿಕೊಳ್ಳುತ್ತ ಕರಾರುವಲ್ಲಿ ಮಿತ್ರಮುಂಡಲಿಯವರ ಪ್ರತಿಜ್ಞೆಗೆ ವಿರುದ್ಧವಾಗಿರುವುದರಿಂದ ಕರಾರುಪಾಡತಕೂಡದೆಂದು ರಷ್ಯನಿಗೆ ಎಚ್ಚರಿಸುತ್ತಿರುತ್ತಾರೆ. ಇದರಿಂದ ಕಲಾಪಗಳು ನಿಲ್ಲುವಂತಿಲ್ಲ. ಸೈಬೀರಿಯಾ ಎಂಬ ಅನೇಕ ರಾಜಕುಲವರಿಯ ಗಂಡಸಿನ ವೇಷ ಧರಿಸಿ ಇಂಗ್ಲೆಂಡಿಗೆ ತಪ್ಪಿಸಿ ಕೊಂಡು ಹೋಗಿರುವನೆಂಬೂ ಅಲ್ಲಿಂದ ಆಸ್ಟ್ರಿಯಾಕ್ಕೆ ಹೋಗುವಳೆಂದೂ ತಿಳಿದುಬಂದಿರುತ್ತದೆ. ಇತ್ತೀಚೆಯವರು ನಿವೃತ್ತಿಯಾದವರಾದ ಸರಾಕ್ಕರಿಂದ ಜರ್ಮನಿಸೈನಿಕರನ್ನು ಬಹುಸಾವಧಾನದಿಯನ್ನು ದಾಟಿಬಂತೆ ಕಾಣಾತಿ, ಹಿಂದಕ್ಕೆ ಓಡಿಸಿರುವರು. ಪಾಲಸ್ತೀನ್ ಸೀಮೆಯಲ್ಲಿ ಬ್ರಿಟಿಷ್ ಸೈನ್ಯವು ಜೆರೂಸ ಲೇಮಿಗೆ ಮೂರುನಿಮಿಂ ಹಾದಿಯಲ್ಲಿನ್ನ ಒಂದು ದೊಡ್ಡ ಶೈಲ್ಯೆ ಶೈತಿಸ್ಥನ್ನು ಆಲ್ಲಿದ್ದ ಟರ್ಕಿ ಸೈನಿಕರನ್ನು ಸೋಲಿಸಿ, ಸರಸಬಿಸಿತೊಂಡಿರುವುದು. ಇತ್ತೀ ಕಾಪಲ್ಲಿದ್ದ ಜರ್ಮನಿಯ ಮೂರುಸಾಲು ಸೈನ್ಯವೆಲ್ಲವೂ ಬ್ರಿಟಿಷರ ವಶವಾಗಿ ಪ್ರತಿಷ್ಠಾಗವನ್ನೂ ಗೆದ್ದುಕೊಂಡಿರುವುದುಂದ ಅಲ್ಲಿ ಯುದ್ಧವು ಕೊನೆ ಗಾಣ್ಣುವಂತಿದೆ.

ಕಳೆದ ವಾರದಿಂದೀಚೆಗೆ ಮಿತ್ರಮಂಡಲಿಯವರ ತೀರವಪ್ಪಣಗಳಿಗೆ ಪ್ರಯಾಣವಾಗುತ್ತಿದ್ದ ಹಡಗುಗಳಲ್ಲಿ 18 ದೊಡ್ಡವೂ, 9 ಸಣ್ಣವೂ ಮುಳುಗಿಸಲ್ಪಟ್ಟವು. ಜರ್ಮನಿಯವರೊಂದು ಟಾರ್ಪಿಡೊವು ಮೈರ್ ಎಂಬ ಸಿಡಿಮದ್ದಿನ ಗುಂಡಿಗೆ ತಗಲಿ ನಾಶವಾಯಿತು.

ವೃತ್ತಾಂತ ಸಂಗ್ರಹ.

ನಮ್ಮ ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರು ಇಂಡಿಯಾ ಸ್ಟೇಟ್ ಸೆಕ್ರಟರಿಗಳಾದ ಮಿ|| ಮಾಂಟೇಗರವರ ಸಂದರ್ಶನಕ್ಕೆಸಲುವಾಗಿ ಕಳೆದ ಶುಕ್ರವಾರ ಕಲಕತ್ತಾನಿಗೆ ದಯಮಾಡಿಸಿದರೆಂದು ತಿಳಿದುಬಂದಿರುತ್ತದೆ.

ರಾಜಧಾನಿಯಲ್ಲಿ ಕಳೆದ 7 ನೇ ತಾ|| ಶುಕ್ರವಾರದಿಂದ 'ಅವರ್ ಡೆ' ಫುಟ್ಬಿಗೆ ಪ್ರಯೆಳಿಂದ ರೈತ್ಸ ಸಂಘಾದಿಗಳು ಅನೇಕ ವಿನೋದಗಳನ್ನು ಟೌನ್ ಹಾಲಿನಲ್ಲಿ ನಡಿಸುತ್ತಿರುವರು. ಮರು ಬರುವ 12 ನೇ ತಾ|| 'ಅವರ್ ಡೆ' ಯನ್ನು ಆಚರಿಸುವಸಲುವಾಗಿ ಪ್ರತಿಯೊಂದು ಇಲಾಖೆಗೂ ರಜವನ್ನು ಕೊಡುವರು.

ಮೈಸೂರ್ ಸರಕಾರದವರು ರಂಗರಂಗದಲ್ಲಿರುವ ಯೋಧರಿಗೆ ಕಂಬಳಿಗಳನ್ನಿದಗಿಸುವುದಕ್ಕೋಸುಗ ಬೆಂಗಳೂರು ಡಿ|| ಎ|| ಸೂಪರಿಂಟೆಂಡೆಂಟರನ್ನು ನೇಮಕಮಾಡಿರುತ್ತಾರೆ.

ಮೈಸೂರು ಯೂನಿವರ್ಸಿಟಿ ಸೆನೆಟ್ ಮೀಟಿಂಗ್ ಕಳೆದ ತಿಂಗಳು 28 ನೇ ತಾರೀಖು ನಡೆಯಿತು. ಅಲ್ಲಿ ಪುರಾತನವಾದ ಸಂಸ್ಕೃತ ಭಾಷೆಗೆ ಕೊಟ್ಟ ಆಗೌರವವನ್ನು ಕುರಿತು ವಿಷಾದಿಸುತ್ತೇವೆ. ಇದರ ವಿಷಯಾಗಿ ನಾವಿಂದು ಸಂಜಿಕೆಯಲ್ಲಿ ವಿವೇಚಿಸುವೆವು.

ಭರತಖಂಡದಲ್ಲಿ ಬೆಳೆಯುವ ಯಾವಯಾವ ಪದಾರ್ಥಗಳಿಂದ ಎಂತೆಂತಹ ಆಹಾರ ಸಾಮಗ್ರಿಗಳನ್ನು ಮಾಡಿಒಹುದೆಂಬುದನ್ನು ತೋರಿಸುವ ಒಂದು ಪ್ರದರ್ಶನವನ್ನು ನಡೆಸುತ್ತಿರುವರು. ಅಲ್ಲಿಗೆ ಲಕ್ಷಾಂತರ ಪ್ರಜೆಗಳು ಹೋಗಿ ನೋಡಿಬರುತ್ತಿರುವರು.

ತಿರುವಾಂಕೂರ್ ಸಂಸ್ಥಾನದಲ್ಲಿ ವಿಶ್ವವಿದ್ಯಾಲಯ ಒಂದನ್ನು ಸ್ಥಾಪಿಸುವ ವಿಷಯಗಳನ್ನು ಪರ್ಯಾಲೋಚಿಸುವಸಲುವಾಗಿ ಒಂದು ಸಂಘವನ್ನು ನೇರಿರುತ್ತಾರೆ

ಮಿ|| ಮಾಂಟೇಗರವರು ಮುದರಾಸಿಗೆ ಈ ತಿಂಗಳು 18 ನೇ ತಾರೀಖು ಬರುವರೆಂದು ಸುದ್ದಿ ಇರುವುದು.

ಡಿ|| ಸರ್. ಜಗದೀಶ ಚಂದ್ರಬೋಸರವರು "ಬೋಸ್ ರಿಸರ್ಚ್ ಇನ್ಸ್ಟಿಟ್ಯೂಟ್" ಎಂಬ ವಿಜ್ಞಾನಶಾಲೆಯನ್ನು ಕಳೆದ ತಿಂಗಳು 30 ನೇ ತಾ|| ಕಲಕತ್ತಾದಲ್ಲಿ ಪ್ರತಿಷ್ಠೆಸಿದರು.

ನಮ್ಮ ಶ್ರೀಮದ್ ಪ.ಪಾರಾಜರವರು ಯುದ್ಧಕ್ಕೆ ಮಾಡಿದ ಉದಾರ ದಾನ ನಾನಾವಿಧ ಸಹಾಯಕ್ಕಾಗಿ ಬ್ರಿಟಿಸ್ ಸಾರ್ವಭೌಮರು ಅವರಿಗೆ (K. G. C) ನೈಟ್‌ಆಫ್ ದಿ ಗ್ರ್ಯಾಂಡ್‌ಕ್ರಾಸ್ ಎಂಬ ಬಿರುದನ್ನು ದಯಪಾಲಿಸಿರುವರು.

ಇದೇಕೆ ಇಷ್ಟು ಕೋಲಾಹಲ?

(Communicated.)

(ಹಿಂದಿನ ಸಂಜಿಕೆಯಿಂದ ಮುಂದಕ್ಕೆ ಸಾಗಿದುದು.)

ದಕ್ಷಿಣದೇಶದ ಕೆಲವು ಊರುಗಳ ಸ್ಥಳಿ ಮೈಸೂರಿಗೂ ಬೀಸಿತು. ಅಲ್ಲಿನಂತೆ ಇಲ್ಲಿಯೂ ಬ್ರಾಹ್ಮದ್ವೇಷದ ಸಿಡಿಗಳು ಏರಂಭವಾದುವು. ಅಲ್ಲಿ ಕೆಲವು ಕಾರ್ಯಸಾಧಕಶಕ್ತಿಯನ್ನು ತೊಂದಿದವರ ಸ್ವಲ್ಪಶಕ್ತಿಯೂ ನಮ್ಮಲ್ಲಿ ಕೆಲವರಿಗೆ ಬಂದಿತು. ಇಂತಹ ಶಕ್ತಿಯನ್ನು ಹೊಂದಿದವರಲ್ಲಿ ಮಿ||ರಾ|| ಒಬ್ಬ ಮಹನೀಯರೊಬ್ಬರು; ಜೆಗರೂಪಿನ 'ಒಕ್ಕಲಿಗರ ಪತ್ರಿಕೆ' ಯೊಂದು, ಗುಬ್ಬಿಯಿನ 'ಮೈಸೂರು ಸ್ಟಾರ್' ಒಂದು. ಇದಕ್ಕೆ ವ್ಯತಿರಿಕ್ತವಾದ ಶಕ್ತಿಯನ್ನು ತೊಂದಿದ ಮೈಸೂರಿನ ವೈದ್ಯಪಿತಾಮಹರ 'ಸಾಧ್ವಿ' ಸಂಪದ ಕುದಿಯ 'ಮೈಸೂರು ಸೋಷ್ಯಲಿಟ' ಗಳು. ಒಟ್ಟಿನಲ್ಲಿ ಒಂದೇ ಒಂದು ಒಕ್ಕಲೂಪಾಯಿಸಿಂದ ಹುಟ್ಟಿದ ಬ್ರಾಹ್ಮಣ ಬ್ರಾಹ್ಮಣೇತರ ಪ್ರಶ್ನೆಯು ಶ್ರೀಯುತ ರಟ್ಟಿ ಮುಖಾಶಯರ ನೆಪದಲ್ಲಿ ಪೆಟ್ಟಿ ದೇಶದಲ್ಲೆಲ್ಲಾ ಹಬಿತು. ಜಳಪಳೆಯು ಅತಿಯಾಯಿತು. ಮಿ|| ರಟ್ಟಿಯವರನ್ನು ಇನಸ್ಪೆಕ್ಟರ್ ಜನರಲ್‌ರವರನ್ನಾಗಿ ಮಾಡುವರೆಂಬ ವದಂತಿಯೊಡನೇ ರಾಜಧಾನಿಯಲ್ಲಿ ಎರಡು ಪಂಗಡಗಳಾದವಂತೆ. "ಮಿ|| ರಟ್ಟಿಯವರು ಬ್ರಾಹ್ಮಣರಲ್ಲ; ಅವರನ್ನು ವಿದ್ಯಾಭ್ಯಾಸದ ಇಲಾಖೆಯ ಮುಖ್ಯಾಧಿಕಾರಿಗಳನ್ನಾಗಿ ಮಾಡಕೂಡದೆಂದು ಬ್ರಾಹ್ಮಣರು ಹೇಳುವರು," ಎಂದು ಕೆಲವರು ಹೇಳುವಂತೆ ಎಲ್ಲಿ? 'ಸಾಧ್ವಿ' ಆಥವಾ 'ಸಂಪದಭ್ಯುದಯ' ಗಳಲ್ಲಿ ಬಂದುದು ಬ್ರಾಹ್ಮಣವರ್ಗದ ವಿತೆತೆಂದಾಧಿಸ್ಯಾಯವೋ? ಮಾಗೆನ್ನುವವಕ್ಷದಲ್ಲಿ, ಹಿಂದೊಮ್ಮೆ ಮಿ|| ರಟ್ಟಿ ಫೊಲೆಗಳು ವಿದ್ಯಾಭ್ಯಾಸದ ಬಿ. ಎ ಜಿ. ಯವರಾಗಿ ಕೆಲಸ ನೋಡಿದಾಗ ಈ ವಿದ್ವಾದ್ಧಿಸ್ಯಾಯವೇಕೆ ಬರಲಿಲ್ಲ? ಮಿ|| ರಟ್ಟಿಯವರು ವಿದ್ಯಾಭ್ಯಾಸದ ಇ. ಜಿ. ಯವರಾಗಬಾರದೆಂದು ಎಷ್ಟುಮಂದಿ ಬ್ರಾಹ್ಮಣರು ಎಷ್ಟುಸ್ಥಳಗಳಲ್ಲಿ ಸಭೆಮಾಡಿ ಪ್ರತಿಭಟಿಸಿದರು? ಪ್ರತಿಭಟಿಸುತ್ತಿರುವರು? ಪತ್ರಿಕೆಯೆಲ್ಲಿ ಒಬ್ಬನು ಒಂದು ಲೇಖನವನ್ನು ಬರೆದಮಾತ್ರಕ್ಕೆ, ಅದನಾ ಒಂದು ಸುಳ್ಳುಸಂಗತಿಯನ್ನು ನಿಜವೆಂದು ಒಪೆಮಕೊಂಡ ಮಾತ್ರಕ್ಕೆ ಅದು ನಿಜವಾದ ಲೋಕಮತವಾಯಿತೆ? ಯಾವ ಬ್ರಾಹ್ಮಣರಾದರೂ ಮಿ|| ರಟ್ಟಿ ಸಾಮೇಬರು ಕೇವಲ ಬ್ರಾಹ್ಮಣೇತರರಾದ್ದರಿಂದ ಅವರನ್ನು ವಿದ್ಯಾಭ್ಯಾಸದ ಐ. ಜಿ. ಯವರನ್ನಾಗಿ ಮಾಡಕೂಡದೆಂದು ಹೇಳಿರುವನೇನು! ಹಾಗಿದ್ದರೆ ಅವನು ಬ್ರಾಹ್ಮಣಶಬ್ದಕ್ಕೇ ಅರ್ಹನಲ್ಲ.

ಮಿ|| ರಟ್ಟೀನಾಮೇಬರಿಗೆ ಎಂಟರ್‌ಪೇಕ್ಷೋಟು ಕೊಡಲು ಮೈಸೂರಿನ ಮಹಾಜನರನೇಕರು ಒಪ್ಪದಿರಬಹುದು. ಅದಾದರೂ ಮಿ|| ರಟ್ಟಿಯವರು ಬ್ರಾಹ್ಮಣೇತರರಾದ್ದರಿಂದಲ್ಲ; ಈಗೇಕೆಂದಿರಬಹುದು. ಈ ವಿಚಾರದಲ್ಲಿ 'ಮೈಸೂರು ಸ್ಟಾರ್' ಪತ್ರಿಕಾಕರ್ತರು ತಪ್ಪಾದ ಅಭಿಪ್ರಾಯವನ್ನು ಹೊಂದಿರುವರು. ಅವರ ೭ ನೆಯ ತಾರೀಖಿನ ಪತ್ರಿಕೆಯ ಅಗ್ರಲೇಖನವು ಕೇವಲ ವಿಕಪಕ್ಷೀಯವಾಗಿದೆ. ಪ್ರಪಂಚದಲ್ಲಿ ಯಾವ ಹೊಸವಿಷಯವು ಜರ್ಜರಿಗೆಬಂದರೂ ಅನುಮೋದಿಸುವರು ಕೆಲವರೂ, ತಿರಸ್ಕರಿಸುವವರು ಕೆಲವರೂ ಇದ್ದೇ ಇರುವರು ಇದು ಎಂದಿಗೂಶಪ್ಪದ್ದಲ್ಲ! ನಿನ್ನ ಮಾತನ್ನು ಕೇರದವರೆಲ್ಲರೂ ಪೇಡಿಗಳೆಂದಾಗಲೀ, ನ್ಯಾಯವಿರೋಧಿಗಳೆಂದಾಗಲೀ, ಕುಯುಕ್ತಿಗಳೆಂದಾಗಲೀ ಹೇಳುವವನು ತನ್ನ ಘನತೆಯನ್ನು ಕಳೆದುಕೊಳ್ಳುವನೇ ವಿನಾ ಬೇರೆಯಿಲ್ಲ!!! ನಾನು ಸತ್ಯವಂತನಾದರೂ "ನಾನು ಸತ್ಯವಂತ" ಎಂದು ಸ್ವರ್ಣಾಕ್ಷರಗಳನ್ನು ಬರೆದು ಎದೆಯಮೇಲೆ ಹಾಕಿಕೊಳ್ಳಬಹುದೇ? ನನ್ನ ಸತ್ಯವನ್ನು ನಾನು ನಡವಳಿಯಲ್ಲಿ ತೋರಿಸಬೇಕೆಂದು ತೋರುತ್ತೆ. ಕ್ಷುಲ್ಲಕಳುಮತ್ಸರಗಳಿಗೂ, ಕುಯುಕ್ತಿಲೇಖನಗಳಿಗೂ ಉತ್ತರಕ್ರಿಯೆಮಾಡಿಗಳನ್ನು ಮಾಡುವವರಾರು? ಪತ್ರಾರುವರ್ಷಗಳ ಒಂದೆ ಬ್ರಾಹ್ಮಣರಾಗಬೇಕೆಂದು ಒಡವಾಡಿದ 'ಸ್ಟಾರ್' ಪತ್ರಿಕರ್ತಮಹಾಶಯರು ಈಗ ಹಿಂದುಳಿದವರೊ, ಬ್ರಾಹ್ಮಣವರ್ಗದಲ್ಲಿ ಹಿಂದುಳಿದವರೊ? ಬ್ರಾಹ್ಮಣ್ಯಕ್ಕೆ ಬಡಿಪಾಡಿ ಮಾಡಿದ 'ಸ್ಟಾರ್' ಪತ್ರಿಕರ್ತರ ವಿತ್ಯಗಳಿಗೆ ಅಗ್ರತಾಂಬೂಲವನ್ನು ಕೊಡುವ ವೀರಶೈವ ಮಹಾಶಯರು ಇವರ ಮಾರ್ಗದಲ್ಲಡಿಯಿಡುತ್ತಾರೊ? ನಮ್ಮ ನೇರನ ಚಳವಳಿಯನ್ನು ದುರ್ಬಲಿಸ್ಯಾಯಕ್ಕೆ ಕಾರಣವನ್ನೂ, ತಿಳಿದ ಸರ್ವಜನರನ್ನೂ ಸಾವಧಾನ್ಯದೃಷ್ಟಿಯಿಂದ ನೋಡುವ ಧೀರವಾಡವ 'ಶುಭೋದಯ' ಬ್ರಾಹ್ಮಣ ಪತ್ರಿಕಾಕರ್ತರು ತಮ್ಮ ಪತ್ರಿಕೆಯಲ್ಲಿ 'ಸ್ಟಾರ್' ಲೇಖನವನ್ನು ನೋಡಿದಮೇಲೆ "ಮುಂದೆ ಬರುತ್ತಿರುವ ಲಿಂಗಪಂಕ ಜನಾಂಗವನ್ನು ಇತರರವಾಗಿ ಎಂದುಳಿದವರೊಡನೆ ಸಂಯೋಜಿಸುವುದು ಉಚಿತವಾದು ಮಾತ್ರವು ಮುಂದಾದವರನ್ನು ಕೂಡಿಕೊಳ್ಳಲಿಚ್ಛಿಸುವರು ಆ ಜನರಲ್ಲಿ ದೋಷ-ನ್ವೇಷಣವನ್ನು ಮಾಡುವುದಕ್ಕೆ ಮುಂಚಿತವಾಗಿ ಸಮದೃಷ್ಟಿಯ ಸುದರ್ಶನಗಳನ್ನು ಹಾಕಿಕೊಳ್ಳಬೇಕು ..... ಸಂಪಾದಕರು ಕೆಲವೊಂದು ಭಾವುಕಕಾರಣದಿಂದ ಈಗೆ ಬರೆದರೆಂದು ನಾವು ಊಹಿಸುವುದಿಲ್ಲವಾದರೂ ವಿಷಯಾನುಸಾರದ ಸರಣಿಯಲ್ಲಿ ಕೊಂಡ ದೋಷನಾಯಿಂದುಹೇಳಿಯಿರುವರು" ಎಂದು ಬರೆದಿರುತ್ತಾರೆ ಇದು ಸಮ್ಮತವೆ? [ಸರೋಜ]

ಅಂಬೆಯ ಮನೆ.

(All Rights Reserved.)

(ಹಿಂದಿನ ಸಂಚಿಕೆಯಿಂದ ಮುಂದಕ್ಕೆ ಸಾಗಿದುದು)

ಕಾವಲುಗಾರ—ಅದು ಹಾಗಲ್ಲ. ಹೊತ್ತಿಗೆಸರಿಯಾಗಿ ನಾನು ಘಂಟೆಹೊಡೆಯುವೆನು.

ಅಮಲ—ನಿಶ್ಚಯವಾಗಿಯೂ ಘಂಟೆಶಬ್ದವನ್ನು ಕೇಳಲು ಪ್ರೀತಿಸುತ್ತೇನೆ. ಮಧ್ಯಾಹ್ನದಲ್ಲಿ ನಾವು ಊಟಮಾಡಿ, ಜಕ್ಕಪ್ಪನು ತನ್ನ ಕಾರ್ಯಕ್ಕೆ ಹೊರಟುಹೋಗಿ, ಚಿಕ್ಕಮ್ಮನು "ರಾಮಾಯಣ" ವನ್ನು ಓದಿ, ನಿದ್ರೆ ಮಾಡಿ, ಮತ್ತು ನನ್ನ ನಾಯಿಯು ತನ್ನ ಬಾಲದ ಸಿಂಬಿಯಲ್ಲಿ ಮುಖವನ್ನಿಟ್ಟುಕೊಂಡು ಮಲಗಿರುವಾಗ, ನೀನು ಹೊಡೆಯುವ ಘಂಟೆಯ "ಘಣ್ ಘಣ್, ಘಣಾಂ" ಎಂಬ ಶಬ್ದವನ್ನು ಕೇಳುತ್ತೇನೆ. ನೀನು ಏಕೆಘಂಟೆ ಹೊಡೆಯುತ್ತೀಯೆ? ಹೇಳು.

ಕಾವಲುಗಾರ—"ಅಯ್ಯನಮನಿಲ್ಲದ್ದರೆ ಅಮಾವಾಸ್ಯೆ ನಿಲ್ಲುವುದಿಲ್ಲ" ಎಂಬ ನಾಣ್ನುಡಿಯನ್ನು ಜನರಿಗೆ ಪ್ರಚಾರಮಾಡುವುದಕ್ಕಾಗಿ ನಾನು ಘಂಟೆ ಹೊಡೆಯುವೆನು. ಕಾಲವು ಯಾರನ್ನೂ ಕಾಯದೆ ಹೋಗುವುದು.

ಅಮಲ—, ಬ್ಲಿಗೆ, ಯ್ಯಾವದೇಕಕ್ಕೆ?

ಕಾವಲುಗಾರ—ಅದು ಯಾರಿಗೂ ತಿಳಿಯದು.

ಅಮಲ—ಹಾಗಾದರೆ, ಯಾರೂಅಲ್ಲಿಗೆ ಹೋಗಿಲ್ಲವೆಂದು ನಾನು ಊಹಿಸುತ್ತೇನೆ ನಾನು ಕಾಲದೊಡನೆ ಯಾರೂ ಹೋಗದ ದೇಶಕ್ಕೆ ಹಾರಿಹೋಗಲು ಆಶೆಪಟ್ಟಿಸುತ್ತೇನೆ.

ಕಾವಲುಗಾರ—ಮಗು, ನಾವೆಲ್ಲರೂ ಒಂದು ದಿವಸ ಅಲ್ಲಿಗೆ ಹೋಗಲೇಬೇಕು.

ಅಮಲ—ನಾನುವೆ?

ಕಾವಲುಗಾರ—ಹೌದು ನೀನೂವೆ?

ಅಮಲ—ಆದರೆ ವೈದ್ಯನು ನನ್ನನ್ನು ಹೊರಗೆ ಬಿಡುವುದಿಲ್ಲವಲ್ಲ!

ಕಾವಲುಗಾರ—ಒಂದು ದಿನನ ವೈದ್ಯನೆ ನಿನ್ನ ಕೈಹಿಡಿದುಕೊಂಡು ಅಲ್ಲಿಗೆ ಕರದುಕೊಂಡು ಹೋಗಬಹುದು. (ಸರೇಷ.)

TO ADVERTISERS.

Advertisers are requested to note that ONLY this page is intended for Advertisements. After the space is filled up, no advertisements are received.

"ಸತ್ಯವಾದಿ"

ವಾರ್ಷಿಕ ಚಂದಾ—ಸ್ವಳದವರಿಗೆ 10 ಆಣೆ. ಪರಸ್ಥಳದವರಿಗೆ ರೂ. 1 ಆಣೆ 8

ಜಾತ್ಯಭಿವಾರಿಗೆ:—ದೇಶೋನ್ನತಿಗೆ ಸಂಬಂಧಪಟ್ಟ ಜಾತ್ಯಭಿಗಳೆಲ್ಲವೂ ಪ್ರಕಟಿಸಲ್ಪಡುವುವು. ಇತರ ವಿಷಯಗಳನ್ನು ಬರೆದು ತಿಳಿಯಬಹುದು.

ಮ್ಯಾನೇಜರ್, "ಸತ್ಯವಾದಿ," ಮೈಸೂರು.

ಚಂದ್ರಕಾಂತ ತೈಲ.

3-4 ದಿವಸಗಳನ್ನು ಸೇವಿಸುವುದರಿಂದಲೇ ಧನುರ್ವಾಯು, ಪಾಣಾಮಜ್ಜಿ, ಮೇಹ ಸಂಬಂಧವಾದ ಬಾಧ್ಯಗಳು, ನುಗ್ಗಳ ಪಿಸಿಮಂದ, ಜ್ವರ, ಬಿಬ್ಬು ಮುಂತಾದವುಗಳು ಗುಣವಡುತ್ತವೆ. ಕ್ರಯ ಸೀಸೆ 1ಕ್ಕೆ 1 ಆಣೆ.

[೨-10] ನಮ್ಮ ವ್ಯಾಪಾರ:-ಚಂದ್ರಕಾಂತ ಡಿಪೋ, ಮೈಸೂರು.

ಲೋವರ್ ಸೆಕೆಂಡರಿ ಸಂಸ್ಕೃತಪಠಿತೆ.

ಇದನ್ನು ಒಂದೆರಡು ಘಂಟೆಗಳೊಳಗಿದರೂ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿಸುವುದು. ಕ್ರಯ 4 ಆಣೆ.

ಮೈಸೂರು ವಿದ್ಯಾಪಿಂಗ್ ಹೌಸ್, ಮೈಸೂರು

ಸ್ತ್ರೀಯರಿಗೆ ಕೇಶಭೂಷಣವೇ ಭೂಷಣ!!

ಕಾಮಿನಿಯ ತೈಲ. (ರಿಜಿಸ್ಟರ್ಡ್.)

ಈ ತೈಲವು ಪರಿಶುದ್ಧವಾದ ಮತ್ತು ಅಮೂಲ್ಯವಾದ ಪದಾರ್ಥಗಳಿಂದಲೂ ಪ್ರಸಿದ್ಧವಾಗಿರುತ್ತದೆ. ಕೂದಲು ಉದುರುತ್ತಿದ್ದರೆ ಅದನ್ನು ನಿಲ್ಲಿಸುತ್ತದೆ. ತಲೆಯಲ್ಲಿ ಹುಣ್ಣು ಬಾರದಂತೆ ಕಾಪಾಡುತ್ತದೆ. ತಲೆನೋವನ್ನು ಬೇಗನೆ ಬಿಡಿಸುತ್ತದೆ ಮತ್ತು ನರಸಂಬಂಧವಾದ ಎಲ್ಲ ಬಾಧೆಗಳನ್ನೂ ಕಳೆದು ಸುಖವಾಗಿ ಕಳ್ಳಬಲ್ಲಂತೆ ಮಾಡುತ್ತದೆ.

ಈ ತೈಲವು ಮನುಷ್ಯನ ಉತ್ತಮ ಸ್ಥಿತಿಯಲ್ಲಿರುವಾಗ ಬಿಡಲೂ, ಜ್ವರ ಪಕ್ಷವಾತಗಳಿಂದ ಶರೀರವು ಕೃಶವಾಗಿ ಕೂದಲು ಉದುರಿಹೋಗಿರುವಾಗ ಬೆಳೆಸಲೂ ಸಮರ್ಥವಾಗಿರುತ್ತದೆ. ಇದನ್ನು ಉಪಯೋಗಿಸಿದವರೆಲ್ಲರೂ ಇದರ ಗುಣವನ್ನು ಕೊಂಡಾಡುತ್ತಿದ್ದಾರೆ. ಇದರ ಪರಿಮಳವು ಬಹಳ ಹಿತಕರವಾಗಿರುತ್ತದೆ. ಇದನ್ನು ಉಪಯೋಗಿಸಿದವರಿಗೆ ಮತ್ತೆ ಬೇರೆ ತೈಲವನ್ನು ಉಪಯೋಗಿಸಲು ಮನಸ್ಸಾಗುವುದಿಲ್ಲ. ಇದರ ಸೌಂದರ್ಯವರ್ಧಕ ಗುಣವನ್ನು ಕಂಡು ಹಿಡಿದವರಿಗೆ ಇದನ್ನು ಬಿಡಲು ಮನಸ್ಸಾಗುವುದಿಲ್ಲ.

ಕ್ರಯ 1 ಡ್ರಾಮಿನ ಸೀಸೆಗೆ 1ಕ್ಕೆ 12 ಆಣೆ; 2 ಡ್ರಾಮಿನ ಸೀಸೆ 1ಕ್ಕೆ 1-4-0; 4 ಡ್ರಾಮಿನ ಸೀಸೆ 1ಕ್ಕೆ 2 ರೂಪಾಯಿ.

ವಿ. ಪಿ. ಮಜೂ 0-4-0 ಪೈಸೆ.

ಪ್ರತಿಷ್ಠಿತ ಅಂಗಡಿಗಳಲ್ಲಿಯೂ ಸಿಕ್ಕುತ್ತದೆ. ಕೊಂಡುಕೊಳ್ಳುವಾಗ ಶೀಷೆಯಮೇಲೂ ಮತ್ತು ಪಾಸಲ್ ಕಾರ್ಡಮೇಲೂ "ಬಿಟೋ ದಿಲ್ ಬಹಾರ್" ಎಂದು ಬರೆದಿರುವುದನ್ನೇ ಕೊಳ್ಳಿರಿ.

ಸೇಲ್ ಏಜಂಟರು:— [೪—6]

ಆಂಗ್ಲೋ ಇಂಡಿಯನ್ ಡ್ರಗ್ ಮತ್ತು ಕೆಮಿಕಲ್ ಕಂಪೆನಿ,

No. 155, ಬ್ರಾಡ್ವೇ, ಮದ್ರಾಸು.

Printed and Published by Mr. B. V. Narasimha Iyengar, at the Royal Press, Mysore; for the Editor & Proprietor.

Regd. No. M. 1299. SAHAJAYA OFFICE, MYSORE. ಬಿಡಿಪ್ರತಿ 3 ಸೈ.

SATYAVADI

"ರಾಜಕೀಯ, ಸಾಮಾಜಿಕ, ಮತವಿಚಾರ, ಭಾಷಾಭಿವೃದ್ಧಿ ಮುಂತಾದ ವಿಷಯಗಳನ್ನೊಳಗೊಂಡಿರುವ

"ಸತ್ಯವಾದಿ" ವಾರಪತ್ರಿಕೆ

ವಾರ್ಷಿಕ ಚಂದಾ 0 –10 —0] ಪ್ರತಿ ಮಂಗಳವಾರ ಪ್ರಕಟಿಸಲ್ಪಡುವುದು. [ಅಂಚೆಸ್ಟ್ರಿ ಸೇರಿ 1—8– 0

ಸಂಪುಟ I ಮಂಗಳವಾರ 18 ನೇ ಡಿಸೆಂಬರ್, -1917 ಸಂಚಿಕೆ 14

ಚಾತಃ ಕೂರ್ಮಃ ಸವಿತಾ ಸೃಣುತ ವಸಧಾಯಾಸರ್ಪಿತಂ ಯೇ ನಸಸ್ಯಸ್ಯಮಶ್ವಾಸ್ಯಾಶ್ವಾ ಜಸ್ಯದ್ರುವಸ್ಯಪ್ರಸ್ತುತಿನಿಯಮಿತಂ ಯಸ್ತ್ರಿಷೇದಸ್ತ್ರಿಷರ್ಮ |
ಸಂಜಾತಸ್ಯಧ್ರುವಸ್ಯಕ್ಷಿತಿಪತಿಕರಣೇನೋಪಯಾಸ್ಯನ್ವಸಾಧೋ
ಬ್ರಹ್ಮಾಂಜೋಮಂಬರಾಂತರ್ನಿಶಿತವದನಯೇ ಜಂತವೋಜಾತಸಸ್ಯಾಃ ||

ಸ್ವರಾಜ್ಯ.

ಪಾರ್ಲಿಮೆಂಟು ಮಜ್ಯದಲ್ಲಿನ ಹಿಂದೂಸ್ಥಾನ.

(ಒಂದನೆ ಸಂಚಿಕೆಯಿಂದ ಮುಂದಕ್ಕೆ ನಾಗಿದುದು.)

ಪ್ರ—ಹಿಂದೂಲೋಕ ಮತಕ್ಕೆ ಅಪಾಯಕಾರಿಯೂ ಮಾರಕವಲ್ಲವೆಂದು ನಿಮ್ಮ ಮಾತಿನ ತಾತ್ಪರ್ಯವೇನು?

ಉ—ಅಹುದು; ಹಾಗೆಯೇ.

ಪ್ರ—ಇಷ್ಟು ವರ್ಷಗಳು ಬ್ರಿಟಿಷ್ ರಾಜ್ಯವು ಹಿಂದೂಸ್ಥಾನದಲ್ಲಿದ್ದು, ಇಂಗ್ಲಿಷ್ ಶಿಕ್ಷಣವನ್ನು ಇಷ್ಟೊಂದು ಪ್ರಸಾರವಾಗಿಸ್ಪು ಮತ್ತು ಹಿಂದೂ ಜನರ ರಾಜಕೀಯ ಪ್ರಗತಿಯು ಇಷ್ಟೊಂದು ವರ್ಷಗಳು ನಡೆದಿದ್ದರೂ ಹಿಂದೂಸ್ಥಾನದಲ್ಲಿ ಇಂದು ಯಂತ್ರಶಕ್ತಿಯು ನಾಗಿದೆಯೆಂದು ನೀವು ಹೇಳುವುದು ಸಾಧ್ಯವಾಗಿರುವುದೇ?

ಉ—ನಸ್ಸ್ಥಿತಿ ಹಾಗೆಯೇ ಇದೆ ನಿಜ.

ಪ್ರ—ನಿವಾಸಿಗಳ ಲೋಕಮತ ವಿಷಯದಲ್ಲಿ ಈ ರೀತಿಯಾದ ಅಜಾಗರೂಕತೆ (ಉದಾಸೀನ) ಎಂದಾದರೂ ತೋರಿಬಿದ್ದೀತೇನು?

ಉ—ಎಂದೂ ಇಲ್ಲ.

ಪ್ರ—ಇದರ ಕಾರಣವೇನು?

ಉ—ನಿನಾಸಿಗಳ ದೇಶದಲ್ಲಿ ಸ್ವರಾಜ್ಯ ಬೇಕೆಂಬುದೇ ಇದರ ಕಾರಣ.

ಪ್ರ—ಹಿಂದೂಸ್ಥಾನದಲ್ಲಿಯೋ?

ಉ—ಹಿಂದೂಸ್ಥಾನದಲ್ಲಿನ ಸರಕಾರವು ಹಿಂದೂ ಲೋಕಮತಕ್ಕೆ ಮೊದಲಿನಂತೂ ಜವಾಬುದಾರವಾಗಿಲ್ಲ. ಸ್ವಮತದಂತೆ ಲೋಕಮತಕ್ಕೆ ಅಧಿಕಮಾನಕೊಡುವುದೆಂದೆ ತಾನು ಕೃತಕಾರ್ಯನಾದಂತೆ ಪೀಗೆ ನಿಶ್ಚೈಸಿದ ಅವನು ಸ್ಥಿರಚಿತ್ತನಾಗಿರುತ್ತಾನೆ.

ಪ್ರ—ಹಾಗಾದರೆ ಸ್ವರಾಜ್ಯಪ್ರಾಪ್ತಿಗೆಯಲುವಾಗಿ ನೀವೊಕೂಡ ಕಟಿಬದ್ಧರಾಗಬೇಡವೆ?

ಉ—ಅಹುದು, ಪರಮೇಶ್ವರನನ್ನು ಸ್ಮರಿಸುತ್ತಾ ಈ ಕಾರ್ಯದಲ್ಲಿ ನನ್ನ ಕೈಲಾದಷ್ಟು ಮಾತಲು ನಾನು ಸಿದ್ಧನಿರುತ್ತೇನೆ.

ಕಾಲವೆ ಕೊಟೆಲಗಶಿ!

"ಹೆಳುವಾವಳಿ ನಮ್ಮದು; ನ್ಯಾಯಗಾವಳಿ ನಮ್ಮದು, ನಮ್ಮಕಡುಚಿಯು ನಮ್ಮದು; ಮನುಜಂದಿಗೆ ಮಾಯಿ."

ಸಂಪೂರ್ಣ ನಾಗರೀಕಪ್ರಪಂಚದೇ ಜರ್ಮ್ಯಾನ್ಯರ ಪ್ರಾಚೀನನಾಗರಿಕತೆಯನ್ನು ನಿರ್ಣಯಿಸುವುದರಲ್ಲಿ ಸಂಸ್ಕೃತವಿದ್ಯಾಭ್ಯಾಸಕ್ಕೆ ಶ್ರೇಷ್ಠತಮಸ್ಥಾನವನ್ನು ಕೊಟ್ಟಿರುವಾಗ, ಭಾಷೆ, ವಿದ್ಯೆ, ಸಂಸ್ಕೃ, ಮತ್ತು ಮತ ಇವುಗಳ ತೊಡಕುಗಳನ್ನು ವಿಮರ್ಶಿಸುವ ಭಾಷಾಶಾಸ್ತ್ರ ಮತ್ತು ಮತಗಳ ಸಂಪೂರ್ಣ ಕ್ರಮಗಳನ್ನು ವಿವರಿಸುವುದಕ್ಕೆ ಸಂಸ್ಕೃತಭಾಷೆಯೇ ಆಧಾರವಾಗಿರುವಾಗ, ಪ್ರತಿಯೊಬ್ಬ ವಿಜಿಘೀಷುವಿನೂ ಭರತಖಂಡದ ಪೂರ್ವಸ್ಥಿತಿಯನ್ನು ತಿಳಿಯುವಲುವಾಗಿಯೂ, ಭಾರತೀಯರ ಆತಿಶಯಬುದ್ಧಿಶಕ್ತಿಯನ್ನು, ಮತ್ತು ಸ್ವಭಾವವನ್ನು ಗ್ರಹಿಸುವಲುವಾಗಿಯೂ, ಪಾಶ್ಚಿಮಾತ್ಯರ ನೆನಸಾಗುತಕತೆಯಲ್ಲಿ ನಮ್ಮ ಕಾರ್ಯಕ್ಕೆ ತಕ್ಕ ಪ್ರಾಣವನ್ನು ಸ್ಥಾಪಿಸಲು ಸಮರ್ಥರಾಗುವ ಸಲುವಾಗಿಯೂ, ಸಂಸ್ಕೃತವನ್ನು ವಿಮರ್ಶನಕ್ರಮದಲ್ಲಿ ಅಭ್ಯಾಸಮಾಡುವುದಕ್ಕಾಗಿ ಯೋರಾಷಿಯ್ತಿರುವಾಗ ಮೂದುಯು ಸಂಸ್ಥಾನವಾದ ಮೈಸೂರಿನಲ್ಲಿ ನೂತನವಾಗಿ ಪ್ರತಿಷ್ಠಿತವಾದ ವಿಶ್ವವಿದ್ಯಾಲಯವು ಪೊರಗಿನ ಪ್ರಪಂಚಕ್ಕೆ ಪ್ರಾಚ್ಯಾಭ್ಯಾಸದವಾದ ಶ್ರೇಷ್ಠಪದವಿಕ್ಕೆ ಕೃತಿಯನ್ನು ತೋರಿಸುತ್ತಿರುವುದು ಅತ್ಯಂತ ವಿಷಾದಕರವಾಗಿರುವುದು. ಪಾ! "ಕಾಲಸ್ಯಕುಟಿಲಾಗತಿ"

ದಿವಾ ಬಹದ್ದೂರ್ ಜ್ಞಾನಶರಣಂ ಚಕ್ರವರ್ತಿಯವರು ಭಾಷಣ ಮಾಡಿದರು. ಅದು ಈ ರೀತಿಯಲ್ಲಿದ್ದಿತು:—

"ವಿಶ್ವವಿದ್ಯಾಲಯದ ಸಂಬಂಧವಾಗಿ ಸಂಸ್ಕೃತಕ್ಕೆ ಪ್ರಾತಸ್ಥಾನ ಕೊಟ್ಟು ಇಂಗ್ಲೀಷ್ ಮತ್ತು ಸಂಸ್ಕೃತ ವ್ಯಾಸಂಗವನಾಡಿ ಪರೀಕ್ಷೆಕೊಟ್ಟ ವಿದ್ಯಾರ್ಥಿಗಳಿಗೆ "ಬಿ ಓ ಎಲ್.," "ಮತ್ತು "ಎಲ್. ಓ ಎಲ್.," ಡಿಗ್ರಿಗಳನ್ನು ಕೊಡಲು ಏರ್ಪಾಡಿಸಬೇಕು. ಇದರ ಸ್ಥಾಪನೆಯಿಂದ ವಿಶ್ವವಿದ್ಯಾಲಯಕ್ಕೆ ದ್ರವ್ಯಾಪಾಲಿದ್ಯವೆದ ಭಯವಿಲ್ಲ. ವಿದ್ಯಾಶಾಲೆಗೆ ಪಂಡಿತರನ್ನು ಕರೆಯಬೇಕು. ಅವರಲ್ಲಿ ಪ್ರಧಾನಪಂಡಿತರೊಬ್ಬರನ್ನು ಮಾತ್ರ ಕಂದರೆ ಸಾಕು. ಅವರಿಗೆ ಸಹಾಯಕ ಪಂಡಿತರು ಇಲ್ಲಿಯೇ ಇರುವರು. ಪ್ರಧಾನ ಪಂಡಿತರನ್ನು ವಿಶೇಷ ವ್ಯಯವಿಲ್ಲದೆ ತರಬಹುದು ಪ್ರಾಚ್ಯದೇಶದ ಅಧ್ಯಾತ್ಮಜ್ಞಾನವನ್ನು ಪಾಶ್ಚಾತ್ಯದೇಶದ ಭೌತಿಕಜ್ಞಾನದೊಡನೆ ಸಂಯೋಜಿಸಿದರೆ ಸೃತಿತೋ ವ್ಯಾರವೂ ಆಗುವುದು. ಹಾಗಲ್ಲದಿದ್ದರೆ, ರಾಷ್ಟ್ರಕ್ಕೆ ಉಪಪತಿಯಾಗುವುದು."

ಮೆ|| ಚಕ್ರವರ್ತಿಯವರು ಮೇಲಿನ ವಾಕ್ಯಗಳನ್ನು ಆಮೂಲಾಗ್ರವಾಗಿ ವಿವರಿಸಿ ಯುಕ್ತಿಯುಕ್ತವಾಗಿ ವಿವರಿಸಿದರು. ಇವರು ಆಂಗ್ಲ ಭಾಷೆಯಲ್ಲಿಯೂ ಸಂಸ್ಕೃತಭಾಷೆಯಲ್ಲಿಯೂ ಸಮಾನವಾಗಿ ಅಸಾಧಾರಣ ಪಾಂಡಿತ್ಯವನ್ನು ಪೊಂದಿ ಪ್ರಾಚ್ಯದೇಶದ ಅಧ್ಯಾತ್ಮಜ್ಞಾನದಲ್ಲಿಯೂ

ಪಾಶ್ಚಾತ್ಯದೇಶದ ಪ್ರಾಪಂಚಿಕಜ್ಞಾನದಲ್ಲಿಯೂ ಆದರವಾತ್ಸಲ್ಯರಾಗಿರುತ್ತಾರೆ. ಆದರೇನು? ಇವರ ಪ್ರಯತ್ನವು ನಿಷ್ಫಲವಾಯಿತು.

ಮೆ|| ಸಿ. ಜಂ. ರೆಡ್ಡಿಯವರು ಮೇಲಿನ ಭಾಷಣಕ್ಕೆ ವಿರುದ್ಧವಾಗಿ ಭಾಷಣಮಾಡಿದರು. ಭಾಷಣವು ಹೀಗಿದ್ದಿತು :—

"ಸಂಸ್ಕೃತವು ಅತಿ ಪುರಾತನ ಭಾಷೆಯು; ನಿಷ್ಪ್ರಯೋಜಕವಾದುದು; ಅರ್ವಾಚೀನಭಾವಗಳಿಗೆ ವಿರುದ್ಧವಾದುದು; ಹಲವು ಜನ ಪಂಡಿತುಲ್ದರೂ ಅತುಂದ ಲೇಶಸಾತ್ರ್ಯೂ ಪ್ರಯೋಜನವಿರದು. ಅವರು ವೃದು ಭೂಮಿಗೆ ಭಾರ. ಅವರು ಆಂಗ್ಲಭಾಷೆಯನ್ನೆಶಕವರಲ್ಲ. ಪೂರ್ವದೇಸದ ಮುಟ್ಯಾಂಶಗಳನ್ನು ಪಾಶ್ಚಾತ್ಯ ದೇಶಗಳಿಗೆ ತಿಳಿಸಲಸಮರ್ಥರು. ಮೇಲೆ ಹೇಳಿದ ಡಿಗ್ರಿಗಳನ್ನು ಇಡಬೇಕಾದ ಅವಶ್ಯಕತೆ ಇರುವುದಿಲ್ಲ. ಹಾಗೆ ಇಡಬೇಕೆಂಬ ಪಕ್ಷದಲ್ಲಿ ಕಾಮಟಿಯಲ್ಲಿ ಚರ್ಚಿಸಬೇಕು."

ಸಂಸ್ಕೃತಭಾಷೆಯಲ್ಲಿ ಪಿಣಾನವನ್ನು ಕೂಡ ತಿಳಿಯದ ಮತ್ತು ಸಂಸ್ಕೃತ ಪಾಂಡಿತ್ಯದ ಪ್ರಭಾವವನ್ನರಿಯದ ಇವರು ಈ ರೀತಿಯಲ್ಲಿ ನಿಕೃಷ್ಟವಾದವನ್ನು ಮಾಡುವುದು ಸಹಜವಾಗಿಯೇ ಇದೆ. ಇವರು ಮೆ|| ಚಕ್ರವರ್ತಿಯವರು ಭಾಷಣಮಾಡುತ್ತಿರುವ ಕಾಲದಲ್ಲಿ ಹಾಸ್ಯಕುಚೋದ್ಯಗಳನ್ನು ಮಾಡುತ್ತಾ, ಚಕ್ರವರ್ತಿಯವರ ಭಾಷಣದ ಮುಟ್ಯಾಂಶಗಳನ್ನು ತಿಳಿದುಕೊಳ್ಳುವುದಕ್ಕೂ ಮತ್ತು ವಿಮರ್ಶಿಸುವುದಕ್ಕೂ ಸಹ ಅವಕಾಶ ಕೊಡದಂತೆ ಹಾಸ್ಯರಸ ಪ್ರಧಾನವಾದ ನಾಟಕಾಭಿನಯದಂತೆ, ಅಗಿವಿಲ್ಲದ ಹುಡುಗರ ಚೇಷ್ಟೆಯಂತೆ, ಉನ್ಮತ್ತರಪ್ರಲಾಪದಂತೆ, ಮೂರ್ಖರ ಮನೋಗತದಂತೆ, ಇನ್ನೂ ಅನೇಕವಿಧವಾಗಿ ಅಂಗವಿಕಾರಾದಿ ವಿಭ್ರಮದೊಡನೆ ಸಭಿಕರನ್ನು ನಗಿಸುತ್ತಾ ವಿಶ್ವವಿದ್ಯಾಲಯಸಭಾಸ್ಥಳವನ್ನು ನಾಟಕಮಂದಿರವಾಗಿ ಮಾಡಿ, ವಿಲಕ್ಷಣವಾಗ್ಗುರಿಯಿಂದ ಪಂಡಿತಕುಲವನ್ನೇ ಪರಿಪರಿಯಾಗಿ ಪರಿಹಾಸ್ಯ ಮಾಡಿ, ಸಂಸ್ಕೃತವಿದ್ಯೆಯು ಪಾಶ್ಚಾತ್ಯವಿದ್ಯೆಯಷ್ಟು ಪ್ರತಿಷ್ಠಾಪ್ರದಾಯಕ ವಲ್ಲವೇ ಅಲ್ಲವೆಂದು ಹೇಳಿಕೊಂಡರು. ಇದನ್ನು ನೋಡಿದರೆ ಸಂಸ್ಕೃತವಿದ್ಯೆಯಲ್ಲಿ ಸುಪ್ರಸಿದ್ಧನಾದ ವಿದ್ವದ್ವರ ನೀಲಕಂಠದೀಕ್ಷಿತ ಮಹಾಶಯನು:—

॥ ನಭೇತವ್ಯಂ ನಮೋದ್ಧವ್ಯಂ ನಶಾಶ್ರವ್ಯಂ ವಾದಿನೋವಚಃ ।
ಭುಟಿತಿಪ್ರತಿವಕ್ತವ್ಯಂ ಸಭಾಸು ವಿಜಿಗೀಷುಭಿಃ ॥
ಅಸಂಭ್ರಮೋ ವಿಲಜ್ಜತ್ವೆ ಮವಜ್ಞಾಪ್ರತಿಪಾದಿನಿ ।
ಹಾಸೋರಾಜ್ಞಃ ಸ್ವವಶ್ಚೇತಿ ಪಂಚೈತೆಜಯಹೇತವಃ ॥
ಉಚ್ಚೈರುದ್ಭುಷ್ಯತೇತವ್ಯಂ ಮದ್ಯಸ್ಥಶ್ಚೇದಪಂಡಿತಃ ।
ಪಂಡಿತೋಯದಿತಸ್ಮೈನಸಕ್ಷಸ್ಯಾತೋಧಿಕೊವ್ಯತಾಂ ॥

ಎಂಬದಾಗಿ ಮೆ|| ರಡ್ಡಿಯವರನ್ನೇ ನಿರ್ದೇಶಿಸಿ ಹೇಳಿರಬಹುದೆಂದು ತೋರುತ್ತದೆಯಲ್ಲವೆ?

ಸರ್ವಶಕ್ತನಾದ ಭಗವಂತನು ಮನುಷ್ಯವರ್ಗಕ್ಕೆ ವಿಗಿಲಾಗಿ ಕೊಟ್ಟಿರುವ ಜ್ಞಾನವೆಂಬ ಆಯುಧವನ್ನು ಅಪಕ್ಷಮಯದಲ್ಲಿ ಆತ್ಮರಕ್ಷಣಾರ್ಥವಾಗಿ ಉಪಯೋಗಿಸಿಕೊಳ್ಳುವುದಕ್ಕೆ ಬದಲಾಗಿ ಅತ್ಮಾಘಾತವನ್ನೇ ಮಾಡಿಕೊಳ್ಳಲು ಪ್ರಯತ್ನಪಡುವುದು ಅನಿವೇಕವೇ ಸರಿ. ಅಥವಾ ಜ್ಞಾನಿಯಾವವನೂ ನಿರ್ಘೃಣನಾದ ಕಾಲನ ಕೌಶಲಕ್ಕೊಳಗಾಗಿ ಅವಿಜ್ಞತೆಯಿಂದಲಾ, ಆತುರತ್ವಭಾವದಿಂದಲೂ, ಕಾರ್ಯಾಕಾರ್ಯಗಳಲ್ಲಿ ಸಮರ್ದಿಯಾಗಿ ಅವಮೇಳನ ಕ್ಕೊಳಗಾಗುವನು. ಕಾಲದ ಗತಿಯು ಕುಟಿಲವಾದುದು!!

ಮೆ|| ಕರ್ಪೂರ ಶ್ರೀನಿವಾಸರಾಯರೂ ಮತ್ತು ಮೆ|| ಮುಬರ್ಜಿಯವರೂ ಮೆ|| ರಡ್ಡಿಯವರ ಭಾಷಣವನ್ನು ಖಂಡಿಸಿ, ಸಂಸ್ಕೃತಭಾಷೆಯು ಕೇವಲ ಪ್ರತಿಭಾವ್ಯವಸಾಯಪೊಂದನ್ನೇ ಅಲ್ಲದೆ, ಜೊತೆಗೆ ಅಧ್ಯಾತ್ಮಜ್ಞಾನವನ್ನೂ ಕರತಲಾಮಲಕವಾಗಿ ತೋರಿಸಿಕೊಡುವುದೆಂದು ತಮ್ಮ ಉತ್ಕೃಷ್ಟಮ ಭಾಷಣದಿಂದ ಸಮರ್ಥಿಸಿದರು. ವಿಶ್ವವಿದ್ಯಾಲಯದ ಸಭಿಕರೊಬ್ಬರು ಅಯುರ್ವೇದ ವಿದ್ಯಾಧಿಕಾಗಳು ಪರೀಕ್ಷೆಯಲ್ಲಿ ಜೀರ್ಣಡೆಯಾಗಿದ್ದರೂ, ಜೀವನಕ್ಕೆ ಮಾರ್ಗವಿಲ್ಲದೆ ಅಲೆಯುತ್ತಿದ್ದು ಗುವಾಸ್ತರಾಗಿಯೂ, ಹತ್ತರೂಪಾಯಿ ವೇತನವನ್ನು ಮೊಂದಿ ವಾರಶಾಲೆಯ ಉಪಾಧ್ಯಾಯರಾಗಿಯೂ ಇರುತ್ತಾರೆಂತಲೂ, ಅದರಿಂದ ಈ ಭಾಷೆಯು ಪ್ರಯೋಜನೀಯವಾದುದಲ್ಲವೆಂತಲೂ ವಾದಿಸಿದರು. ಎಂತಹ ಅಜ್ಞತೆ! ಇದು ನಿಜವಾದಪಕ್ಷದಲ್ಲಿ ಅವರ ಮೌಢ್ಯವೂ, ಸರಕಾರದವರ ಅಲಕ್ಷ್ಯವೂ ಕಾರಣವೆಂದು ತೋರುತ್ತದೆ.

ಈ ಮೇಲಿನ ಪ್ರಶ್ನೆಯ ತರ್ಕವು ಹುಸುಗಾಟಿಕೆಯಾಗಿ ಪರಿಣಮಿಸಿದುದನ್ನು ನೋಡಿದಪಂಡಿತರು ಇದಕ್ಕೆ ಅವರ ಮೌಢ್ಯವೇ ಕಾರಣವೆಂದೂ, ವಿದ್ಯಾಶಾಲೆಯ ಸಭೆಯಲ್ಲಿ ಅಂತಯೇ ಬಯಸುಂದಿ ಎಂದೂ ತಿಳಿದು ಆ ವಿಷಯದಲ್ಲಿ ಸಭಾಸನ್ಮತಿಯನ್ನು ಕೇಳಿದರು. ಹತ್ತುಜನಮಾತ್ರ ಸಮ್ಮತಿಯನ್ನು ಉದರವರು ಅನಸ್ಮತಿಯನ್ನೂ ಸೂಚಿಸಿದರು. ಆದರೆ ಒಪ್ಪುವಂದಿ ಮಾತ್ರವಾದರೂ ಸಂಮತಿಸಿದುದೇ ಸಂತೋಷ! ಪುನಃ ಈ ವಿಷಯವೇ ಮುಂದೆ ಸಭೆಯಲ್ಲಿ ಜರ್ಚೆಗೆ ಬಂದಲ್ಲಿ ಎಂದಾದರೊಂದುದಿನ ಅದು ಜಯಶಾಲಿಯಾಗುವುದೆಂಬುವುದರಲ್ಲಿ ಸಂದೇಹವಿರದು. ಕೆಲವರ್ಷಗಳಹಿಂದೆ ಬೊಂಬಾಯಿ ವಿಶ್ವವಿದ್ಯಾಶಾಲೆಯಲ್ಲಿ ಇಲ್ಲಿನಂತೆಯೇ ಸಂಸ್ಕೃತಭಾಷೆಗೆ ಪ್ರಾಶಸ್ತ್ಯಕೊಟ್ಟು ಡಿಗ್ರಿಗಳನ್ನು ಕೊಡುವ ವಿಷಯದಲ್ಲಿ ಮೆ|| ರಾಮಕೃಷ್ಣ ಗೋವಾಳ ಭಂಡಾರಕರವರ ಭಾಷಣವು ಆ ಕಾಲದಲ್ಲಿ ವಿಫಲವಾಗಿ, ಕೆಲವು ಕಾಲಾನಂತರ ಅವರ ಅಭಿಪ್ರಾಯವೇ ಜಯಮೊಂದಲಿಲ್ಲವೆ?

ಮೆ|| ಚಕ್ರವರ್ತಿಯವರು ವಿದ್ಯಾಲಯ ಸಭೆಯ ಹಲವುಜನರ ವಿರುದ್ಧಾಭಿಪ್ರಾಯದಿಂದ ಕುಂದಿದರೆಂದು ಕೋರುತ್ತೇವೆ. ಆದಕ್ಕೆ ಸುಯೋಗದ ಸಂಭವವಿರುವುದೆಂದು ನಂಬುತ್ತೇನೆ. ಈ ಸಂದರ್ಭದಲ್ಲಿ, ತಮ್ಮ ಜೀವಿತವನ್ನೇ ಆಂಗ್ಲಭಾಷೆ ಮತ್ತು ಸಂಸ್ಕೃತಭಾಷೆಗಳ ವ್ಯಾಸಂಗದಲ್ಲಿ ಸ್ಪರ್ಸಿ ವಿದ್ಯಾವಂತರಾಗಬೇಕೆಂದಿರುವ ನಮ್ಮ ಸ್ಥಳಿಕ ಸಂಭಾವಿತರಿಗೆ ನಮ್ಮ ದೊಂದು ಮಾತು—ಕೆಲವರು ಜರ್ಮನ್ ಆಧಿವ ಇತರ ವಿಶ್ವವಿದ್ಯಾಲಯಗಳಲ್ಲಿ ಓದಿದಮಾತ್ರದಿಂದಲಿ, ಮತ್ತು ಇತರ ಭಾಷೆಗಳ ನ್ಯಾಯವನ್ನೂ, ಪರಸ್ಪರ ಸಂಬಂಧವನ್ನೂ ತಿಳಿದುಕೊಂಡಮಾತ್ರದಿಂದಲಿ ಪಂಡಿತೋತ್ತಮರ ಪದವಿಗೆ ಅರ್ಹರಾಗಬಹುದೆಂಬ ನಿಬಕ್ಷಣಭಾವವನ್ನುಂಟಾಗಿರುವರು. ಅಂತಹರನ್ನು ನಾವು ಸನ್ಮಾನಿಸಲಾರೆವು. ನಾವು ಸಂಸ್ಕೃತಭಾಷೆಯ ನೂತನವಾದ ವೈಜ್ಞಾನಿಕತ್ವವನ್ನು ತಿಳಿದು ಪಂಡಿತೋತ್ತಮರ ಪದವಿಗೆ ಅರ್ಹರಾಗುವವರನ್ನು ಒಯಸುವೆವು. ಇಂತಹ ಪ್ರಾಚ್ಯದೇಶದ ಪಂಡಿತೋತ್ತಮರ ಸಂಮುಖದಲ್ಲಿ ಪಾಶ್ಚಾತ್ಯರು ತೃಣಪ್ರಾಯರೇ ಸರಿ!

ಪ್ರಿಯಾಗಾರಕಮಹಾಶಯರೇ ಮತ್ತೊಂದು ಮಾತು—ಮೆ|| ರಡ್ಡಿಯವರು ಕನ್ನಡಭಾಷೆಗೆ ವ್ಯಾಶಸ್ತ್ಯವನ್ನು ಕೊಡಬೇಕೆಂದು ಘಂಟಾಘೋಷವಾಗಿ ಹೇಳಿರುವರಲ್ಲವೆ? ಕನ್ನಡ ನೊದಲಾದ ದ್ರವಿಡಭಾಷೆಗಳು ಸಂಸ್ಕೃತದ ಸಹಾಯವಿಂದಲೇ ಅಭಿವೃದ್ಧಿಗೆ ಬಂದಿರುವವಲ್ಲದೆ ಸಂಸ್ಕೃತಕ್ಕೆ ಪ್ರತ್ರೀಸಮಾನಸಗಳಾಗಿಯೇ ಇರುವುವು. ಸಂಸ್ಕೃತ ಶಬ್ದಗಳನ್ನು ಪಯೋಗಿಸದೆ ಕನ್ನಡ ಮೊದಲಾದ ನಾಲ್ಕು ಭಾಷೆಗಳಲ್ಲಿಯೂ ಯಾರೂ ಮೈವಳಿಸುವುದಸಾಧ್ಯವೆಂದು ನಾವು ಹೇಳಬೇಕಾಗಿರದು. ಸಂಸ್ಕೃತದಲ್ಲಿ ಜ್ಞಾನವು ಹೆಚ್ಚಿದಷ್ಟೂ ಕನ್ನಡಭಾಷೆಯಲ್ಲಿ ವೈಮಾರಶಕ್ತಿಯು ಹೆಚ್ಚುವುದು. ಸಂಸ್ಕೃತವು ವಿಶಿಲವಾದಷ್ಟೂ ದೇಶಭಾಷಾ-ವ್ಯವಹಾರ ಲೇಖನ ಶಕ್ತಿಗಳು ಸಡಿಲವಾಗುವುದೆಂದು ಪಂಡಿತವಾಗಿ ಹೇಳಬಹುದು. ಕೇವಲ ಕನ್ನಡಭಾಷಾಭಿಮಾನಿಗಳಾದ ಪ.ಪೂಜ್ಯನೀಯರೂ ಕೂಡ ಸಂಸ್ಕೃತಜ್ಞಾನವಿಲ್ಲದಿದ್ದರೆ ತಪ್ಪು ಬರೆಯುವರೆಂದು ಹೇಳಬಹುದು. ಸಂಸ್ಕೃತಜ್ಞಾನವಿಲ್ಲದಿದ್ದರೆ ಈಗಿನ "ಸೈನ್ಸ್, ಚರಿತ್ರೆ" ಮುಂತಾದುವುಗಳನ್ನು ದೇಶಭಾಷೆಗೆ ಭಾಷಾಂತರಮಾಡಲಾಗುವುದು ಸಾಧ್ಯವೆ? ಉದಾ ಹರಣೆಗೆ 'ಕ್ಲಾಸಿಕಲ್ ಪದವು ನೇರವಿಲ್ಲದೆ, ಲವಣ' ಗಳುಂಟಾಗುವುವು ಎಂಬುದಕ್ಕೆ ಬದಲಾಗಿ ಅಸಿಡ್ಡಿಗೆ, ಆಲ್ಕಲಿಯು ನೇರವಿದೆ 'ಕಾಲ್ಸಿ' ಗಳುಂಟಾಗುವುವು. ಪ್ಲಾನೆಟ್‌ಗಳು ಎಲಿಪ್ಸಿನ್‌ನಲ್ಲಿ ತಿರುಗುವುವು ಎಂಬದಾಗಿ ಇಂಗ್ಲಿಷ

ಪ್ರಗತಿಯೇ ಉಪಯೋಗಿಗೆ ಬೇಳುವುದರೆ ಜನರಿಗೆ ಬೋಧೆಯಾಗುವುದೆ? ಸಂಸ್ಕೃತ ಭಾಷಾಭಿವೃದ್ಧಿಯನ್ನು ಮಾಡದಿದ್ದರೆ ದೇಶಭಾಷೆಯು ಸರ್ವಥಾ ಕುಂಠಿತವಾಗಲಾರದೆಂದು ಸಾರಿಸಾರಿ ಹೇಳಿದೆವು.

ಆಸ್ಟೇದೇಶಗಳಾದ ಪಾಶ್ಚಾತ್ಯ ದೇಶಗಳ ಅನೇಕ ವಿಶ್ವವಿದ್ಯಾಲಯಗಳಲ್ಲಾ ಸಂಸ್ಕೃತಭಾಷೆಯನ್ನು ಎರಡನೆಯ ಬಿಚ್ಚಿಕಭಾಷೆಯಾಗಿ ಮಾಡಿರುವದೇ ಏನಾ ಅದನ್ನು ಹಾಸ್ಯಕ್ಕೆ ಬೆಡದಲಾದ ಬಿಚ್ಚಿಕವಿಷಯಗಳೊಡನೆ ಸೇರಿಸಿರುವುದಿಲ್ಲ. ಇಂತಹುದರಲ್ಲಿ ಸಂಸ್ಕೃತಕ್ಕೆ ಉತ್ಪತ್ತಿಸ್ಥಾನವಾದ ಭರತಖಂಡದ ಮಾದರಿಯ ಸಂಸ್ಥಾನದಲ್ಲಿ ಸಂಸ್ಕೃತಭಾಷೆಯನ್ನೇ ಮೂಲೋತ್ಪಾಟನಮಾಡುವುದು ನೀಚಕೃತ್ಯವಲ್ಲವೆ?

ಈಗ ಒಂದೆರಡೂವರೆ ಹಿಂದೆ ಮದರಾಸಿನಲ್ಲಿಯೂ, ತಿರುವಾಂಕೂರಿನಲ್ಲಿಯೂ ವಿದ್ವಾಂಸರುಸೇರಿ ಸಂಸ್ಕೃತವನ್ನು ಎರಡನೆಯ ಭಾಷೆಯಾಗಿ ಮಾಡುವೇಕಾದುದು ಆವಶ್ಯಕತೆಯೆಂದು ಸುದರಾಸ್ ವಿಶ್ವವಿದ್ಯಾಲಯದವರನ್ನು ಪ್ರಾರ್ಥಿಸಿಕೊಂಡಿರುವರಲ್ಲೆ? ಹೀಗಿದ್ದರೂ ನಮ್ಮವರು ವಿದ್ವಾಂಸರಿದ್ದಲ್ಲಿಯೇ ಇತರ ವಿಶ್ವವಿದ್ಯಾಲಯದವರೂ ಪಲವು ದೇಶಭಾಂಧವರೂ, ಪಂಡಿತೋತ್ತಮರೂ ಸಮರ್ಥಕವಲ್ಲದ ಅತಿ ಅಶಾಸ್ತ್ರೀಯ ರಚನೆಯು ಕಾಲ್ಪಳ್ಳವೆನಿಸುವುದೇ?

ಸಂಸ್ಕೃತಜ್ಞಾನವಿಲ್ಲದ ನಮ್ಮ ವಿದ್ಯಾರ್ಥಿಗಳು ಆಸ್ಟೇದೇಶಗಳಾದ ಜರ್ಮನಿ, ಆಸ್ಟ್ರಿಯಾಮುಂತಾದ ದೇಶಗಳಿಗೆ ಹೋದರೆ ಕನ್ನಡವು ಸಹಾಯ ಮಾಡಬಲ್ಲದೇ? ಸಂಸ್ಕೃತಜ್ಞಾನವಿಲ್ಲದ ಮಾನವನು ದೇಶಾಂತರದ ವಿಶ್ವವಿದ್ಯಾಲಯದ ವಿದ್ವಾಂಸರ ಸಂಸರ್ಗಾಗಲಾರ್ಹನಾಗುವುದಿಲ್ಲವೆಂಬುದನ್ನು ಅಂತಹವನ್ನು ಅವರು ತಿರಸ್ಕರಿಸಿದಂತೂ ನೋಡಿರು!

ಮೈಸೂರಿನ ವಿದ್ಯಾಭಿವೃದ್ಧಿಯವರು ಕನ್ನಡಭಾಷೆಗೆ ವಿಶೇಷ ಉತ್ತೇಜನಕೊಟ್ಟುವುದರ ಮತ್ತು ಸಂಸ್ಕೃತಭಾಷೆಯ ನಿಶ್ಚೆಯನ್ನು ತಾಳುಮಾಡುವುದರ ಅಭಿಪ್ರಾಯವೇನು? ಇವರು ಸಂಸ್ಕೃತಭಾಷೆಯು ಪ್ರತಿಭಾವ್ಯವಸಾಯಕ್ಕೆ ಸ್ವಲ್ಪವೂ ಪ್ರಯೋಜನವಾದುದಲ್ಲವೆಂದು ಹೇಳಿರುವುದಲ್ಲವೆ? ಕನ್ನಡಭಾಷೆಯು ಬುದ್ಧಿಶಕ್ತಿಗೆ ಸಾಧನವಾಗಿರುವುದೆಂದು ತಿಳಿದಿರುವರೊ? ಇವರಲ್ಲಿ ಬುದ್ಧಿಶಕ್ತಿಗೆ ಸಾಧನವಾದುದೆಂಬುದನ್ನು ವಿಮರ್ಶಿಸುವ— ಸಂಸ್ಕೃತದಲ್ಲಿ ಭೂಧಾತುವಿನಿಂದ ಭೂತ, ಭವನ, ಭಾವಿ, ಭವಿತವ್ಯ, ಭವ್ಯ, ಭವಿತೃ, ವ್ಯತೀತ, ಭವನೀಯ, ಭವಿಷ್ಯತ್ ಮೊದಲಾದ ಶಬ್ದಗಳು ಅನೇಕಾರ್ಥಗಳನ್ನು ಕೊಡುತ್ತಾ ಉಂಟಾದ ಇವುಗಳ ಅರ್ಥವನ್ನು ಹಂಬಲೋಚಿಸಿ ಅವಧಾರಣೆ ಮಾಡುವುದರಿಂದ ವಿದ್ಯಾರ್ಥಿಗೆ ಕುಂಬಾ ಬುದ್ಧಿಶಕ್ತಿಯೂ ಆಗುವುದು

ಈ ಶಬ್ದಗಳೆಲ್ಲವೂ ಕನ್ನಡದಲ್ಲಿ ಸಾಧಾರಣವಾಗಿ ಉಪಯೋಗಿಸಲ್ಪಡುವುವೆ. ಹಾಗೆಯೇ ಕನ್ನಡದಲ್ಲಿ "ಇರು" ಎಂಬ ಧಾತುವಿನಿಂದ ಇರುವಿಕೆ, ಇರುವುದು, ಇರುವಂಥಾ ಎಂಬವಾಗಿ ಉಂಟಾಗುವ ಶಬ್ದಗಳಿಂದ ಬುದ್ಧಿಶಕ್ತಿಯು ಕುಂಬಾ ಚುರುಕಾಗುವುದಿಲ್ಲವೆ?

ಯೂರೋಪ್ ದೇಶಗಳಲ್ಲಿ ಲ್ಯಾಟಿನ್, ಗ್ರೀಕ್ ಭಾಷೆಗಳನ್ನು ಮುಖ್ಯಭಾಷೆಯನ್ನಾಗಿ ಮಾಡಿ ಅಭ್ಯಾಸಕ್ಕೆ ಆರಂಭಿಸಿ, ಆ ವಿದ್ಯಾಭ್ಯಾಸದಿಂದ ಇಂಗ್ಲಿಷ್, ಜರ್ಮನ್, ಫ್ರೆಂಚ್, ಮೊದಲಾದ ಆಯಾಯ ದೇಶಭಾಷೆಗಳು ವೃದ್ಧಿಯೊದಿರುವುವು. ನಮ್ಮ ಭರತಖಂಡಕ್ಕೆ ಸಂಸ್ಕೃತವು ಎಂತು ಮಾತೃಭಾಷೆಯೋ ಅಂತೆಯೇ ಯೂರೋಪ್ ದೇಶೀಯರಿಗೆ ಲ್ಯಾಟಿನ್, ಗ್ರೀಕ್ ಭಾಷೆಗಳು ಮಾತೃ ಭಾಷೆಗಳಾಗಿವೆ. ಆದುದರಿಂದ ಮಾತೃಭಾಷೆಯಾದ ಸಂಸ್ಕೃತವು ಉದ್ಧಾರವಾದಲ್ಲದೆ ಕನ್ನಡಭಾಷೆಗೆ ಏಳ್ಗೆಯುಂಟಾಗಬೆಂಬುದರಲ್ಲಿ ಸಂದೇಹವಿಲ್ಲದು.

ವ್ಯಾಪಾರಕಾಲದ ಪೂರ್ವ ಯಾತ್ರಿಕರಿಗಳನ್ನು ತೀರುವ ವಿಶಾರದರನ್ನು ಪ್ರಾಚ್ಯಭಾಷೆಯ ಸಹಾಯವಿಲ್ಲದೆ ಪ್ರಪಂಚಕ್ಕೆ ಪರಿಚಯಮಾಡಿಕೊಡುವುದಸದಳ.

ಧರ್ಮ, ಮತ ಇವುಗಳನ್ನೊಡಗೊಂಡಿರುವ ಈ ಭಾಷೆಯು ಸರ್ವೋತ್ಕೃಷ್ಟತೆಯನ್ನು ತಿಳಿದಿರುವ ಬ್ರಾಹ್ಮಣಸ್ಯದ್ದರೂ ಮಹೋದ್ಧಿದ್ದರೂ ಆನಭಾವರ್ ಟ್ಯಾಬಟಾ ಮುಖಾಕಯರು ಮತ್ತು ಚಾಂಡಿ ಮುಖಾಕಯರು ಪ್ರಪಂಚದಲ್ಲಿ ಧರ್ಮವನ್ನು ಹೆಚ್ಚಬೇಕಾದರೆ, ಲೋಕೋದ್ಧಾರವಾಗಬೇಕಾದರೆ, ವೈದಿಕ ವಿದ್ಯೆಗೆ ಪ್ರೋತ್ಸಾಹಕೊಡಬೇಕೆಂಬುದಾಗಿಯೂ, ಕೇವಲ ಲೌಕಿಕ ವಿದ್ಯೆಯಿಂದ ಲೋಕಕ್ಕೆ ಅನರ್ಥವುಟಾಗುವುದೆಂಬುದಾಗಿಯೂ, ಪಾಶ್ಚಾತ್ಯವಿದ್ಯೆಯಿಂದ ಲೌಕಿಕ ಸಂಪತ್ತು ಹೆಚ್ಚುವುದೆಂಬುದೇ ಲೋಕಕ್ಕೆ ವಿಪತ್ತು, ಹೆಚ್ಚುವುದೆಂಬುದಾಗಿಯೂ, ಲೌಕಿಕ ಸುಖಿಸಿಗೆ ಬೆರಗಾಗಿ ಪಶ್ಚಾತ್ಯಾಂಧಾನುಕರಣವನ್ನೇ ಶ್ರಮಗೆ ತಾವೇ ಸರ್ವಜ್ಞರೆಂಬು ತಿಳಿದುಕೊಂಡು ಮೆರೆಯುವ್ಯಾ, ಧರ್ಮೂದರ್ಮವ ಸ್ಥರಿಯದೆ, ದೇವರಿರುವನೆಲ್ಲಿದೆ ಸ್ಪೇಟ್ಸಾವಿಷಾಕಗಳಾದಿ ಅನರ್ಥಕಾರಿಗಳಿಂದ ಪ್ರಪಂಚವು ನಾಸ್ತಿಕಮಯವಾಗುತ್ತಲಿರುವುದೆಂದೂ ತಿಳಿದು ಸಂಸ್ಕೃತಭಾಷೆಗೆ ವಿಶೇಷ ವ್ಯಾಪಕತ್ವಕೊಟ್ಟು ಅಧಿಕೃದ್ಧಿಸೊಳಿಸಬೇಕಾದುದವಶ್ಯಕ ವೆಂದು ಹೇರುವ ಈಬೋಧ್ಯರನ್ನು ಪ್ರತಿಯೊಬ್ಬ ಧರ್ಮಾಭಿಮಾನಿಯೂ ವಂದಿಸಲೇಬೇಕು! ಪ್ರಪಂಚದಲ್ಲೆಲ್ಲಾ ಪೂಜ್ಯತೆಯನ್ನು ಪಡೆದಿರುವ ಈ ಸಮಾಜೀನವಾದ ಭಾಷೆಯ ವಿಷಯವಾಗಿ ಅನಂಬದ್ಧ ಆಪಾದನೆಗಳನ್ನು ಮಾಡಿದ ವಜ್ರಶೂಚರು ಈ ಬೆಲೋಪ್ಯ ಮಹಾಶಯರ ವಾಕ್ಯಬಾಣಗಳಿಗೂ ಅರ್ಹರಾಗಬಲ್ಲರು!

ಸಮುದಯ ಮಹಾಶಯರೇ! ಹೆಚ್ಚು ಹೇಳುವಿರಿ. ಆದರೆ, ನಿಶ್ಚಿ ವಿದ್ಯಾಲಯೆ ಸಭೆಯು ವಿಷಯದಾಗಿ ಒಂದೆರಡು ಮಾತು—ಸಭಾಸ್ಥಳ ಹೆಂದೆರೆಸಾ? ಸಭೆಯು ಎಂತಹುದು? ಸಭೆಯಲ್ಲಿ ಜರುಗಬಲ್ಲುತ.ತ್ರಿರವ ವಿಷಯಗಳಾವುವು? ಯಾವಂತಿರುಲ್ಲಿ ಜರುಗಲ್ಪಡಬೇಕು? ವಿಶ್ವವಿದ್ಯಾಲಯ ಸಭೆಯು ಸಾಮಾನ್ಯವಾದುದೆ? ದಾಸ್ಟೇವಿಯು ಬುಕ್ಕಯು ಮೀರ! ಪವಿತ್ರತರ ಪ್ರದೇಶ! ಅನಂಬಾಧ್ಯತ ವಿದ್ಯಾರ್ಥಿಗಳ ಭಾವ ಜೀವನವ್ಯ ಈ ಸಭಾಗಾದರ ವಸ್ತುಗಳ! ಈ ಅಂಶಗಳನ್ನು ತಿಳಿದು ಜಲವ ಸಭೆಗಳ, ಮಿಃ ಜಕ್ರವರ್ತಿಯಂಥವರಿಂದ ಮುಂದಿರಿಸಲ್ಪಟ್ಟ ಸವಿತ್ರಭಾಷೆಯು ವಿಷಯವನ್ನು ವಿಶೇಷ ವಸ್ತುವಿಷದ ಬಾಲಕರಂತೆ ತಾತ್ಸಾರ ಭಾವದಿಂದ ಇಗ್ನೂರಿಸುವುದು ಅಲ್ಪಂತ ಶೋಚನೀಯವಲ್ಲವೆ?

ನಮ್ಮ ಸಮಕಾಲ ವಕ್ಷಿತಕ್ಷ ಭ್ರಾತೃಗಳಾದ ಕೊಲ್ಲಾಪುರದ ಸಂವಾದ ಕವಿ ಹೇರುವಂತೆ ನಾವು, ಸಮಗ್ರಘಾರವೇಯವರೂ, ವಿಶ್ವವಿದ್ಯಾನಿಲಯಾಂಗವಾಗಿ ನಿಲ್ಲಬೇಕೆಂಬ ಕುತೂಹಲವಿದ್ದಲ್ಲಿ, ವಿದೇಶದ ನಾಗರಿಕತೆಯು ಫಲವನ್ನು ಧರಿಸುತ್ತಿರುವಾಗ ನಮ್ಮ ಪೂರ್ವದ ಪ್ರತಿಭಾವ್ಯವಸಾಯವನ್ನು ಮರೆಯು ಬಾರದೆಂಬುದೂ ಅತ್ಯವಶ್ಯಕವಾದ ಅಂಶವೆಂದು ವಿಧಾನ್ಯರಾಗಿ ಹೇಳುವೆವು. ಭರತಖಂಡದ ಪ್ರತಿಯೊಂದು ವಿಶ್ವವಿದ್ಯಾಲಯವೂ ಈ ಅಂಶವನ್ನು ಮನದಲ್ಲಿ ಮುಂದಾಗಿಟ್ಟು, ವಿಮರ್ಶನಮಾಗುದಲ್ಲಿ ಪಾಶ್ಚಾತ್ಯಭಾಷೆಯನ್ನು ಪ್ರಾಚಾರಮಾಡಲು ತಮ್ಮ ಸರ್ವಸಾಮರ್ಥ್ಯವನ್ನೂ ಉಪಯೋಗಿಸಬೇಕಾಗಿ ಕೋರಿತ್ತಾ ಈ ಲೇಖನವನ್ನು ಮುಗಿಸುವೆವು.

ವೃತ್ತಾಂತ್ರಸಂಗ್ರಹ.

ಕಳೆದ 17ನೇ ತಾ। ಬೆಳಗ್ಗೆ ಬೆಂಗಳೂರಿನಲ್ಲಿ ಮೈಸೂರಿನ ಮಹಾರಾಜರ ಪೈಲಟ್ ಮೈಸೂರಿನ ವಿಶ್ವವಾಯುಗಳ ಸಮಸ್ತ ಕೌಶಲ್ಯವನ್ನು ಪೌರರು ಕಣ್ಣಾರೆ ಕಂಡು ಆನಂದಿಸಲಿಕ್ಕಾಗಿ ಒಂದು ವಿಮಾನವನ್ನು ಏರ್ಪಡಿಸಿದ್ದರು. ಸಾವಿರಾರು ಜನರು ಬಂದಾಗಿದ್ದರಿಂದ ಅವರೆಲ್ಲರಿಗೂ ಅವಕಾಶ ಆಯಾಯತೆಯೂ ಸಂಭವಿಸಲಿಲ್ಲ. ಶ್ರೀಮದ್ರಾಜ್ಞೆಯವರೂ ಮತ್ತು ಅಂಗರಾಜ್ಯದ ಜನರಿಗೆ ವಿಶೇಷ ಅವಕಾಶ ಆಯಾಯತೆಯೂ ಆಯಿತು. ಇವರನ್ನೂ ಬಾಲಕರನ್ನೂ ವಿಮಾನದ ಸುತ್ತಲೂ ನಿಲ್ಲಿಸಿ ಅವರ ಕಣ್ಣಿಗೆ ಬೆಂಕಿ ಗಾಡಿಗಳನ್ನು ಪೆಗೆಸಿಕೊಂಡು ಬಂದಾಗ ಕಂಡರು.

ನಮ್ಮ ಕೌನ್ಸಿಲಿನ ಮಾ। ಬಾಸ್ಕರಯ್ಯನವರು ರಾಜೀನಾಮೆಕೊಟ್ಟಿರುವ ಸುದ್ದಿ ಎಲ್ಲರಿಗೂ ತಿಳಿದಿರಬಹುದು.

ಪೂರ್ವಗಡದಲ್ಲಿರುವ ಭರತಖಂಡದ ಪ್ರಾಚ್ಯವಿದ್ಯಾಲಯಕ್ಕಾಗಿ ನಮ್ಮ ಶ್ರೀಮನ್ಮಹಾರಾಜರವರು 100 ರೂಪಾಯಿಗಳನ್ನು ದಯಪಾಲಿಸಿದ್ದಾರೆ.

ಮೈ ಮಾಂಟೇಗರವರು ಹೇಂಪ್ಟಂಗಳು ೨೫ನೇ ತಾ। ವಿವರ ದಿಲ್ಲಿಯಲ್ಲಿ ವಿಮ್ಬಸಿ ಗಳನ್ನು ವಹಿಸಿ ಕಲಕತ್ತಾವಿಗೆ ಬಂದರು

ಕಲಕತ್ತೆಲ್ಲಿ ಮಹಾಸಭೆ ತಾ। ೨೫ ಮಹಾಭಿಮಾನ ಪ್ರಾರಂಭವಾಯಿತು. ಕಳೆದ ಸೋಮವಾರ ಆಂಗ್ಲೋ ಇಂಡಿಯನ್ ಸಂಸ್ಥೆಯವರು ತಮ್ಮ ಬಿನ್ನಪತ್ರವನ್ನು ಸಮರ್ಪಿಸಿದರು. ಇನ್ನು ಕೆಲವು ದಿನಗಳು ಅಲ್ಲಿಯೇ ಇದ್ದು ಈ ತಿಂಗಳ ಮಧ್ಯದಲ್ಲಿ ಮದರಾಸಿಗೆ ಬಂದು ಸೇರುವರು.

ಕರೀ ವೀರಶೈವ ಮಹಾಸಭೆಯು ಈ ತಿಂಗಳು 27, 28, 29ನೇ ತಾರೀಖುಗಳಲ್ಲಿ ನಡೆಯುವುದು ಅದಕ್ಕೆ ದಿವಾನ್ ಬಹದ್ದೂರ್ ರಾಜಭೂಭೂಷಣ ಕೆ. ಪಿ. ಪುಟ್ಟಣ್ಣ ಶೆಟ್ಟಿ ಯವರು ಅಗ್ರಾಸನವನ್ನಲಂಕರಿಸುವರು

ಈ ತಿಂಗಳು 16ನೇ ತಾ। ಪೆನಾಂಗಿನಲ್ಲಿ ಬ್ರೊಂಬಾಯಿನ್ಯಾಂಕ್ಕಿನ ಮುಖಾಕ ರ್ಷಣೆನ್ಸ್ ನಡೆಯುತ್ತದೆ.

"ಬೊಂಬಾಯಿ ಕ್ರಾನಿಕಲ್" ಎಂಬ ಪತ್ರಿಕೆಯನ್ನು ಛಾಪಿಸುವುದಕ್ಕೆ ಮುತ್ತು ಪ್ರಕಟಿಸುವುದಕ್ಕೆ ಆಕ್ಷೇಪಣೆಯನ್ನು ಮಿ. ಬಿ. ಜಿ ಹಾರ್ನಿಮ್ಯಾನರವರು ಹೂಡಿದ್ದರಿಂದ ಅವರನ್ನು ಅಲ್ಲಿ ವಾಚಿಸ್ಟ್ರೇಟರವರು ರೂ 10000 ಹೊಣೆಯನ್ನು ಕೇಳಿರುತ್ತಾರೆಂಬ ವದಂತಿಯು ಒಳ್ಳೆ ವಿಷಾದವನ್ನುಂಟುಮಾಡುವುದು.

ಮೈಸೂರಿನಲ್ಲಿಂದು ವಿದ್ಯಾಶಾಲಾ ಸಂಸ್ಥಾಪನೆ ವಿಷಯವಾಗಿ ಕಳೆದ ಸೆನೆಟ್ ವಿಶೇಷಾಧಿವೇಶನದಲ್ಲಿ ಒಪ್ಪಂದಕ್ಕೆ ಬರಲಾಗಲಿಲ್ಲವೆಂತೆ. ಕಾಲೇಜನ್ನು ಸ್ಥಾಪಿಸುವುದೊಳ್ಳಿತು ಎಂದು ತೋರುತ್ತದೆ.

ಇದೇ 13ನೇ ಗುರುವಾರ ರಾತ್ರಿ ಮೈಸೂರು ತಿಪ್ಪೆಯಲ್ಲಿರುವ ವೀರವಾಣಿವ ವಾಲ ಬಹದ್ದೂರವರ ಎಮೆಯಲ್ಲಿ ಬೋಗದಕಳ್ಳಿಯನ್ನು ತುಂಬಿದ್ದ ಸ್ಥಳಕ್ಕೆ ಬೆಂಕಿಯು ಹೆಗೊ ತಗಲಿ ಮನೆಯಮೇಲ್ಚಾಗವೆಲ್ಲ ಹೊತ್ತಿಕೊಂಡಿತು. ಆ ವೇಳೆಯಲ್ಲಿ ಸಮೀಪ ವೆಲ್ಲಿದ್ದ ಸರ್ದಾರ್ ಗೋಪಾಲದಾಸ ಆದಿಸನವರು, ಮೈ. ಶಿವಣವು ಬಾಬ್ಜಿಗಳೂ, ಆ ಮನೆಯೊಳಕ್ಕೆ ಪ್ರವೇಶಿಸಿ, ಬಹು ಸಾಹಸದಿಂದ ಬೆಂಕಿಯನ್ನಾರಿಸುವ ಪ್ರಯತ್ನವನ್ನು ಮಾಡಿದರು. ಆದರೂ ಸುಮಾರು ಬೆಲೆಯ ಅಂಕಿತವನ್ನು ಮನೆಯು ಸುಟ್ಟುಹೋಯಿತು. ಸರ್ದಾರ್ರವರು ಧೈರ್ಯವಾಗಿ ಮುಂದಿರಿದು ಬೆಂಕಿಯನ್ನಾರಿಸುವ ಪ್ರಯತ್ನವನ್ನಾವಿದ್ದ ಸಕ್ಷದಲ್ಲಿ ಅಸೀಕ ಪದಾರ್ಥಗಳೂ, ಸ್ವಾಧೀನಲೂ, ನಷ್ಟವಾಗುತ್ತಿದ್ದವು ಎಂದೂ ಸರ್ದಾರ್ ಗೋಪಾಲದಾಸೇ ಅವರವರ ಮನೆಯ ಎಮೆಯನ್ನು ಪ್ರತ್ಯಕ್ಷವಾಗಿ ಕೆಲಂ ಬಾತ್ಮಿದಾರ ರೊಬ್ಬರು ತಿಳಿಸುತ್ತಾರೆ.

TO ADVERTISERS.

Advertisers are requested to note that ONLY this page is intended for Advertisements. After the space is filled up, no advertisements are received.

"ಸತ್ಯವಾದಿ"

ವಾರ್ಷಿಕ ಪಂದಿ:—ಸ್ಥಳದವರಿಗೆ 10 ಆಣೆ. ಪರಸ್ಥಳದವರಿಗೆ ರೂ. 1 ಆಣೆ ೪

ಬಾತ್ಮೀದಾರರಿಗೆ:—ದೇಶೋನ್ನತಿಗೆ ಸಂಬಂಧಪಟ್ಟ ಬಾತ್ಮಿಗಳೆಲ್ಲವೂ ಪ್ರಕಟವಾಗುವುದು. ಇತರ ವಿಷಯಗಳನ್ನು ಒಡೆದು ತಿಳಿಯಬೇಕಾದುದು.

ವ್ಯವಸ್ಥೇದರ್, "ಸತ್ಯವಾದಿ," ಮೈಸೂರು.

ಚಂದ್ರಕಾಂತ ತೈಲ.

೫-೧ ದಿವಸಗಳನ್ನು ನೆನಪುಹಡೆಯಿಂದ ಧನುರ್ವಾಯು, ಪಾರಿಶವಾಯು, ವೇದನೆ ಸಂಬಂಧವಾದ ಬಾತ್ಯಗಳು, ಮಕ್ಕಳ ಹಲ್ಲಿಂದ, ಜ್ವರ, ಚಿಟ್ಟು ಮುಂತಾದುವುಗಳು ಗುಣವಡುತ್ತವೆ. ಕ್ರಯ ಸೀಸೆ 1ಕ್ಕೆ 1 ಆಣೆ.

[೨-11] ನಮ್ಮ ಸಿಂಹಾಸನ-ಇಂದ್ರತಾಂತ ಔಷಧಿ, ಮೈಸೂರು.

ಲೋವರ್ ಸೆಕೆಂಡರಿ ಸಂಸ್ಕೃತವಚರಿತ್ರೆ.

ಇದನ್ನು ಒಂದೆರಡು ಘಂಟೆಗಳೋದಿದರೂ ಪರೀಕ್ಷೆಯಲ್ಲಿ ಪೇರ್ಗಡೆ ಹೊಂದಬಹುದು ಕ್ರಯ 1 ಆಣೆ.

ಮೈಸೂರು ಬುಕ್ಡಿಂಗ್ ಹೌಸ್, ಮೈಸೂರು

ನ್ಯೂರಿಯರಿಗೆ ಕೇಶಭೂಷಣವೇ ಭೂಷಣ!!

ಕಾಮಿನಿಯಂ ತೈಲ. (ರಿಜಿಸ್ಟರ್ಡ್).



ಈ ತೈಲವು ವಂಶವೃದ್ಧಿಯನ್ನುಂಟು ಮಾಡುವುದಲ್ಲದೆ ಆರೋಗ್ಯಕಾರಿ ಪದಾರ್ಥವೆಂದೆನಿಸಿದ್ದಲ್ಲದೆ ಕೂದಲು ಉದುರುತ್ತಿದ್ದರೆ ಅದನ್ನು ನಿಲ್ಲಿಸುತ್ತದೆ ಹೊಸಲಿ ಹುಟ್ಟಿಸಿ ದಾಪಾಡುತ್ತದೆ. ಕೇದರಾಯಿಯನ್ನು ಕೋಮಲವಾಗಿ ಬೆಳೆಸುತ್ತದೆ ಮತ್ತು ಸೌಕೂದಲುಗಳನ್ನು ತಂದ ನಿಜವಾದ ತಲೆಪಿಗ್ಗಿಕ್ಕೆ ಕರುತ್ತದೆ

ಈ ತೈಲವು ಮೆದುಳನ್ನು ಉತ್ತಮ ಸ್ಥಿತಿಯಲ್ಲಿಡುವುದರಿಂದಲೂ, ಜ್ಞಾಪಕಶಕ್ತಿಯನ್ನು ಊರ್ಜಿತಪಡಿಸುವುದರಿಂದಲೂ ಮತ್ತು ತಲೆಯನ್ನು ಶುಭ್ರವಾಗಿಡುವುದರಿಂದಲೂ ಕಾರ್ಯಸಾಧಕವಾಗಿ, ವಿದ್ಯಾರ್ಥಿಗಳಿಗೆ, ಉದ್ಯೋಗಿಗಳಿಗೆ, ಎಲ್ಲರಿಗೂ ಬಹು ಪ್ರಯೋಜನಕಾರಿಯಾಗಿರುತ್ತದೆ. ಇದಲ್ಲದೆ ಇದು ಮಸ್ತಿಷ್ಕಾಭಿವೃದ್ಧಿಯನ್ನುಂಟುಮಾಡುವುದಲ್ಲದೆ ಇದರಿಂದ ಸಮಾಧಾನವನ್ನು ಹೊಂದಿರುತ್ತದೆ. ಇದರ ತ್ರಿಸ್ಥಿತಿಗೆ ಕಲಬಾಗಿ ಮೈಸೂರು ಮಹಾರಾಜರವರಿಂದ ಒಂದು ಚಿನ್ನದ ಪದಕವನ್ನು ಒಮ್ಮಮನ ಕೊಟ್ಟಿರುತ್ತಾರೆ ಸಮಯವನ್ನಾವಾತ್ಮ ಕೆಳದುಕೊಳ್ಳಬೇಡಿ.

ಎಲ್ಲೆಲ್ಲಿಯೂ ಮಾರ್ಟ್ಟಡತ್ತದೆ

ಕ್ರಯ 1 ಸೀಸೆಗೆ 1-0-0; 3 ಕ್ಕೆ 2-10-0. ವಿ. ಪಿ. ಖರ್ಚು ಬೇರೆ.

ಅತ್ಯಂತ ಆಶ್ಚರ್ಯಕರವಾದ್ದು ಸುದಾಸನೆಯನ್ನು ತೋರಿರುತ್ತದೆ!

ಓಟೋ ದಿಲ್ಲೋ ಬಿಯಾರ್. (ರಿಜಿಸ್ಟರ್ಡ್)

ಸುದಾಸನೆ ತೈಲಗಳಲ್ಲಿ ಅತ್ಯಂತ ಶ್ರೇಷ್ಠವಾದುದು. ಇದು ಅನೇಕ ವಿಧವಾದ ಮನುಷ್ಯರ ಮಾನಸಿಕ ವಿಕಾರಗಳನ್ನು ಮತ್ತು ಬೇಸರಿಕೆಗಳನ್ನು ಹೋಗಿಸುತ್ತದೆ.

ಇದು ಎಲ್ಲಾ ವಿಧವಾದ ನಾಡಕ ಸದಾಚಾರಗಳಿಂದಲೂ ಬೇರೆಯಾಗಿರುತ್ತದೆ. ಎಲ್ಲರೂ ಸೇವಿಸಲಾಗಿ ಉಪಯೋಗಿಸಬಹುದು. ಬಾಯಿ, ಮಲ್ಲಿಗೆಯಾದೇ ವಿವರವಾದ ಮಾಗಗಳಿಂದ ತಯಾರಾದುದಾಗಿದೆ ಇದು ಅತಿಮಾಧುರ್ಯವನ್ನುಂಟುಮಾಡುವ ಇದರ ಸುವಾಸನೆಯನ್ನು ಸೇವಿಸಿ ನೋಡಬೇಕಾದುದು. ಇದರ ಸಮಾನವಾದ ಗುಣಗಳಲ್ಲಿ ಇದಕ್ಕೆ ಯಾವುದೂ ಸಮಾನವಿಲ್ಲ.

ಕ್ರಯ 1 ಪ್ರಾಮಿನ ಸೀಸೆ 1ಕ್ಕೆ 12 ಆಣೆ; 2 ಪ್ರಾಮಿನ ಸೀಸೆ 1ಕ್ಕೆ 1-4-0; 4 ಪ್ರಾಮಿನ ಸೀಸೆ 1ಕ್ಕೆ 2 ರೂಪಾಯಿ.

ವಿ. ಪಿ. ಖರ್ಚು 0-1-0 ಜಾಸ್ತಿ

ಪ್ರಕಟಿಸುವುದಲ್ಲದೆ ಪ್ರಾಪ್ತವಾದ ಪ್ರತಿಯೊಂದಕ್ಕೂ ಸಿಕ್ಕುತ್ತದೆ. ಕೊಂಡು ಕೊಳ್ಳುವಾಗ ಬೇಕಾದುದಾಗಿ ಮತ್ತು ಸುದಾಸನೆಯೆಂದು ಓಟೋ ದಿಲ್ಲೋ ಬಿಯಾರ್ ಎಂದು ಬರೆದಿರುವುದನ್ನು ನೋಡಿ ಕೊಳ್ಳಿರಿ.

ಸೇಲ್ ಏಜೆಂಟರು — [೩—7]

ಆಂಗ್ಲೋ ಇಂಡಿಯನ್ ಸ್ವದೇಶಿ ಸ್ಟೋರ್, ಕಲಿಂಗಲಿ ಕಂಪೆನಿ,

No. 15ನ, ಬಿಸ್ಮಾನುಸೀತಿ, ಬೊಂಬಾಯಿ.

Printed and Published by Mr. B. V. Narasimha Iyengar, at the Royal Press, Mysore; for the Editor & Proprietor

Regd. No. M. 1299. ಬಿಡಿಪ್ರತಿ 3 ಕ್ಕೆ

SATYAVADI

ರಾಜಕೀಯ, ಸಾಮಾಜಿಕ, ಮತವಿಚಾರ, ಭಾಷಾಭಿವೃದ್ಧಿ ಮುಂತಾದ ವಿಷಯಗಳನ್ನೊಳಗೊಂಡಿರುವ

"ಸತ್ಯವಾದಿ" ವಾರಪತ್ರಿಕೆ

ವಾರ್ಷಿಕ ಚಂದಾ 0—10—0 | ಪ್ರತಿ ಮಂಗಳವಾರ ಪ್ರಕಟಿಸಲ್ಪಡುವುದು. [ಅಂಚೆಯ್ದ ಸಲು 1—8—0

ಸಂಪುಟ I ಮಂಗಳವಾರ 25 ನೇ ಡಿಸೆಂಬರ್, 1917 ಸಂಚಿಕೆ 15

ಹಸ್ತೀಸ್ಪೂಲತನುಃ ಸಚಾಂಕೆಪರಗಃ ಸ್ಫುನ್ನಮಾಶ್ಯೋಂಕ ಕೋ
ವಜ್ರೇಣಾಭಿಯತಾಃ ಪತಂತಿಗಿರಯಃ ಕಿಂ ಪೈಲಮಾಕ್ರಮ್ಯ ವಾ |
ದೀಪೇಪ್ರಜ್ವಲಿತೇಪತಂತ್ಯಶಲಭಾಃ ಕಿಂ ದೀಪಮಾಕ್ರಾಮತಿ
ಸ್ನೇಹೋಯಸ್ಯವಿವಾಹಕೇ ಸಬಲವಾನ್ಕಾಂ ಭೇದುಕಾಃ ಪ್ರಸ್ಯಯಃ ||

ಸ್ವರಾಜ್ಯ.

"ಸ್ವರಾಜ್ಯ ಸಮಿತಿ" (ಹೋಮ್ ರೂಲ್‌ಲೀಗ್) ಯ ಮುಂಬ್ಯೀ ದೇಶಕವಾವುದುಂಟೋ ಅದಕ್ಕೆ ಮಿಸ್ಟರ್ ಜಿನ್ನಾಯವರನ್ನು ಅಧ್ಯಕ್ಷರೆಂದೂ ಗಾರ್ಡವಲಂಬಿಗಳು, ಸ್ವರಾಜ್ಯ ಸಮಿತಿಯು, ಹಿಂದೂಸ್ಥಾನದಲ್ಲಿರುವ ಬ್ರಿಟಿಷ್ ಅಧಿಕಾರಿಗಳ ಕಕ್ಷುತ್ವವನ್ನಾಡುವವರಾಗಿದೆ ಅಧವಾ ಬ್ರಿಟಿಷ್ ಜನಾಂಗ ಮತ್ತು ಹಿಂದೂಜನಾಂಗಗಳ ಪರಸ್ಪರ ಸ್ನೇಹಸಂಬಂಧವನ್ನು ನಷ್ಟವಡಿಸುವ ಇಚ್ಛೆಯನ್ನುಳ್ಳಂಥಾದಿದೆ ಎಂದು ಅದರೆಲೆ ಆರೋಪಿಸುವ ಆಕ್ಷೇಪವು ಸರ್ವಥಾ ನಿರಾಧಾರವಾದುದು. ರಾಷ್ಟ್ರೀಯ ಸಭಾಧ್ಯೇಯದ ಮುಖ್ಯನ್ಯಾಯದಲುವಾಗಿ ಯಾಗಲೀ ಅಧವ ನಕ್ಕದಲುವಾಗಿಯಾಗಲೀ ಈಗ ಸರಕಾರದವಲ್ಲಿ ಸಂಚಲನವನ್ನಿಟ್ಟಿಲ್ಲ. ವಸ್ತು ಸ್ಥಿತಿಯು ಹೀಗಿದ್ದರೂ ಸ್ವರಾಜ್ಯಸಂಘ (ಹೋಮ್ ರೂಲ್‌ಲೀಗ್) ದಿಂದ ಧ್ಯಾನದಲುವಾಗಿ ಸರಕಾರತ್ಯಾಗವೇ, ಅಂಗ್ಲೋ ಇಂಡಿಯನ್ನರಿಗಾಗಲೀ ಅಧವಾ ಬ್ರೀಟಿಷ್ ಜನಾಂಗಕ್ಕಾಗಲೀ ಸಂಚಿತ ಅಧವಾ ಭೀತಿಯು ಏಕ ಕ್ಕುಂಟಾಗಬೇಕು? ಇದು ನಮಗೆ ಸುತರಾಂ ತಿಳಿದಿಲ್ಲ. "ರಾಜ್ಯಾಯತ್ತೆ" ಮತ್ತು "ಸ್ವರಾಜ್ಯಸಂಘ" ಈ ಉಭಯಪದಗಳ ತಾತ್ಪರ್ಯವು ಸಮಾನವಾಗಿ ಒಂದೇ ಆಗಿದೆ. ಇನ್ನೆಡರಿಂದಲೂ ಇವರ ದೇಶಗತಿ ಸ್ವಾರಾಜ್ಯದಿಂದ ಹಿಂದೂಸ್ಥಾನಕ್ಕೆ ಸ್ವಾರಾಜ್ಯವು ಸಿಕ್ಕಬೇಕು; ಕೆನಡಾ, ಪೆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ಈ ಸ್ಥಳಗಳಲ್ಲಿ ಜನಾಂಗವು ಯಾವ ಸ್ವರಾಜ್ಯದ ಸಕ್ಕನ್ನು ಉಪಭೋಗಿಸುತ್ತಿರುವುದೋ ಅಂತಹ ಸ್ವರಾಜ್ಯದ ಸಕ್ಕು ಹಿಂದೂಜನಗಳಿಂದಲೂ ಉಪಭೋಗಿಸಲ್ಪಡುವುದಕ್ಕೆ ಹೋರಬೇಕ್ಕು ಎಂಬುದೇ ಕಾರ್ಯಸಾಧನೆಯು ಉದ್ದೇಶವಾಗಿದೆ.

ಭಾವಿನೀಷಪ್ಪದಿ

ಕ್ಷಿತಿಯೊಳಿರ್ಪಾ ದೇವಪೈಶ್ವರ |
ನುತ ಸುರೂಪವನೊಂದಿಧರಿಗೆ |
ದೃತಶರೀರಾಂತರನುದಿತಮೇಣ್ಯಾಸಂಗಸೊಳಗಿಯೆ. ||
ನತಕಮಾದ್ಯಕ್ಷರಗಳಂತ್ |
ದಕುಳಕರಣಗಿಪ್ಪದೇವನ |
ನುತಿಸಿ (ಬಳುತಿಯೊ) ಳಾಸುವೇನೆನಿಷ್ಟಸಂಪದವ ||

ಮಿಲಿಸಂಜುಂದಯ್ಯ

ಸ್ವದೇಶೀವ್ರತ.

(ಮೊದಲ ಸಂಚಿಕೆಯಲ್ಲಿ "ಸ್ವದೇಶಿವ್ರತ" ಎಂಬ ಅಗ್ರಲೇಖನದಲ್ಲಿ "ಸ್ವದೇಶಿವ್ರತದ" ಕೆಲವಂಗಗಳನ್ನು ಮಾತ್ರ ಬರೆದಿದ್ದೆವು. ಇನ್ನು ಕೆಲವು ಅಂಶಗಳನ್ನು ಇಲ್ಲಿ ಸಂಪೂರ್ಣವಾಗಿ ಬರೆದಿದ್ದೇವೆ. ಇನ್ನು ಮುಂದಿನ ಸಂಚಿಕೆಯಲ್ಲಿ ಮುಗಿಸುವೆವು)

ಭರತಖಂಡದ ನಿವಾಸಿಗಳು, ಪ್ರತಿಯೊಬ್ಬನೂ, ಸರ್ವದಾ ಸಕಾಲಕ್ಕೆ ಸರಿಯಾಗಿ ನೆಟ್ಟಗೆ ಕಲೆಯಿತ್ತಿಕೊಂಡು ಧೃಢವಾಗಿನಿಂತು ಕಾರ್ಯಾರ್ಥಿಗಳಾಗಿ, ಸಿದ್ಧವಾಗಿರುವ ಈ ಸನಯವನ್ನು ಪಟ್ಟುಹಿಡಿದು ಪಕ್ಕೊಂದು ಸಾರಿ ಸ್ವದೇಶೀ ಪ್ರತಿಜ್ಞೆಯೆಂಬ ಆಯುಧವನ್ನು ಉಪಯೋಗಿಸಲು ಬೇಕಾದ ಸಿದ್ಧರಾಗಿರಿ! ಬಂಗಾಳಕ್ಕೆ ಕಷ್ಟ ಬಂದಾಗ ಬಂಗಾಳಿಗಳೂ, ಪಂಜಾಬಿಗೆ ಸಂಕಟಬಂದಾಗ ಪಂಜಾಬಿನವರೂ ಸ್ವದೇಶೀ ಸಂಕಲ್ಪವನ್ನು ಮಾಡಿದರು, ಅವರ ಕಷ್ಟ ಅನಿವಾರ್ಯ, ಇವರ ಸಂಕಟ ಇವರಿಗೆಷ್ಟದೆ ಎಲ್ಲರ ದೃಷ್ಟಿಯೂ ಒಂದೇ ಎಂಬಂತಾಗಿ ಭೂಮಿಯ ಭರತಖಂಡದ ಎಲ್ಲಾ ಭಾಗಗಳಲ್ಲಿಯೂ ಸ್ತ್ರೀಯರೂ, ಪುರುಷರೂ, ಮಕ್ಕಳೂ ಸ್ವದೇಶೀ ವ್ರತವನ್ನಾಚರಿಸುವೀಕು. ಮದರಾಸ್ ಪಟ್ಟಣದ ಆರ್ಯಪುತ್ರಿಯರೂ, ಆಸ್ಟ್ರೇದೇಶೀಯರಾದ ಅರುಂಧತೀರ ಕುಮಾರ್ತಿಯವರೂ ಸಂಕಲ್ಪಿಸಿರುವುದನ್ನು ನೋಡಿದರೆ ನಮಗೆ ನಾಚಿಕೆಯಾಗುವುದಿಲ್ಲವೆ? ನಮ್ಮ ಕರ್ತವ್ಯವನ್ನು ಘಂಟಾಘೋಷವಾಗಿ ಹೇಳಿ, ನಾಚಿಕೆ ಬಿಟ್ಟು ನಿದ್ದಿರುವುದು ಅಪರಾಧಕರವಾದುದಲ್ಲವೆ, ನಮ್ಮ ಹೆಂಡಿರೂ, ತಂಗಿಯರೂ ಬಂದಿರುವ ಕುಂದಕವನ್ನು ಕಳೆಯುವುದಕ್ಕೆ ಯತ್ನಿಸುವಾರದೆ? ಭರತಖಂಡದ ಸ್ವಾತಂತ್ರ್ಯದಲುವಾಗಿ ಸರ್ವರೂ ಒಟ್ಟಾಗಿ ಧೃಢವಾಗಿ ಕಾಲಾಲು ನೊಂಟಿದನ್ನು ಬಿಗಿಯಾಗಿ ಕಟ್ಟಿ ಪರಸ್ಪರ ಭುಜಬಲಸಿನತಾಯವನ್ನು ವಹಿಸುವುದಕ್ಕೆ ಇದಕ್ಕಿಂತಲೂ ಉತ್ತಮಕಾಲವು ದೊರೆತೀತೆ? ಇಂತಹ ಮಹಿಮೆಯುಕಾಲವು, ಪಟ್ಟಿನೆ ಕೃಷ ನೋರೆಯಿಲ್ಲದೆ ನಿಮಗಾಧಿಕ್ಯ ಸ್ವಾತಂತ್ರ್ಯದಲುವಾಗಿಯೂ, ಭಾರತಮಾತೆಯಲುವಾಗಿಯೂ, ಧರ್ಮಕಾಲಸ್ಥರೂ ಈ ಸಂಕಲ್ಪ ಮಾಡಿರಿ! ದಾದಾಭಾಯಿ ನೌರೋಜಿ, ಗೋಪಾಲಕೃಷ್ಣ ಗೋಖಲೆ ಮೊದಲಾದ ಸ್ವದೇಶಾಭಿಮಾನಿಗಳು ಆರಂಭ ಮಾಡಿ ಗುಂಪು ಎಂಬಾಗಿ; ಮುಂದುಮುಂದಾಗಿ; ಸಾಲುಸಾಲಾಗಿ ಸ್ವಯಮೇವ ಬಂದು ಸಿಲ್ಲಿರಿ! ನಿಮ್ಮ ವಂಶಪಾರಂಪರ್ಯವಾಗಿ ಬಂದ ಬಿರುದ ರತ್ನವು ನಿಮ್ಮ ಧನುರಾಯಿಲ್ಲಿ ಸಂಘರಿಸುವುದಾದರೆ; ನಿಮ್ಮ ಹೃದಯಾಂತ ಹೃದಯದಲ್ಲಿ ಅಣುಮಾತ್ರವಾದರೂ ದೇಶಾಭಿಮಾನವಿದ್ದಲ್ಲಿ; ಹೊಸಪ್ರಾಣದಿಂದಲೂ, ಹೊಸ ಧೈರ್ಯದಿಂದಲೂ, ಹೊಸಶಕ್ತಿಯಿಂದಲೂ ನಿಮ್ಮ ನಾಡಿಯು ಬಡಿಯುತ್ತಿದ್ದರೆ; ಸೋಯಿಕಟ್ಟಿನಿಂತು ಭಾರತವನಾತೆಗೆಲುವಾಗಿ ಸುಪುತ್ರರು ಮಾಡಬೇಕಾದ ಕಾರ್ಯದಲ್ಲಿ ಉದ್ಯುಕ್ತರಾಗಿ, ಮಾತೃದೇವಾನಿರತರಾಗಲು ಪೂರ್ಣ ಪೂರ್ಣರಾಗಿ ವ್ರತವನ್ನಾಚರಿಸಬೇಕೆಂಬ ಕುತೂಹಲದಿಂದ ಕಂಕಣ ಬದ್ಧರಾಗಿ ಸಿದ್ಧಸಂಕಲ್ಪ ಮಾಡಿರಿ! ಈ ವ್ರತದಿಂದಲೇ, ಧರ್ಮ;

ಭರ್ಥ; ಕಾನು; ಮೋಕ್ಷವೆಂಬ ಹಸುನಿರ್ಧ ಫಲವ್ಯಂಟಾಗಬೇಕು. ಪ್ರೋತ್ಸಾಹವಿಲ್ಲದೆ ಸ್ವದೇಶೀಕೈಗಾರಿಕೆಗಳು ನಾಶವೊಂದುತ್ತಲಿವೆ, ಸ್ವದೇಶೀಕುಲಲ ಪದ್ಧೆಗಳು ಮಾಯವಾಗುತ್ತಲಿವೆ ಅನ್ನವಸ್ತ್ರಗೂಕೂಡ ಅನಕಾಶವಿಲ್ಲದೆ ನಾವು ಪರಾಧೀನರಾಗಬೇಕಲ್ಲ! ನಮ್ಮ ದೇಶದಸಂಪತ್ತು ಅನ್ಯರ್ಧಿಯಾಗಬೇಕಾದರೆ; ಮಹಾಪ್ರಾಣವಾಯದಂತೆ ಕೊಟ್ಟುಕೊಂಡು ಹೋಗುವುದನ್ನು ತಡೆಯಬೇಕಾದರೆ; ನಮ್ಮ ದೇಶೋನ್ನತಿಯನ್ನು ಜಯಿಸುವುದಾದರೆ.—ಹಾಗೆ ಇಷ್ಟಪಡುವರಾದರೆ; ಮನಸ್ಸಿನಲ್ಲಿ ದೃಢಸಂಕಲ್ಪ ಈ ಪ್ರತಿಜ್ಞೆಯನ್ನು ನಿತ್ಯ ವ್ಯಾಗ್ರದಲ್ಲಿರಿಸಿ! ರಾಜಕೀಯು ಸ್ವಾತಂತ್ರ್ಯಸಾಧನೆಗೆ ಇದೇಮೂಲಾಧಾರವಾದ ಅಸ್ತ್ರವಾಗ! ಪರಾಧೀನವೆಂಬೋಗಕ್ಕೆ ಇದೀಗ ಸಂಜೀವನ ಭಾರತೀಯರು, ತಮ್ಮ ಮಾನ್ಯಸೇವಾನಿರತರಾಗುವುದರಲ್ಲಿ ಪರಾಪ್ತಿಯಾಗುವುದೆಂದು ಅರಿಯಬಹುದೇನು ಅವಶ್ಯವೆ?

ಇದೇವಿಚಾರದಲ್ಲಿ ಬಾಸುಸುರೇಂದ್ರ ನಾಥರವರು ಹೇಳುವುದೇನೆಂದರೆ:— ಈ ಸಂಕಲ್ಪವನ್ನು, ಸುತ್ತಲೂಬೆಳಗಿ; ಎಲ್ಲ ಕಡೆಗಳಲ್ಲಿಯೂ ಪ್ರಚಾರಮಾಡಿ, ಪಕಾಕಡೆಯನ್ನು ಸುಟ್ಟಿ ಅಂಕುಶ್ಮಿದಲ್ಲಿ ಉನ್ನತವಾಗಿ ಎತ್ತಿ ಹಿಡಿಯಿರಿ; ಘೋಷಿಸಿರಿ; ಪ್ರತಿಯೊಂದು ಗ್ರಾಮದಲ್ಲಿಯೂ, ಪ್ರತಿಯೊಂದು ತಾಲ್ಲೂಕಿನಲ್ಲಿಯೂ, ಪ್ರತಿಯೊಂದು ಪಟ್ಟಣದಲ್ಲಿಯೂ, ಪ್ರತಿಯೊಂದು ಮನೆಯಲ್ಲಿಯೂ ಇದನ್ನು ಪಠಿಸಿರಿ; ಈ ಘೋರಣೆಯ ಶುಭವಾರ್ತೆಯನ್ನು. ನಮ್ಮ ರಾಷ್ಟ್ರದ ಪ್ರತಿಯೊಂದು ಸಂದುಗೊಂದಿಗಳಲ್ಲಿಯೂ ಮತ್ತು ಅಭ್ಯುನ್ನತಮೂಲೆಯಲ್ಲಿಯೂ ಒಯ್ದು ಪ್ರಸಿದ್ಧಪಡಿಸಿರಿ! ಹೋಟ್ಟಿಗಿಲ್ಲದ ಶ್ರಮವನ್ನು, ಕ್ಷಾಮದಕಷ್ಟವನ್ನೂ, ದಟ್ಟದರಿದ್ರವನ್ನೂ ತಪ್ಪಿಸಿಕೊಳ್ಳಬೇಕಾದರೆ ಸ್ವದೇಶೀ ಪ್ರಮಾಣಮಾಡಿ ಕೈಗಾಂಕೆ ಮತ್ತು ರಾಜಕೀಯ ಸ್ವತಂತ್ರವನ್ನು ಪಡೆಯಲು ವಜ್ರಸಮಾನವಾದ ಅಸ್ತ್ರಾಧಾರವನ್ನು ಹಾಕಿದೇಕು. ಸರ್ವತ್ರ ಸ್ವದೇಶಿಮಯವಾಗಲಿ! ಮನೋಸಾಕಕ್ಷರ್ಮಗಳಲ್ಲಿಯೂ ಸ್ವದೇಶೀ ಆಚರಣೆಯಿರಲಿ! ಲೋಕೋಪಕಾರಕಕ್ಕೋಸುಗ, ಸಮಸ್ತವನ್ನೂ ಸುತ್ಯಾಗಮಾಡಿ ಪ್ರಾಣವನ್ನಾದರೂ ಒಪ್ಪಿಸತಕ್ಕ ಪೂರ್ವಿಕರ ಗುಣಸ್ವಭಾವವನ್ನು ಜ್ಞಾಪಕಕ್ಕೆ ತಂದುಕೊಳ್ಳಿರಿ. ಮೀಗೆ ಮಾಡುವುದರಿಂದಲೇ, ಭಾರತಮಾತೆಯನ್ನು ಉನ್ನತಪದವಿಗೇರಿಸಿ; ಉತ್ಕೃಷ್ಟವಾದ ಸೀರೆದಲ್ಲಿ ಕುಳ್ಳಿರಿಸಿ; ಮುಖಸೌಂದರ್ಯವನ್ನು ಪ್ರದರ್ಶನಗೊಳಿಸಿ. ಶಾಶ್ವತಯಪಕ್ಷಿಂಟ್ರಕೆಯಲ್ಲಿ ನಿರಮಾನಂದವನ್ನು ಪಡೆಯುವಿರಿ!

ರಷ್ಯಾಸ್ವಾತಂತ್ರ್ಯ.

ಕಳೆದವಾರ ಸ್ಥಳಸಂಕೋಚದಿಂದ ಯುದ್ಧವಾರ್ತೆಯನ್ನು ಮಾತ್ರ ಬರೆಯಲಿಲ್ಲ. ಬ್ರಿಟಿಷರು ಒರ್ಮನಿಯವರಿಂದ ಶ್ಯಾಂಬೆಬ್ಬಾಲ್ಕ್ಯವನ್ನು ಗೆದ್ದುಕೊಂಡರು. ಒರ್ಮನಿಯವರು ಹಾಗೆ ಕಳೆದುಕೊಂಡ ಆ ಪ್ರಾಂತ್ಯವನ್ನು ಪ್ರಜಾಪ್ರತಿನಿಧಿಗಳಿಂದ ತಮ್ಮವರಪಡಿಸಿಕೊಳ್ಳಬೇಕೆಂದು ಬಯಲಾಗಿ ಹೋರಾಡಿದರು. ಅದರೆ ಪ್ರಯೋಜನವೇನೂ ಆಗಲಿಲ್ಲ. ಒಂದು ರಾಜ್ಯವನ್ನು ಮಾತ್ರ ಅನೇಕರಾಜ್ಯಗಳನ್ನದಿಂದಲೂ, ಸಿಬಗುಂಡುಗಳ ಸಾಮಗ್ರಿಗಳ ನಷ್ಟದಿಂದಲೂ ಆಕ್ರಮಿಸಿಕೊಂಡರು. ರಷ್ಯನರು ಒರ್ಮನಿಯವರೊಂದಿಗೆ ಸಮಾಧಾನದ ಕರಾರನ್ನು ಮಾಡಿಕೊಂಡಿರುತ್ತಾರೆ. ಆ ಪ್ರಾಂತ್ಯದಲ್ಲಿ ಯುದ್ಧವು ಡಿಸೆಂಬರ್ ತಿಂಗಳು 17 ರಿಂದ ಜನವರಿ 11 ರ ಮಟಿಗೆ ನಿಲ್ಲಿಸಲ್ಪಟ್ಟಿರುವುದು. ರಷ್ಯಾರಾಜ್ಯದೊಳಗೆ ಗಲಭೆಯು ಮೊದಲಿನಂತೆಯೇ ಇರುವದು. ಇಂತಪಾಪವೇಳೆಯಲ್ಲಿ ರಷ್ಯಾಕ್ಕೆ ನೇರಿದ್ದ ಫ್ರಾಲಿಂದಾ ಸೀಮೆಯು ಸ್ವತಂತ್ರರಾಜ್ಯವಾಯಿತು ಕಾಸಕ್ ಎಂಬ ಅನ್ಯ ಸೈನಿಕರು ಈಗ ಅಲ್ಲಿ ಹೊಸದಾಗಿ ಏರ್ಪಾಡಾಗಿರುವ ಸರಕಾರದ ಪೋಲೆ ತಿರುಗುತ್ತಿದ್ದರುವರು. ಆ ಸೈನ್ಯಾಧಿಕಾರಿಯೇ ಬೇರೆ ಸರಕಾರವನ್ನು ಪಡೆಯಬೇಕೆಂತಿರುವುದು. ಇಟಲಿಯಲ್ಲಿ ಸೈನಿಕರು ಕಟ್ಟುಗಳಾದ ಒನ್ನತಿ ಮತ್ತು ಎಸ್ಪ್ರಯವಾದಸ್ಸು ಇಂದಪಾಗಲ್ಲಾ ಮೋರಾಡಿ ಹಿಮ್ಮೆಟ್ಟಿಸುತ್ತ ಫ್ಯೂಮೆಯ ದಿಂದ ದೇಶವನ್ನೂ, ಸೈನ್ಯವನ್ನೂ ಕಾಪಾಡಿಕೊಂಡಿದುವರು. ಕಟ್ಟುಕಟ್ಟಿ ದವರು ಸೋಕಾರ್ಲಾ ಜೊಸೆಫೊಸ ಸೈನ್ಯದೊಡನೆ ಒಂದು ಸಗ್ಗತ್ತರು ವರು. ಮತ್ತೆ ಹಿಮ್ಮೆಟ್ಟುತ್ತಲಿರುವರು. ಪಾಲಸ್ತೈನ್‌ನಲ್ಲಿ ಯೂದಾಸಲೇ ಪಟ್ಟಣವು ಬ್ರಿಟಿಷರ ವಶವಾಯಿತು. ಟರ್ಕಿಯವರು ಕೈತಪ್ಪಿಹೋಯಿತು. ಅಲ್ಲಿನ ರಾಜ್ಯಭಾರವನ್ನು ಬ್ರಿಟಿಷ್ ಸರಕಾರದವರೇ ವಹಿಸಿಕೊಂಡು, ಪ್ರಜೆಗಳಿಗೆ ಯಾವ ವಿಷಯದಲ್ಲಿಯೂ ಅನಾವಶ್ಯಕವಾಗದಂತೆ ನಡೆಯಲು ಒಬ್ಬ ಗೌರ್ನರನ್ನು ನೇಮಿಸಿರುತ್ತಾರೆ. ಬ್ರಿಟಿಷ್ ಸೈನ್ಯವು ಬೇಗಾಗಿ ನಡಯುವ ನಮುದ್ರಕ್ಕೆ ಸೇರಿವವರೆಗೆ ಮುಂದಕ್ಕೆ ನುಗ್ಗಿರುತ್ತಾರೆ.

ಮಿತ್ರಸೈನ್ಯದಲಿಯ ತೀರಪಟ್ಟಣಗಳಿಗೆ ಪ್ರಯಾಣಮಾಡುತಲಿದ್ದ ಹಡಗುಗಳಲ್ಲಿ 13 ದೊಡ್ಡವೂ, 8 ಸಣ್ಣವೂ ನೀರುಪಾಲಾದವು. ಇಟಲಿಯವರ ಕೆಲವು ಹಡಗುಗಳು ತ್ರಿಪೆಸ್ತಾನಗರದ ತೀರಸೋಕ್ಕೆ ಹೋಗಿ ತುಬಾ ಅನಾಮತವನ್ನು ಮಾಡಿಬಂದವು. ಅಲೆಸಿಂಡ್ರಿಯದವರ ಹಿಸ್ಟ್ರಿಯಾ ಜಾತಿಯ ಹಡಗೆಂದು ಮುಳುಗಿಸಲ್ಪಟ್ಟಿತು. ಸ್ಪೇಯಿನ್‌ದೇಶದವರ ದೊಂದು ಹಡಗು ಜರ್ಮನಿಯವರ ಸಬ್‌ಮರೀನ್ ಬಂದಿಂದ ತುಂಬ ಜಾಯ ಪಟ್ಟಿತು. ಇದುಂದ ಸ್ಪೇಯಿನ್ ದೇಶೀಯರಿಗೆ ಒರ್ಮನರಿನೇಕಲೆ ಒಮ ಆಗ್ರಹವು ಹುಟ್ಟಿರುವುದು.

ವೈಜ್ಞಾನಿಕ ಸಂಗ್ರಹ.

ಒರುವ ಜನರು ಒಂದರಿಂದ ಬೆಂಗಳೂರು ಕೆಜ್ಜಾಳದ ಮೋಕ್ಷಸ್ಥಳದಲ್ಲಿ ರಾಗಿ ಮತ್ತು ಭತ್ತವನ್ನು ಒಕ್ಕುವ ವಿಧಾನದ ಸುಲಭವಾರವು ನಡೆಯುವುದು.

ಕಳೆದ 12 ನೆಯ ತಾ|| ಬುಧವಾರ ತುಮಕೂರು ಸಂಜೀವೇಪೆಯಲ್ಲಿ ಮಾ|| ಜಿ. ಚೆನ್ನವೀರಪ್ಪನವರ ಗಾಣಿಜಕಾರ್ಖಾನೆಯ ಪ್ರಾರಂಭೋತ್ಸವವು ಅಲ್ಲಿಯ ಜೆಜ್ಯೂಟಿಕಮಿಷನರ್‌ದವರ ಅಧ್ಯಕ್ಷತೆಯಲ್ಲಿ ನಡೆಸಲ್ಪಟ್ಟಿತೆಂದು ತಿಳಿದುಬಂದಿದೆ.

ಈ ತಿಂಗಳು 27 ರಲ್ಲಿ ಕಲ್ಕತ್ತೆಯಲ್ಲಿ ನಡೆಯುವ ಸಮಗ್ರಭಾರತಖಾಂಪಿಕಸೇವಾಸಭೆಯ ಅಧ್ಯಕ್ಷತೆಯನ್ನು ಮಾ|| ಎಂ. ಕೆ. ಗಾಂಧಿಯವರು ವಹಿಸಿರುತ್ತಾರೆ.

ಜೊಯಾಮು ಆಧಿವಕ್ಯದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಬಲಾತ್ಕಾರವಾಗಿ ಆಚರಣೆಗೆ ತರಬೇಕೆಂಬ ಮಸೂದೆಯು ಅಂಗೀಕೃತವಾಗಿ, ಪ್ರಸ್ತುತದಲ್ಲಿ ಮ್ಯುನಸಿಪಲ್ ನಮಹದ್ದಿನಲ್ಲಿರುವ ಭಾಗಗಳಲ್ಲಿ ಅಮಲಿಗೆ ಬರುವುದು.

ಮದರಾಸ್ ಆಧಿವಕ್ಯದಲ್ಲಿ ಆಜೆಗೆ ಆಜೆಗೆ ಬಂದು ಬಯಳ ಚರ್ಚಾಸ್ಪದವಾಗಿದ್ದ ೪೫ ನೆಯ ಸಕ್ಯುಲರನ್ನು ಮದರಾಸ್ ಸರಕಾರದವರು ತಿದ್ದಿ ಕಾಲೇಜಿನಲ್ಲಿ ಓದುವ ವಿದ್ಯಾರ್ಥಿಗಳು ರಾಜಕೀಯ ಪಾರ್ಟಿಗಳ ಸಭೆಗೆ ಹೋಗಬಹುದೋ ಬಾರದೋ ಎಂಬುದನ್ನು ಅಯಾ ಕಾಲೇಜಿನ ಪ್ರಿನ್ಸಿಪಾಲರೇ ನಿರ್ಧರಿಸುವಂತೆ ಆ ಅಧಿಕಾರವನ್ನೆ ಅವರಿಗೆ ಒಪ್ಪಿಸಿರುವರು.

ಜೊಹಾನ್ಸ್‌ಬರ್ಗ್‌ನಲ್ಲಿ ಒನರು ತಿರುಗುವೇ ತಮ್ಮ ವೃತ್ತಿಯಾಗಿ ವರ್ತಿಸಿಕೊಂಡಿರುವುದನ್ನು ತಪ್ಪಿಸುವುದಕ್ಕಾಗಿ ಒಂದು ಕಾನೂನನ್ನು ಏರ್ಪಡಿಸಲು ಸರ್ಕಾರದ ಮತ್ತು ಸರ್ಕಾರೇ ಉದ್ಯೋಗದ್ದರಲ್ಲದ ಸಭೆಕರು ಒಂದು ಸಭೆಯನ್ನೇರ್ಪಡಿಸುವುದು ಅವಶ್ಯಕವೆಂದು ಅನುಮಾನಿಸಿದ್ದಲ್ಲದೆ ಈ ಸಭೆಯಲ್ಲಿ ಸಂಪೂರ್ಣವಾಗಿ ಸರಕಾರೇ ಉದ್ಯೋಗದ್ದರಲ್ಲದ ಸಭೆಕರೇ ಇರುವುದು ಯೋಗ್ಯವೆಂತೆಂದೂ, ಅವರನ್ನೆ ಪೊಲೀಸ್‌ಕಮಿಷನರ್ ಮೊದಲಾದ ಸರಕಾರದ ಅಧಿಕಾರಿಗಳು ಸಹಾಯ ಮಾಡಬೇಕೆಂತಲೂ ಸರಕಾರದವರು ತಿಳಿಸಿದರು.

ಸಮಗ್ರಭಾರತೀಯ ಮುಸಲ್ಮಾನ್ಯ (ಆಲ್ ಇಂಡಿಯಾ ಮೊಸ್ಲಂ ಲೀಗ್) ಸಭೆಯು ಈ ಡಿಸೆಂಬರು ತಿಂಗಳು 30 ಮತ್ತು 31 ರಲ್ಲಿ ಕಲ್ಕತ್ತಾನಗರಿಯಲ್ಲಿ ನಡೆಯುವುದು.

ಗುಜರಾತಿನಲ್ಲಿ ವಿಶೇಷ ಮಳೆಯಿಂದಲೂ ಮತ್ತು ಇಲಿಗಳ ಹಾವಳಿಯಿಂದಲೂ ಧಾನ್ಯ ಕ್ಷಾಮವು ಉಂಟಾಗುವುದೆಂದು ಅಲ್ಲಿ ಜನರು ಹೆದರುತ್ತಿರುವರು. ವ್ಯವಹಾರಿಗಳೆಲ್ಲರೂ ಕೈರಾ ಡಿಸ್ಟ್ರಿಕ್ಟಿನಲ್ಲಿ ಈ ತಿಂಗಳು ೧೫ನೇ ತಾ|| ಸಭೆ ಸೇರಿ ಅವುಗಳ ನಾಶಕ್ಕೆ ತಕ್ಕ ಏರ್ಪಾಡನ್ನು ಮಾಡಬೇಕೆಂದೂ ಮತ್ತು ಈ ವರ್ಷದ ಕಂದಾಯವನ್ನು ಸರ್ಕಾರದವರು ಕ್ಷಮಿಸಬೇಕೆಂದೂ ಕೇಳಬೇಕೆಂದು ಠರಾವು ಮಾಡಿ ಸರ್ಕಾರಕ್ಕೆ ತಿಳಿಸುತ್ತಾರೆ ಅದರಂತೆಯೇ ಸರ್ಕಾರದವರು ಪ್ರಜಾಕ್ಷೇಮಕ್ಕೆ ಬೇಕಾದ ಅನುಕೂಲ್ಯಗಳನ್ನೆಲ್ಲಾ ಮಾಡುವರೆಂದು ನಂಬುತ್ತೇವೆ.

ಸಂಯುಕ್ತಸಂಸ್ಥಾನದಲ್ಲಿ ಮಹಮ್ಮದೀಯರಿಂದ ಪ್ರಕಟಿಸಲ್ಪಡುತ್ತಿದ್ದ "ನ್ಯೂ ಎರಾ" ಎಂಬುವ ಇಂಗ್ಲೀಷ್ ವಾರಪತ್ರಿಕೆಯೊಂದನ್ನು ನಾಗ್ಪುರದಲ್ಲಿರುವ ಮುಹಮ್ಮದೀಯ ದೇಶಾಭಿವಾನಿಗಳ ಬಹುಗಡೆಗೋಸುಗ ನ್ಯಾಯವಿರುದ್ಧವಾಗಿ ನಡೆಯಿಸಿದ ಆ ಸರಕಾರದವರು ನಿಲ್ಲಿಸಿರುತ್ತಾರೆ. ಮತ್ತು ಹೊಗೆಯಾಗಿ ಕೊಟ್ಟಿದ್ದ ಹಣವನ್ನು ಸರ್ಕಾರಕ್ಕೇನೇ ಸೇರಿಸಿಕೊಂಡಿರುವಿಟ್ಟರು.

"ಬೆಂಗಳೂರು ಸಿಟಿ ದೊಡ್ಡ ಪೇಟೆಯಲ್ಲಿರುವ ವರ್ತಕರು 12—12—17 ನೆ ತಿಂಗಳು ದಿನದ ಜರುಗಿದ ಅವರ ಪೆ ಉತ್ಸವದ ಜ್ಞಾಪಕಾರ್ಥವಾಗಿ ಸಾರ್ವಭೌಮರಲ್ಲಿ ನಮಗಿರುವ ಭಕ್ತಿ ವಿಶ್ವಾಸವನ್ನು ತೋರ್ಪಡಿಸಲು ಅದೇ ದಿವಸ ದೊಡ್ಡಪೇಟೆಯಲ್ಲಿ ಬೆಂಗಳೂರು ಸಿಟಿ ಮತ್ತು ಕಂಟೋನ್‌ಮೆಂಟಿನ ಬಡಜನರಿಗೂ ಅಂಗವಿಲೀನರಿಗೂ ಧರ್ಮಾರ್ಥವಾಗಿ ಸುಮಾರು 8—10 ಸಹಸ್ರಜನಕ್ಕೆ ಅನ್ನದಾನಮಾಡಲು ನಿಶ್ಚಯಿಸಿ ಮುನಿಸಿಪಾಲ್ಟಿಯವರ ಉತ್ತರವನ್ನು ಕೇಳಿದ್ದಕ್ಕೆ ತಾ|| 10—12—17, 1210 ನೆ ಇಂಪಾರ್ಟೆಂಟು ಉತ್ತರವನ್ನು ಕೊಟ್ಟು ವರ್ತಕರ ಕೋರಿಕೆಯಂತೆ ಠಸ್ಸಿಟು ಮಗ್ಗೆರೆ ವಿಸರ್ಜನೆಯನ್ನು ಮುನಿಸಿಪಾಲ್ಟಿಯವರು ಮಾಡಿಕೊಡುವಂತೆಯೂ ತಿಳಿಸಿ 11—12—17 ನೆ ತಾರೀಖಿನೆಲ್ಲ ಊಟವಲ್ಲೆಲ್ಲಾ ಬಡಜನರ ತಿಳಿಪಳಿಕೆ ಒಗ್ಗೆ ಟೂಂ ಟೂಂ ಹಾಕಿಸಿದ ನಂತರ ಆದಿನ ಮಧ್ಯಾಹ್ನ ನೇಯಿಗೆಗೆ ಹುರುಪು ಮಾಡಿ ಕೆಲಸಗಳು ಜರುಗುತ್ತಿರುವಾಗ್ಗೆ ಆದಿನ ಸಾಯಂಕಾಲ ಮನಸಿಪರ್ ಪ್ರೆಸಿಡೆಂಟುಗಳು ಮೊದಲು ಅಡ್ಡಾರನ್ನು ರದ್ದುಮಾಡಿಸಿ ಕಾಲಾರಾಕಾರಣವನ್ನು ತೊಲಸಿ ಕೊಡಲು ಆರ್ಡರನ್ನು ರದ್ದುಪಡಿಸಿರುತ್ತಾರೆ. ಆದರೆ ನವಂಬರು ೭ನೆ ತಾರೀಖು ಬಂಗಾಳ್ಯು 20—12—17 ನೆ ತಾರೀಖಿನ ಮುನಿಗೂ ನಗರ್ತರಪೇಟೆ, ದೇವಾಂಗದಪೇಪ, ಪಾರ್ಲೆಟ್ಟು, ಬಳ್ಳಾಪುರದ ಪೇಟೆ, ಕಾವಾಡಿಗ ರೇವಣಾಪೇಟೆ, ವತ್ತು ಕೆಲವಾಪೋಡು ಇನ್ನು ಇತರ ಪೇಟೆಗಳಲ್ಲೆಲ್ಲಾ ಅನೇಕ ಬಡಜಗ್ಗರಿಗೆ ಅನ್ನ ದಾಕಸ್ತಿತ್ತೆ ಇರುವದು ಬೆಂಗಳೂರು ನಿವಾಸಿಗಳೆಲ್ಲರಿಗೂ ತಿಳಿದಿದ್ದಾಗ್ಯೂ ದೊಡ್ಡಪೇಟೆಯವರಿಗೆ ಕಂತೀತಿಯಾಗಿ ಬಡಜನರಿಗೂ ಸಹಾ ಈ ವರ್ತಕರಲ್ಲಿ ನಂಬಿಕೆ ಬಲ್ಲದಂತೆ ಮಾಡಿದ್ದಕ್ಕಾಗಿ ನಮ್ಮ ವೈಸನವನ್ನು ಅನರ್ ಜೆ ವಿವರ ಮಾಡಿಸುವದು ಅಸಂಗತಿಯೆಂದು ತಿಳಿದು ವಿಶಂಬರು 21—12—17 ನೆ ದಿನದ ಹಿಂದುದಿನ ಮಾತ್ರ ವರ್ತಕರು ತಮ್ಮ ವೈಸನವನ್ನು ತೋರ್ಪಡಿಸುವದಕ್ಕಾಗಿ ತಮ್ಮ ಅಂಗಡಿಗಳನ್ನು ಮುಚ್ಚಿ ವ್ಯಾಪಾರವನ್ನು ನಿಲ್ಲಿಸಿರುತ್ತಾರೆ' ಎಂದು ದೊಡ್ಡಪೆಟೆಯ ಅನ್ನದಾನಮಾಡಲು ವಿಚಾರಿಸಿದ್ದ ಸರ್ಕಾರದವರು ತಿಳಿಸಿರುತ್ತಾರೆ.

ವಿವೇಕೆ ವಿಷ್ಣು ಕೊಲ್ಲಾಮಲೆ?

(Communicated.)

(ಹಿಂದಿನ ಸಂಚಿಕೆಯಿಂದ ಮುಂದಕ್ಕೆ ಸಂಗಡಿಸಿದೆ.)

ಮೈಸೂರುಸೀಮೆಯಲ್ಲಿ ಹಿಂದುಳಿದ ಮಹಾಶಯರ ಮಹಾಸಭೆಯೊಂದು ಮೈಸೂರುಪಟ್ಟಣದಲ್ಲಿ ನೆಲಸ್ತರಂತೆ. ಮಾ|| ಗೌರವಾದ ಬಸನಯ್ಯನವರೂ, ಬಸುಮಯ್ಯನವರೂ, ಭಾಷಣಗಳನ್ನು ಕೊಟ್ಟರಂತೆ. ಬ್ರಾಹ್ಮಣೇತರರಿಂದ ಎಲ್ಲಾ ಕೋಮುಜನರ ಪ್ರತಿನಿಧ್ಯವು ನಿಯಮನಿರ್ಮಾಣಾದಿ ಸಭೆಗಳಲ್ಲಿ ಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸುವರಂತೆ. ಜೋಡೆನ್ನುವರಾರು? ವಿದುದ್ಭಾಹಿದ್ಯಾಯವಿರುವರೂ ಕೆಲವಿರುವರು! ಆದರೆ ಬ್ರಾಹ್ಮಣರ ಅಧಿಪತ್ಯಾಯವಾಯ್ತೆ? ಈಗ ನಿಮೆ ನಿಯಮನಿರ್ಮಾಣಸಭೆ? ಕೊಡದೆಂದು ಹೇಳುವ ಪ್ರತಿನಿಧಿಗಳನ್ನು-ಬ್ರಾಹ್ಮಣರೆಂಬ ಅಧಿಮಾನದಿಂದ ಆರಿಸಿ ತೆಗೆದಿರೆಯೇ? ಹಾಗಾದರೆ ಬ್ರಾಹ್ಮಣೇತರವಸಭಿಕರಿಗೆ ಬ್ರಾಹ್ಮಣರಿಂದಿಲ್ಲವೂ 'ಓಟ್ಸನ್ನು' ಕೊಟ್ಟಿಲ್ಲವೆ? ವಿಚಾರವಂತರು! ಅವಂಬದ್ಧಪ್ರಲಾಪಗಳಿಗೆ ಉತ್ತರ ಬರೆಯಿತ್ತ ಕಳಿತರೇನುಫಲ? 'ಸಂಪದಭ್ಯುದಯ' ಕ್ಕೆ ವಕೀಲನಾಗಿ ನಿಲ್ಲಲು ಎನ್ನುವುದಂದಿ ಬ್ರಾಹ್ಮಣರು ವಕಾಲತ್ತು ಕೊಟ್ಟಿರುವರು? 'ಸಂಪದಭ್ಯುದಯ' ವು ಬ್ರಾಹ್ಮಣರ ಅಭಿವೃದ್ಧಿಗಾಗಿಯೇ ಹುಟ್ಟಿದೆಯೆಂದು ಯಾರು ತಾನೆ ಏನೆಟ್ಟಿ ಧೈರ್ಯದಿಂದ ಹೇಳಬಲ್ಲರು. ಆವರೆ, ನಾವು 'ವೈಸೂರು ಸ್ಟಾರ್' ಪತ್ರಿಕೆಯು ವೀರಶೈವರಿಗಾಗಿಯೇ ಹುಟ್ಟಿ ವೀರಶೈವಮತಾಶಯವು ಬಂದಲೇ ಪುಸ್ಪೋಷಿಸಲ್ಪಡುತ್ತಿರುವುದೆಂದು ಘಂಟಾಘೋಷವಾಗಿ ಎಚ್ಚರಿಸೋಣವಾದರೂ ಕೇಳಬಲ್ಲವೆ! ಸಂಪದಭ್ಯುದಯಕ್ಕೆ ಬ್ರಾಹ್ಮಣರ ಯಾವ ಮಹಾಸಭೆಯವೂ ಹಣಸುಖವುದಿಲ್ಲ! ಬ್ರಾಹ್ಮಣರಲ್ಲಿ ಅರುಳಾಳ, ಒಂಟಿಮುರಿ ದೇಶಾಯರಂತಹ ಮತಾಭಿವಾನಿಗಳಾರೂ ಸರ್ವಸ್ವವನ್ನೂ ಸೂರೆಕೊಟ್ಟವರಿಲ್ಲ.

ಅಗಲಿ. ನಿಯಮನಿರ್ಮಾಣಸಭೆ, ಪ್ರಜಾಪ್ರತಿನಿಧಿಸಭೆ, ತಾಲೆಲ್ಲೀಕು ಗ್ರಾಮಕೋರ್ಟುಗಳಿಗೆಲ್ಲಾ ಕೋಮುವಾರು ಪ್ರತಿನಿಧಿಗಳು ಬರಲಿ. ಅದನ್ನೆ, ಸ್ಟಾರ್ ಪತ್ರಿಕಾಧಿಪರು ತಮ್ಮ 11 ನೆಯ ತಾರೀಖಿನ ಸಂಚಿಕೆಯಲ್ಲಿ "ಜೈ. ಗೋಖಲೆಯವರೂ ಸ್ಪಷ್ಟವಾಗಿಯೇ ಅಭಿಪ್ರಾಯ ಕೊಟ್ಟಿರುವರು. ಈ ಗಣ ಸ್ವರಾಜ್ಯವಾದಿಗಳಲ್ಲಿ ಅಗ್ರಗಣ್ಯರಾದ ಮಾ|| ಬಾಲಗಂಗಾಧರ ತಿಲಕರೂ ಕೂಡ ತಮ್ಮ ಮರಾಠಿ ಕೇಸರಿ ಪತ್ರಿಕೆಗಳಲ್ಲಿ ಈ ಅಭಿಪ್ರಾಯವನ್ನು ಅನುವೋದಿಸಿರುವರು." ಎಂದು ಬರೆದಿರುತ್ತಾರೆ. ಇದಕ್ಕೆ ಸರಿಯಾದ 'ಪಾಪಕ್' ಗಳನ್ನು ಆ ಪತ್ರಿಕಾಕರ್ತರು ಕೊಟ್ಟು ನಮ್ಮ ಅಂಧಶ್ರದ್ಧೆಯನ್ನು ತೋರಿಸಬಲ್ಲರೋ ಅಥವಾ ಕೇವಲ ಸ್ವಾಭಿವಾನದಿಂದ ಉಂಟಾದ ತಮ್ಮ ಅಂಧಶ್ರದ್ಧೆಯನ್ನೂ ಪ್ರಕಾಶಪಡಿಸಿಕೊಳ್ಳುವರೊ? ಗೋಖಲೆಯವರು ಎಲ್ಲಿ ಹೇಳಿರುವರು, ಹೇಳಿದ್ದರೂ ಸರಿ; ಇಲ್ಲದಿದ್ದರೆ ಸದ್ಗತಿಯನ್ನೆನ್ನಿವಿನ ಬ್ರಾಹ್ಮಣರಾದ ಅವರ ಅಕ್ಕನನ್ನು ಸ್ಟಾರ್ ಪತ್ರಿಕೆಯ ಅಧಿಪತಿಗಳು ನಮ್ಮನ್ನೆ ಬಿಡರಲ್ಲ!

ಮಿ|| ಮಹಾಂತೇಗೌಡರವರು ರಾಷ್ಟ್ರೀಯಸಭೆ.

ಮಿ|| ಸಾಂಟೆಗೌರವರು ಧಾರವಾಡಕ್ಕೆ ಇಲ್ಲಿಯ ಜನಾಂಗಗಳ ರಾಜಭಕ್ತಿಯಿಂಗಳ ಆಲೋಚನೆಗಳನ್ನು ಕೇಳುವುದಕ್ಕೆ ಬಂದಿರುತ್ತಾರೆ. ಅಂತೆಯೇ ಸಾವಧಾನವಾಗಿಯೂ, ಒಬ್ಬೊಬ್ಬರಾಗಿಯೂ ಕೇಳುತ್ತಿರುವರು ಇವರವಾರ್ಯವು ರಾತ್ರಿಯಾಗಿ ಮುಗಿಯಲಿಲ್ಲ ಕೂಡಾವಾಗುವಂತೆ ಮಿ|| ರಾಮಚಂದ್ರರಾವ್ ಪೈತುಂಬಳಾಧ ಸೇವರರು ರಾಷ್ಟ್ರೀಯ ಮಹಾಸಭೆಗೆ ಚರಮಿಂತೆ ಅಭ್ಯಾಸಸಭೆಯೆನ್ನು ಕಳುಹಿಸಿದ್ದರು. ಒಂದೇಕಳದಲ್ಲಿ ರಾಮಭಾಗಿನ ಸಮೂಹವನ್ನು ಸ್ವತಃ ನೋಡಲು ಆಸಂಬಧವಾದ ಕಂದರ್ಭವಾಗಿದ್ದಿತು ಆದರೆ ಅವನು ಆಪ್ತಾವನ್ನು ತಳ್ಳಲಿಯಿಲ್ಲವೆಂಬುವನ್ನು ನೋಡಿದೆ ಬಹಳ ಆಶ್ಚರ್ಯ: ರಾಷ್ಟ್ರೀಯ ಮಹಾಸಭೆಯು—ಭಾರತಿಯರಾದ ಬಾಂಧವರಲ್ಲಿ, ಮಹಮ್ಮದೀಯರೂ, ಸಿಖ್ಖರಿಗಳೂ, ಅಲ್ಲದೆ ಕ್ರೈಸ್ತರೂ ಇತರಜಾತಿಗಳು ಪ್ರತಿನಿಧಿಗಳು ಪ್ರಾಂತವಾರಿಯಾಗಿ ಕೂಡಿಕೊಂಡು ತಮ್ಮ ಚರ್ಚೆಗಳನ್ನು ಸಜೆ ಮಾಡಲು ಒಟ್ಟುಗೂಡಿ ಕೂಡುವರ್ಕಳ. ರಾಷ್ಟ್ರೀಯಸಭೆ ಮತ್ತು ಸ್ವದಾಕ್ಯಸಭೆ ಇವರಿಗೆ ಸಮ್ಮೇಳನಕ್ಕೆ—ಭಿನ್ನಭಿನ್ನವಾದವೆಲ್ಲಾ ಅತ್ಯಾಲಕ್ಷಿಯಿಂದ ಸಭಾಯಿಯೇ ಇಂಬುಕಿಯವನ್ನು ರಾಷ್ಟ್ರೀಯ ಮಹಾಸಭೆಯಿಂದಲೇ ಸ್ಥಾಪಿತವಾಯಿತು ರಾಷ್ಟ್ರೀಯ ಮಹಾಸಭೆಯ ಸಭ್ಯರುಗಳಾವರು, ಯಾವ ಪ್ರಬುದ್ಧವೇ ಆಗಲಿ ಅಂತಹ ಕ್ರೈಸ್ತವಸಭೆಯ ಸ್ಥಳಕ್ಕೆ ಪಡೆಗಳು ಅನ್ನು ಉತ್ತಮವಾದ ಸಂಬಧವನ್ನು ಆತ್ಮದಿಂದ ಕೈಕೊಳ್ಳುತ್ತಿದ್ದವು ಅಂತಹ ರಾಜ್ಯಾಂಗವನ್ನೇರ್ಪಡಿಸಿಕೊಳ್ಳುವಂತಾ ಬ್ರಾಹ್ಮಣರು ಮುಕ್ತ

ವೈದ್ಯಕೀಯ ಆಯುರ್ವೇದ ಮೆಡಿಸಿನ್ ಕಾಲೇಜು, ಮೈಸೂರ್ ಫೋರೆಸ್ಟ್ ಸಾಮೋಧ್ಯಾಯಿ ಗೋಲಿಬಿ, ಮೆ ಸರ್ಕೆಸ್ಟ್ರೇಟಿನ್ ಪೌಂಡಾಯಿನ್ ಕಂ, ನಕ್ಷತ್ರದ ಕಾಲದ ಮೈ ಫೂಲ್‌ಎಂಪ್ರೈಸಿಂಗ್ಸ್, ಮೈ ಪಾಂಡಿಯ, ಮೈ ಲಿಂಕರ್ ಪೌಂಡಾಯಿನ ಮಹಾತ್ಮರಾದ ದೇಣಿಗೆದಾರರು ತಮ್ಮ ಆಮೆಲ್ಯವಾದ ಉಪಯೋಗಲಿಲ್ಲನ್ನೆಲ್ಲ ವಿನಿಯೋಗಿ ರಿಯು. ಅದು, ಫೂಬಿಕೊಡಲು ಬೇಗ್ಯವಾದ ಸ್ಥಿತಿಗೆ ತಂದಿರುವ ರೀಜಾಂಗದಾಗಿರುವುದು ಮೆ ಡಾ. ಬೆಗರವರು, ಹಿಂದೊಮ್ಮೆ ರಕ್ಕೆ ಒರಾವಿದಕ್ಕೆ ಮುಂಚಿ ಪಡಾಗಿಯೇ ಅವರ ಸಲಹಾಕರ್ತವ್ಯವ ಗೌರವಪೂರ್ವಕವಾಗಿ ಸ್ವೀಕರಿಸಿದ್ದಲ್ಲದೆ ಆವರು ಮೂಂಬೈಗವರ್ನಮೆಂಟಿನ ಸ್ಯಾನಿಟರಿ ಕಮಿಷನರ್ ಆಗಿದ್ದಾಗ ಅವರಿಂದ ಪಡೆದಿದ್ದ ಅಮೂಲ್ಯವಾದ ಸಲಹೆಗಳನ್ನು ಅನುಸರಿಸಿ ಆಸ್ಪತ್ರೆಯನ್ನು ಏರ್ಪಡಿಸಿದ್ದಾರೆ. ಡಾ. ಬೆಗರವರು ಸೂಚಿಸಿರುವ ಜಾಗದಲ್ಲಿ ಕಟ್ಟಡವನ್ನು ಕಟ್ಟಿಸಿ ಅದಕ್ಕೆ ಸಂಬಂಧಪಟ್ಟ ಸಾಮಾನುಗಳನ್ನು ಸಮಕೂರಿಸಿ ಆಸ್ಪತ್ರೆಯನ್ನು ಪ್ರಾರಂಭಿಸಲು ಸಿದ್ಧವಾಗಿರುವುದಾಗಿ ಮೈಸೂರ್ ಸರ್ಕಾರದವರು ಮೊನ್ನೆ ಸೆಪ್ಟೆಂಬರ್ ತಿಂಗಳಲ್ಲಿ ಸೂಚನೆ ಕೊಟ್ಟಿದ್ದರು. ಆದರೆ ಆಸ್ಪತ್ರೆಯ ಕಟ್ಟಡವು ಇನ್ನೂ ಪೂರ್ತಿಯಾಗಿ ಸಿದ್ಧವಾಗಿರಲಿಲ್ಲವಾದ್ದರಿಂದ ಆಸ್ಪತ್ರೆಯನ್ನು ಪ್ರಾರಂಭಿಸಲು ಸಾಧ್ಯವಾಗಿರಲಿಲ್ಲ. ಈಗ ಕಟ್ಟಡವು ಪೂರ್ತಿಯಾಗಿ ಸಿದ್ಧವಾಗಿರುವುದರಿಂದ ಆಸ್ಪತ್ರೆಯನ್ನು ಪ್ರಾರಂಭಿಸಲು ಸಾಧ್ಯವಾಗಿದೆ. ಆಸ್ಪತ್ರೆಯ ಸೂಪರಿಂಟೆಂಡೆಂಟರಾಗಿ ಡಾ. ಬೆಗರವರೇ ಇರುವರು. ಆಸ್ಪತ್ರೆಯಲ್ಲಿ ಸ್ತ್ರೀಯರಿಗೆ ಪ್ರತ್ಯೇಕವಾದ ವಿಭಾಗವಿರುವುದು. ಆಸ್ಪತ್ರೆಯಲ್ಲಿ ಸೇರಿಕೊಳ್ಳಲು ಬಯಸುವವರು ಡಾ. ಬೆಗರವರಿಗೆ ಅರ್ಜಿಯನ್ನು ಬರೆದು ಕಳುಹಿಸಿಕೊಡಬೇಕು. ಅರ್ಜಿಯನ್ನು ಬರೆಯುವಾಗ ಅವರು ಯಾವ ಜಾತಿಯವರು, ಅವರ ವಯಸ್ಸು, ಅವರ ವಾಸಸ್ಥಳ, ಅವರ ಕಾಯಿಲೆಯ ಸ್ವರೂಪ ಇವುಗಳನ್ನು ಸ್ಪಷ್ಟವಾಗಿ ಬರೆಯ